ಸೋಮವಾರ, ಜನವರಿ 30, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 30 | ಪುಟ 12 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ಕುರಿತ ವಿವರ ಇಲ್ಲಿದೆ..

ಸಂಖ್ಯೆ-ಸುದ್ದಿ
ಮಹಿಳೆಯೇ ಮನೆಯೊಡತಿ

ಸರ್ಕಾರಿ ಗೌರವದೊಂದಿಗೆ ಸಾರಥಿ ಅಂತ್ಯಕ್ರಿಯೆ 4
ಡಿಕೆಶಿ – ಸಿದ್ದರಾಮಯ್ಯ ಪ್ರತ್ಯೇಕ ಯಾತ್ರೆ ವೇಳಾಪಟ್ಟಿ ಸಿದ್ಧ 4
ಜೊಕೊವಿಚ್‌ಗೆ 22ನೇ ಗ್ರ್ಯಾನ್‌ಸ್ಲಾಮ್ 10
‘ಪ್ರಜಾಧ್ವನಿ’ 2ನೇ ಹಂತ: ‘ಪ್ರತಿಷ್ಠೆ’ ಪಣ 4

ಕೇಂದ್ರ–ರಾಜ್ಯ ಹಗ್ಗಜಗ್ಗಾಟ • ಭೂಸ್ವಾಧೀನದ ಕಗ್ಗಂಟು • 5 ಯೋಜನೆಗಳು 10 ವರ್ಷ ವಿಳಂಬ

ತೆವಳುತ್ತಿದೆ ರಾಜ್ಯದ ರೈಲು ಯೋಜನೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಯೋಜನಾ ಮೊತ್ತ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ನಡುವೆ ಹಗ್ಗಜಗ್ಗಾಟ, ಭೂಸ್ವಾಧೀನ ಸಮಸ್ಯೆ ಮತ್ತಿತರ ಕಾರಣಗಳಿಂದಾಗಿ ಕರ್ನಾಟಕದ ರೈಲು ಯೋಜನೆಗಳು ತೆವಳುತ್ತಾ ಸಾಗಿವೆ.

ಸುಮಾರು ₹10 ಸಾವಿರ ಕೋಟಿ ಮೊತ್ತದಲ್ಲಿ ರಾಜ್ಯದಲ್ಲಿ 9 ಹೊಸ ರೈಲು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೆಲವು ಯೋಜನೆಗಳ ಕಾಮಗಾರಿ ನಿಂತಲ್ಲೇ ನಿಂತಿದೆ. ಬಹುತೇಕ ಯೋಜನೆಗಳಿಗೆ ಭೂಸ್ವಾಧೀನದ ಗ್ರಹಣ ಎದುರಾಗಿದೆ. ಇದರಿಂದಾಗಿ, ಹಳಿಗಳಲ್ಲಿ ರೈಲುಗಳ ಓಡಾಟಕ್ಕೆ ಕಾಲ ಕೂಡಿಬಂದಿಲ್ಲ. ರಾಜ್ಯದ ಐದು ಯೋಜನೆಗಳು 10 ವರ್ಷಗಳಷ್ಟು ವಿಳಂಬವಾಗಿದೆ ಎಂದು ಕೇಂದ್ರ ಸರ್ಕಾರ ಪಟ್ಟಿ ಮಾಡಿದೆ.

ದಶಕ ವಿಳಂಬ: ಬಾಗಲಕೋಟೆ-ಕುಡಚಿ ಮಾರ್ಗ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದು 2010-11ರಲ್ಲಿ. ಈ ಯೋಜನೆಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ತಲಾ ಶೇ 50 ಮೊತ್ತ ಭರಿಸಬೇಕು ಎಂದು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಯೋಜನೆಗೆ ಬೇಕಿರುವ ಭೂಮಿಯನ್ನು ಕರ್ನಾಟಕ ಸರ್ಕಾರ ಉಚಿತವಾಗಿ ನೀಡಬೇಕು ಎಂದು ರೈಲ್ವೆ ಇಲಾಖೆ ಷರತ್ತು ವಿಧಿಸಿತ್ತು. 142 ಕಿ.ಮೀ. ಉದ್ದದ ಈ ಮಾರ್ಗದ ಆರಂಭಿಕ ಯೋಜನಾ ಮೊತ್ತ ₹816 ಕೋಟಿ ಆಗಿತ್ತು. ಅದು ₹1,530 ಕೋಟಿಗೆ ಏರಲಿದೆ ಎಂದು ಕರ್ನಾಟಕ ಸರ್ಕಾರ ಲೆಕ್ಕ ಹಾಕಿದೆ. ಈ ಪರಿಷ್ಕೃತ ಅಂದಾಜು ಮೊತ್ತಕ್ಕೆ ಸರ್ಕಾರ ಈಗಾಗಲೇ ಒಪ್ಪಿಗೆ ನೀಡಿ ಎರಡು ಸಲ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿದೆ. ಪರಿಷ್ಕೃತ ಯೋಜನಾ ಮೊತ್ತ ಹಂಚಿಕೆ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಹಮತಕ್ಕೆ ಬಂದಿಲ್ಲ. ಈ ಮಾರ್ಗ 2016ರಲ್ಲಿ ಕಾರ್ಯಾರಂಭ ಮಾಡಬೇಕಿತ್ತು. ಈ ಕಾಮಗಾರಿಗೆ ಈವರೆಗೆ ಯೋಜನಾ ಮೊತ್ತದ ಶೇ 25ರಷ್ಟು ವೆಚ್ಚ ಮಾಡಲಾಗಿದ್ದು, ಭೌತಿಕ ಪ್ರಗತಿ ಶೇ 32ರಷ್ಟು ಆಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಕಾಮಗಾರಿ 2026ರ ಡಿಸೆಂಬರ್‌ನಲ್ಲಿ ಪೂರ್ಣಗೊಳ್ಳಬಹುದು ಎಂದು ರೈಲ್ವೆ ಇಲಾಖೆ ಅಂದಾಜಿಸಿದೆ.

ಹಾಸನಕ್ಕೆ ಬರದ ರೈಲು: ಮಲೆನಾಡು ಭಾಗದ ಜನರಿಗೆ ಹೆಚ್ಚು ಅನುಕೂಲ ಕಲ್ಪಿಸುವ ಕಡೂರು–ಚಿಕ್ಕಮಗಳೂರು–ಸಕಲೇಶಪುರ ಬ್ರಾಡ್‌ಗೇಜ್ ರೈಲು ಮಾರ್ಗ 2017ರ ಮಾರ್ಚ್‌ನಲ್ಲಿ ಪೂರ್ಣಗೊಳ್ಳಬೇಕಿತ್ತು. ಕಾಮಗಾರಿಯನ್ನು 2026ರ ಡಿಸೆಂಬರ್‌ಗೆ ಮುಗಿಸುವ ಗಡುವನ್ನು ವಿಧಿಸಲಾಗಿದೆ. ಮಾರ್ಗ ನಿರ್ಮಾಣಕ್ಕೆ ರಾಜ್ಯದ ಪಾಲಿನ ಬಾಕಿ ಮೊತ್ತವಾದ ₹67.68 ಕೋಟಿಯನ್ನೂ ಕರ್ನಾಟಕ ಸರ್ಕಾರ ಠೇವಣಿ ಇಟ್ಟಿಲ್ಲ. ಈ ಸಂಬಂಧ ಕರ್ನಾಟಕ ಸರ್ಕಾರಕ್ಕೆ ನೆನಪೋಲೆ ಬರೆದಿದ್ದ ಕೇಂದ್ರ ಸರ್ಕಾರ, ಈ ವಿಷಯಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥ ಮಾಡಬೇಕು ಎಂದು ಸೂಚಿಸಿತ್ತು. ಈ ಯೋಜನೆಗೆ ಬೇಕಿರುವ ಅರಣ್ಯ ಭೂಮಿ ಹಸ್ತಾಂತರವೇ ದೊಡ್ಡ ಸಮಸ್ಯೆ.

ಕಡೂರು-ಚಿಕ್ಕಮಗಳೂರು-ಸಕಲೇಶಪುರಕ್ಕೆ ಸಂಪರ್ಕ ಕಲ್ಪಿಸುವ ಈ ಮಾರ್ಗದ ಉದ್ದ 93 ಕಿ.ಮೀ.ಗಳು. 1996-97ರಲ್ಲಿ ಈ ಯೋಜನೆಯ ಅಂದಾಜು ವೆಚ್ಚ ₹157 ಕೋಟಿ ಆಗಿತ್ತು. ಕಡೂರು-ಚಿಕ್ಕಮಗಳೂರು ಮಾರ್ಗದ 45 ಕಿ.ಮೀ. ಕಾಮಗಾರಿ 1999-2000ರಲ್ಲಿ ಆರಂಭವಾಗಿತ್ತು. ಭೂಸ್ವಾಧೀನ ಸಮಸ್ಯೆ ಹಾಗೂ ಅನುದಾನ ಕೊರತೆಯಿಂದ 2010ರವರೆಗೂ ಕಾಮಗಾರಿ ಕುಂಟುತ್ತಲೇ ಸಾಗಿತ್ತು. ಯೋಜನೆ ಮೊತ್ತದಲ್ಲಿ ತಲಾ ಶೇ 50ರಷ್ಟು ಭರಿಸಲು ರೈಲ್ವೆ ಇಲಾಖೆ ಹಾಗೂ ರಾಜ್ಯ ಸರ್ಕಾರ 2010ರಲ್ಲಿ ಒಪ್ಪಂದ ಮಾಡಿಕೊಂಡವು. ನಂತರ ಕಾಮಗಾರಿಗೆ ವೇಗ ದೊರಕಿತು. ಕಡೂರು- ಚಿಕ್ಕಮಗಳೂರು ಮಾರ್ಗ 2013ರ ನವೆಂಬರ್‌ನಲ್ಲಿ ಪೂರ್ಣಗೊಂಡು ಕಾರ್ಯಾರಂಭ ಮಾಡಿತು. ಚಿಕ್ಕಮಗಳೂರು- ಬೇಲೂರು ಮಾರ್ಗವನ್ನು (22 ಕಿ.ಮೀ.) ಇಪಿಸಿ ಟೆಂಡರ್ ಪ್ರಕ್ರಿಯೆ ಮೂಲಕ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಹಾಸನ- ಬೇಲೂರು ಹೊಸ ಮಾರ್ಗ ನಿರ್ಮಾಣವಾಗುತ್ತಿರುವುದರಿಂದ, ಬೇಲೂರು- ಸಕಲೇಶಪುರ ಮಾರ್ಗ ನಿರ್ಮಾಣದ ಪ್ರಸ್ತಾವವನ್ನು 2019ರಲ್ಲಿ ಕೈಬಿಡಲಾಗಿದೆ’ ಎಂದು ಕರ್ನಾಟಕ ಸರ್ಕಾರ ಹೇಳಿಕೊಂಡಿದೆ.

ಬಯಲುಸೀಮೆಯಲ್ಲಿ ಆಮೆಗತಿ: 213 ಕಿ.ಮೀ. ಉದ್ದದ ರಾಯದುರ್ಗ–ಕಲ್ಯಾಣದುರ್ಗ– ತುಮಕೂರು ರೈಲು ಮಾರ್ಗ ನಿರ್ಮಾಣಕ್ಕೆ ಒಪ್ಪಿಗೆ ನೀಡಿ 15 ವರ್ಷಗಳ (2007–2008) ಮೇಲಾಗಿದೆ.

9ನೇ ಪುಟ ನೋಡಿ

ರೈಲ್ವೆ ಯೋಜನೆಗಳು (ಮೊತ್ತ ₹ಕೋಟಿಗಳಲ್ಲಿ)



ಮಾಹಿತಿ: ಮೂಲ ಸೌಕರ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಶೇ 66ರಷ್ಟು ಮಹಿಳೆಯರು ಮನೆಯ ಮಾಲೀಕರು

ರಾಜ್ಯದ ಶೇ 66ಕ್ಕೂ ಹೆಚ್ಚು ಮಹಿಳೆಯರ (15–49 ವಯಸ್ಸು) ಹೆಸರಿನಲ್ಲಿ ಮನೆಯ ಒಡೆತನವಿದೆ ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ–5. ಈ ವರದಿಯ ಪ್ರಕಾರ ರಾಜ್ಯದಲ್ಲಿನ ಮೂರನೇ ಎರಡರಷ್ಟು ಮಹಿಳೆಯರು ಮನೆಯ ಪ್ರತ್ಯೇಕ ಮಾಲೀಕತ್ವ ಅಥವಾ ಜಂಟಿ ಮಾಲೀಕತ್ವ ಹೊಂದಿದ್ದಾರೆ. ಅರುಣಾಚಲ ಪ್ರದೇಶ (ಶೇ 70.2) ಹೊರತುಪಡಿಸಿ, ದೇಶದ ಬೇರೆಲ್ಲಾ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಮನೆಯ ಒಡೆತನ ಹೊಂದಿರುವ ಮಹಿಳೆಯರ ಪ್ರಮಾಣ ಹೆಚ್ಚು



• ದೇಶದಲ್ಲಿನ ಒಟ್ಟು ಮಹಿಳೆಯರಲ್ಲಿ ಶೇ 43.3ರಷ್ಟು ಮಹಿಳೆಯರು ಮಾತ್ರ ಮನೆಯ ಮಾಲೀಕತ್ವವನ್ನು ಹೊಂದಿದ್ದಾರೆ. ಕರ್ನಾಟಕದಲ್ಲಿ ಮನೆಯ ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣ, ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು
• 2014–15ನೇ ಸಾಲಿನಲ್ಲಿ ಮನೆ ಮಾಲೀಕತ್ವ ಹೊಂದಿರುವ ರಾಜ್ಯದ ಮಹಿಳೆಯರ ಪ್ರಮಾಣ ಶೇ 50.6ರಷ್ಟಿತ್ತು. ನಂತರದ ಐದು ವರ್ಷಗಳಲ್ಲಿ ಮನೆ ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣದಲ್ಲಿ 15.6 ಶೇಕಡಾವಾರು ಅಂಶಗಳಷ್ಟು ಏರಿಕೆಯಾಗಿದೆ. ಈ ಏರಿಕೆ ಪ್ರಮಾಣವೂ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು
• 2014–15ನೇ ಸಾಲಿನಲ್ಲಿ ಮನೆ ಮಾಲೀಕತ್ವ ಹೊಂದಿರುವ ದೇಶದ ಮಹಿಳೆಯರ ಪ್ರಮಾಣ ಶೇ 38.4ರಷ್ಟಿತ್ತು. ರಾಷ್ಟ್ರೀಯ ಮಟ್ಟದಲ್ಲಿ, ನಂತರದ ಐದು ವರ್ಷಗಳಲ್ಲಿ ಮನೆ ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣದಲ್ಲಿ ಆಗಿರುವ ಏರಿಕೆ 4.9 ಶೇಕಡಾವಾರು ಅಂಶಗಳಷ್ಟು ಮಾತ್ರ

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ–4 ಮತ್ತು 5 ಪ್ರಜಾವಾಣಿ ಗ್ರಾಫಿಕ್ಸ್

ಗುಂಡೇಟಿಗೆ ಒಡಿಶಾ ಸಚಿವ ಬಲಿ

ಭುವನೇಶ್ವರ(ಪಿಟಿಐ): ಪೊಲೀಸ್‌ಅಧಿಕಾರಿಯೊಬ್ಬರು ಭಾನುವಾರ ಮಧ್ಯಾಹ್ನ ಹಾರಿಸಿದ್ದ ಗುಂಡಿನಿಂದ ತೀವ್ರ ಗಾಯಗೊಂಡಿದ್ದ ಒಡಿಶಾ ಆರೋಗ್ಯ ಸಚಿವ ನಬ ಕಿಶೋರ್ ದಾಸ್ ಅವರು, ಸಂಜೆಯ ವೇಳೆಗೆ ಮೃತಪಟ್ಟಿದ್ದಾರೆ.

ನಬ ಕಿಶೋರ್

ಒಡಿಶಾದ ಝುರ್ಸುಗುಡಾ ಜಿಲ್ಲೆಯ ಬಜರಂಗನಗರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಕಾರ್ಯಕ್ರಮವೊಂದರಲ್ಲಿ ಅವರು ಭಾಗಿಯಾಗಬೇಕಿತ್ತು. ಕಾರ್ಯಕ್ರಮ ನಡೆಯಬೇಕಿದ್ದ ಸ್ಥಳದಲ್ಲಿ ಕಾರಿನಿಂದ ಇಳಿಯುತ್ತಿದ್ದಾಗ ಎಎಸ್‌ಐ ಗೋಪಾಲ್ ದಾಸ್, ಕಿಶೋರ್ ದಾಸ್ ಅವರ ಎದೆಗೆ ಎರಡು ಗುಂಡು ಹಾರಿಸಿದ್ದರು.

9ನೇ ಪುಟ ನೋಡಿ

ಕಾರಣ ತಿಳಿದಿಲ್ಲ

ಗೋಪಾಲ್ ದಾಸ್

ಸಚಿವರ ಮೇಲೆ ಗುಂಡು ಹಾರಿಸಿದ ಪೊಲೀಸ್ ಅಧಿಕಾರಿಯನ್ನು ಸ್ಥಳೀಯರೇ ಹಿಡಿದು, ಪೊಲೀಸರಿಗೆ ಒಪ್ಪಿಸಿದ್ದಾರೆ. ಆದರೆ, ಬಂಧಿತ ಅಧಿಕಾರಿ ಸಚಿವರ ಮೇಲೆ ಗುಂಡು ಹಾರಿಸಿದ್ದು ಏಕೆ ಎಂಬ ಮಾಹಿತಿ ಲಭ್ಯವಾಗಿಲ್ಲ. ‘ಗೋಪಾಲ್ ದಾಸ್ ವಿಚಾರಣೆ ನಡೆಯುತ್ತಿದೆ’ ಎಂದು ಬಜರಂಗನಗರ ಎಸ್‌ಡಿಪಿಒ ಗುಪ್ತೇಶ್ವರ ಭೋಯಿ ಹೇಳಿದ್ದಾರೆ.

‘ನನ್ನ ಪತಿಯ ಮಾನಸಿಕ ಆರೋಗ್ಯ ಸರಿ ಇರಲಿಲ್ಲ. ಹೀಗಾಗಿ 7–8 ವರ್ಷಗಳಿಂದ ಅವರು ಚಿಕಿತ್ಸೆ ಪಡೆಯುತ್ತಿದ್ದು, ಸಹಜವಾಗೇ ಇದ್ದರು. ಆದರೆ, ಅವರಿಗೆ ಸಚಿವರೊಂದಿಗೆ ವೈರತ್ಯ ಇರಲಿಲ್ಲ. ತನಿಖೆ ನಡೆದು ಸತ್ಯ ಹೊರಗೆ ಬರಬೇಕು’ ಎಂದು ಆರೋಪಿ ಪೊಲೀಸ್ ಅಧಿಕಾರಿ ಗೋಪಾಲ್ ದಾಸ್ ಅವರ ಪತ್ನಿ ಜಯಂತಿ ಹೇಳಿಕೆ ನೀಡಿದ್ದಾರೆ.

ಸಚಿವ ಕಿಶೋರ್ ದಾಸ್ ಅವರು ಈ ಮೊದಲು ಕಾಂಗ್ರೆಸ್‌ನಲ್ಲಿದ್ದರು. ಝುರ್ಸುಗುಡಾದ ದೊಡ್ಡ ಕಲ್ಲಿದ್ದಲು ಗಣಿ ಉದ್ಯಮಿಗಳಲ್ಲಿ ಮೊದಲ ಸಾಲಿನಲ್ಲಿ ಇರುವ ಕಿಶೋರ್ ದಾಸ್ ಅವರು, 2019ರ ಲೋಕಸಭಾ ಚುನಾವಣೆಗೂ ಮುನ್ನ ಬಿಜೆಡಿ ಸೇರಿದ್ದರು. ಅಲ್ಲಿಯವರೆಗೆ ಅವರು ಬಿಜೆಡಿಯ ಕಟುಟೀಕಾರರಾಗಿದ್ದರು.

ಒಳ ಪುಟ

‘ವಿಷ್ಣುವರ್ಧನ್ ಸ್ಮಾರಕ ಭವನ’ ಉದ್ಘಾಟನೆ 4

ಚಿನಕುರಳಿ

ಪ್ರಕಾಶ್ ಶೆಟ್ಟಿ

19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್

ಭಾರತ ಕುವರಿಯರ ಚಾರಿತ್ರಿಕ ಸಾಧನೆ



ದಕ್ಷಿಣ ಆಫ್ರಿಕಾದಲ್ಲಿ ಶಫಾಲಿ ವರ್ಮಾ ನಾಯಕತ್ವದ ಭಾರತದ ಯುವಪಡೆಯು ಇದೇ ಮೊದಲ ಸಲ ನಡೆದ 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಜಯಿಸಿತು. ಭಾನುವಾರ ನಡೆದ ಫೈನಲ್‌ನಲ್ಲಿ ಭಾರತವು 7 ವಿಕೆಟ್‌ಗಳಿಂದ ಇಂಗ್ಲೆಂಡ್ ಎದುರು ಗೆದ್ದಿತು.

ಇಂಗ್ಲೆಂಡ್
68 (17.1 ಓವರ್‌ಗಳಲ್ಲಿ)
ಟೈಟಸ್ ಸಾಧು 6ಕ್ಕೆ2
ಅರ್ಚನಾ ದೇವಿ 17ಕ್ಕೆ2
ಪಾರ್ಶ್ವಿ ಚೋಪ್ರಾ 13ಕ್ಕೆ2

ಭಾರತ
3ಕ್ಕೆ69 (14 ಓವರ್‌ಗಳಲ್ಲಿ)
ಸೌಮ್ಯ ತಿವಾರಿ ಅಜೇಯ 24 (37ಎ, 43)
ಗೊಂಗಡಿ ತ್ರಿಶಾ 24 (29ಎ, 43)

ಬಿಸಿಸಿಐ ಟ್ವಿಟರ್ ಚಿತ್ರ

ಮಧ್ಯಮ ವರ್ಗದತ್ತ ಪ್ರಧಾನಿ ಚಿತ್ತ

ನವದೆಹಲಿ (ಪಿಟಿಐ): ಮಧ್ಯಮ ವರ್ಗದ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ವಿವಿಧ ಯೋಜನೆಗಳು ಹಾಗೂ ಅವುಗಳು ಕಲ್ಪಿಸಿರುವ ಅನುಕೂಲಗಳ ಮಾಹಿತಿಯನ್ನು ಆ ವರ್ಗಕ್ಕೆ ತಲುಪಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸಚಿವರಿಗೆ ಭಾನುವಾರ ಸೂಚಿಸಿದರು. ಬುಧವಾರ ಮಂಡನೆಯಾಗಲಿರುವ ಬಜೆಟ್‌ಗೂ ಮುನ್ನ, ಮಂತ್ರಿ ಪರಿಷತ್ತಿನ ಸಭೆಯಲ್ಲಿ ಅವರು ಮಾತನಾಡಿದರು.

ಕೇಂದ್ರದ ಯೋಜನೆಗಳು ಬಡವರು ಹಾಗೂ ಸಮಾಜದ ಅಂಚಿನಲ್ಲಿರುವ ಸಮುದಾಯಗಳಿಗೆ ಅನುಕೂಲ ಮಾಡಿಕೊಟ್ಟಿವೆ. ಹಾಗೆಯೇ ಮಧ್ಯಮ ವರ್ಗದವರ ಜೀವನ ಸುಧಾರಣೆಗೂ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಈ ಯೋಜನೆಗಳು ಹಲವು ರೀತಿಯಲ್ಲಿ ನೆರವಾಗಿವೆ ಎಂಬ ವಾಸ್ತವವನ್ನು ಮಧ್ಯಮ ವರ್ಗದ ಜನರಿಗೆ ವಿವರಿಸಬೇಕು ಎಂದು ಸಚಿವರು ಸೂಚಿಸಿದರು.

ಈ ವರ್ಷದ ಮೊದಲ ಮಂತ್ರಿ ಪರಿಷತ್ತಿನ ಸಭೆ ಇದಾಗಿದ್ದು, ಪ್ರಧಾನಿ ಮಂಡಿಸಿದ ವಿಷಯಗಳನ್ನು ಒಳಗೊಂಡ ಪ್ರತಿಗಳನ್ನು ಸಚಿವರಿಗೆ ಹಂಚಲಾಯಿತು. ದೇಶದ 75ನೇ ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ, ಬ್ರಿಟಿಷರ ಕಾಲದ ವಿಷಯಗಳು ಹಾಗೂ ಕಾನೂನುಗಳನ್ನು ರದ್ದುಗೊಳಿಸುವ ಬಗ್ಗೆ ಪ್ರಧಾನಿ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ.

9ನೇ ಪುಟ ನೋಡಿ

ಲಾಲ್‌ಚೌಕ್: ರಾಹುಲ್ ರಾಷ್ಟ್ರ ಧ್ವಜಾರೋಹಣ

ಪ್ರಜಾವಾಣಿ ವಾರ್ತೆ

ಶ್ರೀನಗರ: ಭಾರತ್ ಜೋಡೊ ಯಾತ್ರೆ ಅಂಗವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಅವರ ತಂಗಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಇಲ್ಲಿನ ಐತಿಹಾಸಿಕ ಲಾಲ್ ಚೌಕ್‌ನಲ್ಲಿ ಭಾನುವಾರ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ಭಾರಿ ಭದ್ರತೆಯಲ್ಲಿ ನಡೆದ ತ್ರಿವರ್ಣ ಧ್ವಜ ವಂದನೆ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯ ಕಾಂಗ್ರೆಸ್ ಕಾರ್ಯಕರ್ತರು ಸಾಕ್ಷಿಯಾದರು. ನಂತರ, ದಲ್ ಸರೋವರದ ತೀರದತ್ತ ಸಾಗಿದ ಯಾತ್ರೆಯು, ಅಲ್ಲಿನ ನೆಹರು ಪಾರ್ಕ್‌ನಲ್ಲಿ ತಂಗಿತು.

ಸೋಮವಾರ (ಜ.30) ಇಲ್ಲಿನ ಮೌಲಾನಾ ಆಜಾದ್ ರಸ್ತೆಯಲ್ಲಿರುವ ಪಕ್ಷದ ಕಚೇರಿ ಆವರಣದಲ್ಲಿ ರಾಹುಲ್ ಗಾಂಧಿ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು. ಅದರೊಂದಿಗೆ ಭಾರತ್ ಜೋಡೊ ಯಾತ್ರೆಯು ಸಂಪನ್ನಗೊಳ್ಳಲಿದೆ.

9ನೇ ಪುಟ ನೋಡಿ

'ಪ್ರೇರಣಾ ಸಮಾರಂಭ'ದಲ್ಲಿ ಹಿಂದುಳಿದ ವರ್ಗಗಳ ಇಲಾಖೆ ಆಯುಕ್ತ ಕೆ.ಎ. ದಯಾನಂದ

'ಅರಿವು' ಶೈಕ್ಷಣಿಕ ಸಾಲ ಬಳಕೆಗೆ ನಿರಾಸಕ್ತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 150 ವಿದ್ಯಾರ್ಥಿಗಳಿಂದ ಮಾತ್ರ 'ಅರಿವು' ಯೋಜನೆ ಬಳಕೆ
- 210 ಕುರುಬ ವಿದ್ಯಾರ್ಥಿಗಳಿಗೆ ಸನ್ಮಾನ
- 'ಕನಕ ವೈದ್ಯ ವಿಭೂಷಣ', 'ಕನಕ ವೈದ್ಯಶ್ರೀ' ಪ್ರಶಸ್ತಿ

ಬೆಂಗಳೂರು: ಹಿಂದುಳಿದ ವರ್ಗಗಳ ಇಲಾಖೆಯ 'ಅರಿವು' ಶೈಕ್ಷಣಿಕ ಸಾಲ ಯೋಜನೆಯನ್ನು ವಿದ್ಯಾರ್ಥಿಗಳು ಬಳಸಿಕೊಳ್ಳುತ್ತಿಲ್ಲ. ಕಳೆದ ಸಾಲಿನಲ್ಲಿ ಸುಮಾರು 150 ವಿದ್ಯಾರ್ಥಿಗಳಷ್ಟೇ ಸಾಲ ಪಡೆದಿದ್ದಾರೆ ಎಂದು ಹಿಂದುಳಿದ ವರ್ಗಗಳ ಇಲಾಖೆ ಆಯುಕ್ತ ಕೆ.ಎ.ದಯಾನಂದ ಹೇಳಿದರು.

ಕಾಳಿದಾಸ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ 'ಪ್ರೇರಣಾ ಸಮಾರಂಭ'ದಲ್ಲಿ ಕುರುಬ ಸಮುದಾಯದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸನ್ಮಾನ, ವಿದ್ಯಾರ್ಥಿವೇತನ ವಿತರಿಸಿ ಅವರು ಮಾತನಾಡಿದರು.

'ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮವು 'ಅರಿವು' ಯೋಜನೆ ಆರಂಭಿಸಿದೆ. ಯೋಜನೆಯಡಿ ಐದು ವರ್ಷ ಕಾಲ, ಪ್ರತಿ ವರ್ಷ ₹1 ಲಕ್ಷ ಸಾಲ ನೀಡಲಾಗುತ್ತದೆ. ಶೇ.2ರಷ್ಟು ಬಡ್ಡಿ ಇದೆ. ಶಿಕ್ಷಣ ಮುಗಿದು, ವೇತನ ಪಡೆಯಲು ಆರಂಭಿಸಿದ ನಂತರ ಸಾಲ ಮರುಪಾವತಿ ಮಾಡಬೇಕು' ಎಂದರು.

'ಈ ಯೋಜನೆಯ ಲಾಭವನ್ನು ಹೆಚ್ಚಿನವರು ಪಡೆದುಕೊಳ್ಳುತ್ತಿಲ್ಲ. ಇದಲ್ಲದೆ ಶುಲ್ಕ ಮರುಪಾವತಿ ಯೋಜನೆಯ ಪ್ರಯೋಜನವನ್ನು ಪಡೆದಿಲ್ಲ. ಈಗಲೂ ಅರ್ಜಿ ಸಲ್ಲಿಸಬಹುದಾಗಿದೆ. ಹಾಸ್ಟೆಲ್‌ಗಳ ಅಗತ್ಯ ಇರುವವರು ಕೂಡ ಅರ್ಜಿ ಸಲ್ಲಿಸಿ. ಅದರ ಬಗ್ಗೆ ವಿವರವನ್ನು ಕಳುಹಿಸಿಕೊಡಿ. ಕೂಡಲೇ ಲಭ್ಯವಾಗುವಂತೆ ಮಾಡಲಾಗುತ್ತದೆ' ಎಂದು ತಿಳಿಸಿದರು.

ಕನಕ ಗುರುಪೀಠದ ಸಿದ್ಧರಾಮಾನಂದಪುರ ಸ್ವಾಮೀಜಿ ಅವರು, 'ಆಸ್ತಿ, ಸಂಬಂಧವನ್ನು ನಂಬಿಕೊಂಡಿರುವವರು ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಿಲ್ಲ. ಆತ್ಮಶಕ್ತಿ, ಸ್ವಂತಶಕ್ತಿಯಿಂದ ಜೀವನವನ್ನು ಯಾರು ನಡೆಸುತ್ತಾರೋ ಅವರು ಯಶಸ್ಸು ಕಾಣುತ್ತಾರೆ' ಎಂದರು.

ಕಾಳಿದಾಸ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ 'ಪ್ರೇರಣಾ ಸಮಾರಂಭ'ದಲ್ಲಿ ಕುರುಬ ಸಮುದಾಯದ ವೈದ್ಯಕೀಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಸಮಾರಂಭ ಉದ್ಘಾಟಿಸಿದ ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್, 'ಸಮುದಾಯದ ವಿದ್ಯಾರ್ಥಿಗಳು ಹೆಚ್ಚಿನ ರೀತಿಯಲ್ಲಿ ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡು ವಿದ್ಯಾವಂತರಾಗಬೇಕು. ಎಲ್ಲ ರೀತಿಯ ಹುದ್ದೆಗಳನ್ನೂ ಅಲಂಕರಿಸಬೇಕು' ಎಂದು ಅವರು ಹೇಳಿದರು.

ಸನ್ಮಾನ: ಹೃದ್ರೋಗ ತಜ್ಞ ಡಾ. ಎಚ್. ವಿ. ವೆಂಕಟೇಶ್ ಅವರಿಗೆ 'ಕನಕ ವೈದ್ಯ ವಿಭೂಷಣ', ಮಹಾರಾಷ್ಟ್ರದ ಹೃದ್ರೋಗ ತಜ್ಞ ಡಾ. ಸಯಾಜಿರಾವ್ ಶಿವಾಜಿ ಸರ್ಗಾರ್ ಅವರಿಗೆ 'ಕನಕ ವೈದ್ಯಶ್ರೀ' ಪ್ರಶಸ್ತಿ ನೀಡಲಾಯಿತು. 210 ಕುರುಬ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಆರ್ಥಿಕವಾಗಿ ಹಿಂದುಳಿದವರಿಗೆ ವಿದ್ಯಾರ್ಥಿವೇತನ ಮತ್ತು ಪುಸ್ತಕ ನೀಡಲಾಯಿತು.

ನಿವೃತ್ತ ಐಪಿಎಸ್ ಅಧಿಕಾರಿ ಎಂ.ಲಕ್ಷ್ಮಣ್, ಡಿಸಿಪಿ ಡಾ. ಭೀಮಾಶಂಕರ ಎಸ್. ಗುಳೇದ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಿಇಒ ರೇವಣ್ಣಪ್ಪ, ಶಿಕ್ಷಣ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಜಿ. ಚಂದ್ರಶೇಖರ್, ಕುರುಬ ಸಂಘದ ಮಾಜಿ ಅಧ್ಯಕ್ಷ ಲಿಂಗಪ್ಪ, ಗ್ಲೋಬಲ್ ಹೆಡ್ ಕಾರ್ಪೊರೇಷನ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಸಿಇಒ ರಮೇಶ್ ಸಾಸನೂರು, ಟ್ರಸ್ಟ್ ಸಂಸ್ಥಾಪಕ ಟ್ರಸ್ಟಿ ಡಾ. ಎಸ್. ಪರಮೇಶ್, ಟ್ರಸ್ಟಿ ಡಾ. ವಿಜಯಲಕ್ಷ್ಮಿ ಪರಮೇಶ್ ಇದ್ದರು.

ಸುದ್ದಿ 2 ನಿಮಿಷ

ಮುನ್ನೆಚ್ಚರಿಕೆ ಡೋಸ್ ಲಸಿಕೆ: ಕಾಯ್ದಿರಿಸುವವರ ಸಂಖ್ಯೆ ಇಳಿಕೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಹಾಗೂ ರೂಪಾಂತರಿ ವೈರಾಣು ಬಗೆಗಿನ ಆತಂಕ ದೂರವಾಗಿರುವುದರಿಂದ ಲಸಿಕೆ ಮುನ್ನೆಚ್ಚರಿಕೆ ಡೋಸ್‌ಗೆ ಬೇಡಿಕೆ ಕುಸಿದಿದೆ. ಕೋವಿನ್ ಪೋರ್ಟಲ್ ಮೂಲಕ ಲಸಿಕೆ ಕಾಯ್ದಿರಿಸುವವರ ಸಂಖ್ಯೆ ಇಳಿಕೆ ಕಂಡಿದೆ.

ಚೀನಾ ಸೇರಿ ಕೆಲವೆಡೆ ಕೋವಿಡ್ ಪ್ರಕರಣಗಳ ಹೆಚ್ಚಳ ಹಿನ್ನೆಲೆಯಲ್ಲಿ ಕಳೆದ ತಿಂಗಳು ಬೇಡಿಕೆ ಹೆಚ್ಚಿತ್ತು. ಕೋವಿಶೀಲ್ಡ್ ಲಸಿಕೆಯ ದಾಸ್ತಾನು ಖಾಲಿಯಾಗಿ, ಕೆಲವರು ಕೋವಿನ್ ಪೋರ್ಟಲ್‌ನಲ್ಲಿ ಕಾಯ್ದಿರಿಸಿದ್ದರೂ ಲಸಿಕೆ ದೊರೆತಿರಲಿಲ್ಲ. ಈಗ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 150ರ ಗಡಿಯೊಳಗೆ ಇದೆ. ಇದರಿಂದಾಗಿ ಮುನ್ನೆಚ್ಚರಿಕೆ ಡೋಸ್‌ಗೆ ಬೇಡಿಕೆ ತಗ್ಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 95.07 ಲಕ್ಷ ಮಂದಿ ಎರಡನೇ ಡೋಸ್, 14.79 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 14.86 ಲಕ್ಷ ಮಂದಿ ಎರಡನೇ ಡೋಸ್, 3.39 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಪಡೆದಿದ್ದಾರೆ.

ಕೇಂದ್ರಗಳು ಸ್ಥಗಿತ: ಸದ್ಯ 173 ಸರ್ಕಾರಿ ಕೇಂದ್ರಗಳು ಹಾಗೂ 31 ಖಾಸಗಿ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. ಬೇಡಿಕೆ ಕುಗ್ಗಿರುವುದರಿಂದ 20ಕ್ಕೂ ಅಧಿಕ ಕೇಂದ್ರಗಳು ಲಸಿಕೆ ವಿತರಣೆಯನ್ನು ಸ್ಥಗಿತಗೊಳಿಸಿವೆ.

ಸೇವಾ ಶುಲ್ಕ ಸಹಿತ ಒಂದು ಮುನ್ನೆಚ್ಚರಿಕೆ ಡೋಸ್ ಲಸಿಕೆಗೆ ಆಸ್ಪತ್ರೆಗಳು ₹ 386 ಪಡೆಯುತ್ತಿವೆ. ಸದ್ಯ ನಗರದಲ್ಲಿ ಪ್ರಕ್ರಿಯಾ ಆಸ್ಪತ್ರೆ, ಅಪೋಲೊ ಕ್ಲಿನಿಕ್, ನಾರಾಯಣ ಹೃದಯಾಲಯ, ಕೊಲಂಬಿಯಾ ಏಷ್ಯಾ, ಸುಗುಣಾ, ಮಣಿಪಾಲ್, ಫೋರ್ಟಿಸ್ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಮುನ್ನೆಚ್ಚರಿಕೆ ಡೋಸ್ ಕಾಯ್ದಿರಿಸುವಿಕೆಗೆ ನಿಗದಿಪಡಿಸಲಾದ ಸ್ಲಾಟ್‌ಗಳಲ್ಲಿ ಹೆಚ್ಚಿನ ಸ್ಲಾಟ್‌ಗಳು ಖಾಲಿ ಉಳಿದಿವೆ.



ನಿಯೋಜನೆ ವರ್ಗಾವಣೆ ರದ್ದುಗೊಳಿಸಲು ಮನವಿ

ಬೆಂಗಳೂರು: ರಾಜ್ಯದ ಮಹಾನಗರ ಪಾಲಿಕೆಗಳಿಗೆ ನಿಯೋಜನೆ ಮೇರೆಗೆ ವರ್ಗಾವಣೆ ಮಾಡಬಾರದು ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ.ಅಮೃತರಾಜ್ ಆಗ್ರಹಿಸಿದರು.

ಭಾನುವಾರ ನಡೆದ ಸಂಘದ ಸಭೆಯಲ್ಲಿ ಮಾತನಾಡಿದ ಅವರು, 'ಆರೋಗ್ಯ ಸಂಜೀವಿನಿ ಯೋಜನೆಯನ್ನು ಎಲ್ಲ ಮಹಾನಗರ ಪಾಲಿಕೆಗಳಿಗೂ ವಿಸ್ತರಿಸಬೇಕು ಎಂದು ಒತ್ತಾಯಿಸಿದರು. 'ವೃಂದ ಮತ್ತು ನೇಮಕಾತಿ ಸಮಸ್ಯೆಗಳ ನಿವಾರಣೆಗೆ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಗಿದೆ' ಎಂದರು.

ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ನಿರ್ದೇಶಕರಾಗಿ ಸಾಯಿಶಂಕರ್, ಎ.ಜಿ.ಬಾಬು, ಬಿ.ರುದ್ರೇಶ್ ಅವರು ಅಧಿಕಾರ ಸ್ವೀಕರಿಸಿದರು. ಬಿಬಿಎಂಪಿ, ಬೆಳಗಾವಿ, ತುಮಕೂರು ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ, ವಿಜಯಪುರ, ದಾವಣಗೆರೆ, ಮಂಗಳೂರು, ಕಲಬುರಗಿ ಮಹಾನಗರ ಪಾಲಿಕೆ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಂಘದ ಪ್ರಲ್ಹಾದ್, ಬಾಲು, ಪ್ರಸಾದ್, ಗೋವಿಂದಬಾಬು, ಶಿರಶ್ಯಾವ ಪಾಲ್ಗೊಂಡಿದ್ದರು.

'ಮೇರು ನಟರ ಜೀವನ ಪಠ್ಯದಲ್ಲಿ ಸೇರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇರು ನಟರಾದ ಶಂಕರನಾಗ್, ವಿಷ್ಣುವರ್ಧನ್, ಅಂಬರೀಷ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ ಜೀವನದ ಯಶೋಗಾಥೆಯನ್ನು ಶಾಲಾ–ಕಾಲೇಜು ಪಠ್ಯದಲ್ಲಿ ಅಳವಡಿಸಬೇಕು' ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಿಗೆ ಈ ಬಗ್ಗೆ ಪತ್ರ ಬರೆದಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಪಠ್ಯದಲ್ಲಿ ಇವರ ಸಾಧನೆ ಸೇರಿಸಲು ಮುಖ್ಯಮಂತ್ರಿ ಅವರಲ್ಲಿ ಮಂಡಳಿ ಅಧ್ಯಕ್ಷರು ಮನವಿ ಮಾಡಬೇಕು ಎಂದು ಕೋರಿದ್ದಾರೆ.

'ಈಗಾಗಲೇ ಡಾ.ರಾಜ್‌ಕುಮಾರ್ ಅವರ ಜೀವನದ ಕುರಿತು 6ನೇ ತರಗತಿಯ ಕನ್ನಡ ಪಠ್ಯದಲ್ಲಿ ಮತ್ತು ಪಂಡರಿಬಾಯಿ ಅವರ ಬಗ್ಗೆ 9ನೇ ತರಗತಿ ಕನ್ನಡ ಪಠ್ಯದಲ್ಲಿ ಸೇರ್ಪಡೆ ಮಾಡಲಾಗಿದೆ. ಶಂಕರ್ ನಾಗ್, ವಿಷ್ಣುವರ್ಧನ್, ಅಂಬರೀಷ್ ಹಾಗೂ ಪುನೀತ್ ರಾಜ್‌ಕುಮಾರ್ ಅವರೂ ತಮ್ಮ ಚಿತ್ರಗಳ ಮೂಲಕ ಸಮಾಜಕ್ಕೆ ಅತ್ಯುತ್ತಮ ಸಂದೇಶಗಳನ್ನು ನೀಡಿದ್ದಾರೆ' ಎಂದು ಹೇಳಿದ್ದಾರೆ.

'ಮಕ್ಕಳಿಗೆ ಇವರ ಜೀವನದ ಬಗ್ಗೆ ಮಾಹಿತಿ ನೀಡಬೇಕು. ಕನ್ನಡ ನಾಡು–ನುಡಿ ವಿಷಯದಲ್ಲಿ ಇವರು ಕೈಗೊಂಡ ನಿಲುವುಗಳು ಮತ್ತು ಕನ್ನಡದ ಅಸ್ಮಿತೆಗಾಗಿ ಇವರ ಹೋರಾಟವನ್ನು ಮಕ್ಕಳಿಗೆ ತಿಳಿಸುವ ಕಾರ್ಯ ನಡೆಯಬೇಕಾಗಿದೆ' ಎಂದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರ ಸೂಚನೆಯ ಮೇರೆಗೆ ಈ ಕೆಳಕಂಡ "ಷೆಡ್ಯೂಲ್" ನಲ್ಲಿ ವಿವರಿಸಿರುವ ಮತ್ತು ಇನ್ನುಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ, ಕೋನದಾಸಪುರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ಇಲ್ಲಿ ಬರುವ ಸರ್ವೆ ನಂ.3(ಭಾಗ), ಇದರ ವಿಸ್ತೀರ್ಣ 25 ಎಕರೆ 11 ಗುಂಟೆಗಳು ಮತ್ತು ಸರ್ವೆ ನಂ.4(ಭಾಗ), ಇದರ ವಿಸ್ತೀರ್ಣ 02 ಎಕರೆ 35 ಗುಂಟೆಗಳು, ಒಟ್ಟಾರೆ ವಿಸ್ತೀರ್ಣ 28 ಎಕರೆ 06 ಗುಂಟೆಗಳ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ **ಮೆ॥ ಆರ್ಗನ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್**, (**"ಮಾಲೀಕರು"**) ರವರ ಮಾಲಿಕತ್ವವನ್ನು ನಾವು ಪರಿಶೀಲಿಸುತ್ತಿದ್ದೇವೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಋಣಬಾಧ್ಯತೆ, ಕ್ಲೇಮು ಅಥವಾ ಮತ್ತಾವುದೇ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಂತಹ ತಮ್ಮ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **15 (ಹದಿನೈದು) ದಿನಗಳ** ಅವಧಿಯೊಳಗೆ ಈ ಕೆಳಕಂಡವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ತಿಳಿಸಿದ 15 (ಹದಿನೈದು) ದಿನಗಳ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಅಧಿಕಾರ, ಹಿತಾಸಕ್ತಿ, ಋಣಬಾಧ್ಯತೆ, ಕ್ಲೇಮು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕೊನದಾಸಪುರ ಗ್ರಾಮ, ಇಲ್ಲಿ ಪರಿವರ್ತನೆಯಾಗಿರುವ ಸ್ಥಿರಾಸ್ತಿ ಸ್ವತ್ತಿನ ಒಟ್ಟಾರೆ ವಿಸ್ತೀರ್ಣ 28 ಎಕರೆ 06 ಗುಂಟೆಗಳು, ಹಾಗೂ ಇದರ ಚಕ್ಕುಬಂದಿ ಕೆಳಕಂಡ ಟೇಬಲ್‌ನಲ್ಲಿ ತಿಳಿಸಲಾಗಿದೆ.

ಸರ್ವೆ ನಂ	ವಿಸ್ತೀರ್ಣ	ಚಕ್ಕುಬಂದಿ			
		ಪೂರ್ವಕ್ಕೆ :	ಪಶ್ಚಿಮಕ್ಕೆ :	ಉತ್ತರಕ್ಕೆ :	ದಕ್ಷಿಣಕ್ಕೆ :
3(ಭಾಗ)	25 ಎಕರೆ 11 ಗುಂಟೆಗಳು	ಸರ್ವೆ ನಂ.4	ಸರ್ವೆ ನಂ.3ರ ಉಳಿದ ಭಾಗ ಮತ್ತು ಬೂದಿಗೆರೆ ಮುಖ್ಯ ರಸ್ತೆ	ನಿಂಬೆಕಾಯಿಪುರ ಗ್ರಾಮದ ಗಡಿ	ಬೆಂಗಳೂರು–ಮದ್ರಾಸ್ ರಸ್ತೆ
4(ಭಾಗ)	02 ಎಕರೆ 35 ಗುಂಟೆಗಳು	ಸರ್ವೆ ನಂ.4ರ ಉಳಿದ ಭಾಗ	ಸರ್ವೆ ನಂ.3	ನಿಂಬೆಕಾಯಿಪುರ ಗ್ರಾಮದ ಗಡಿ	ಬೆಂಗಳೂರು–ಮದ್ರಾಸ್ ರಸ್ತೆ

ಸಹಿ/–
ಶ್ರೀನಿವಾಸ್ ಬಿ.ಆರ್ ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7, ಬ್ರೂಂಟನ್ ರಸ್ತೆ,
ಕ್ರೈಗ್ ಪಾರ್ಕ್ ಲೇಔಟ್, ಬೆಂಗಳೂರು – 560025, ದೂ. ಸಂ. 080–69548770.

ದಿನಾಂಕ: 30.01.2023
ಸ್ಥಳ: ಬೆಂಗಳೂರು

ಸಾಹಿತಿ ಹಂ.ಪ. ನಾಗರಾಜಯ್ಯ ಬೇಸರ

'ಹಳಗನ್ನಡಕ್ಕೆ ಗೌಣ ಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವಿದ್ಯಾಲಯಗಳಲ್ಲಿ ಹಳಗನ್ನಡ, ವಿದ್ವತ್ತು ಹಾಗೂ ಪಾಂಡಿತ್ಯಕ್ಕೆ ಗೌಣ ಸ್ಥಾನ ದೊರೆಯುತ್ತಿದ್ದು, ಪಾಂಡಿತ್ಯವನ್ನು ಪೋಷಿಸುವ ವಾತಾವರಣ ಮತ್ತೆ ಉಂಟಾಗಲಿ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಆಶಿಸಿದರು.

ಸಾಹಿತಿ ಪಿ.ವಿ.ನಾರಾಯಣ ಅವರಿಗೆ 80 ವರ್ಷ ತುಂಬಿದ ಪ್ರಯುಕ್ತ ಡಾ.ಪಿ.ವಿ. ನಾರಾಯಣ ಅಭಿನಂದನಾ ಸಮಿತಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ತಾಯಿ ಬೇರಾದ ಹಳಗನ್ನಡಕ್ಕೆ ಇದು ವಿಷಮ ಕಾಲ. ಹಳಗನ್ನಡವನ್ನು ಜೀವಂತವಾಗಿಡಲು ಹಲವು ವಿದ್ವಾಂಸರು ಶ್ರಮಿಸಿದ್ದು, ಅವರಲ್ಲಿ ಪಿ.ವಿ.ನಾರಾಯಣ ಪ್ರಮುಖರು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರು ಹಲವು ವಿದ್ವತ್ಪೂರ್ಣ ಕೃತಿಗಳನ್ನು ನೀಡಿದ್ದಾರೆ. ಚಂಪು ಕಾವ್ಯದಲ್ಲಿ ಕೆಲಸ ಮಾಡಿದ್ದರಿಂದ ಅವರಿಗೆ 'ಚಂಪು ನಾರಾಯಣ' ಎಂಬ ಗೌರವ ಪದವಿ ನೀಡುತ್ತೇನೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿನಂದನೆ ಸಮಾರಂಭದಲ್ಲಿ ವಿದ್ವಾಂಸ ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು (ಬಲದಿಂದ ಎರಡನೆಯವರು) ಪಿ.ವಿ.ನಾರಾಯಣ (ಬಲಗಡೆಯವರು) ಅವರ ಕುರಿತ 'ಕನ್ನಡ ಪ್ರಧಾನ' ಅಭಿನಂದನಾ ಗ್ರಂಥವನ್ನು ಲೋಕಾರ್ಪಣೆ ಮಾಡಿದರು. (ಎಡದಿಂದ) ಕೃತಿಯ ಸಂಪಾದಕ ಆರ್.ಲಕ್ಷ್ಮೀನಾರಾಯಣ, ಬೆಂಗಳೂರು ವಿ.ವಿ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕಿ ಎಚ್.ಶಶಿಕಲಾ, ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಹಾಗೂ ಹಂ.ಪ.ನಾಗರಾಜಯ್ಯ ಇದ್ದಾರೆ. –ಪ್ರಜಾವಾಣಿ ಚಿತ್ರ

ಸಾಹಿತಿ ಪ್ರೊ.ಜಿ.ಎಸ್. ಸಿದ್ದಲಿಂಗಯ್ಯ, 'ಸಾಹಿತ್ಯ ಕ್ಷೇತ್ರದಲ್ಲಿ ನಾರಾಯಣ ಅವರದು ಅದ್ಭುತ ಸೇವೆ. ನಾಟಕಗಳು, ಕಾವ್ಯಗಳನ್ನು ಅನುವಾದಿಸಿದ್ದಾರೆ. ಕನ್ನಡದ ಕೆಲಸಕ್ಕೆ ಯಾವಾಗಲೂ ಪ್ರಥಮವಾಗಿ ನಿಂತವರು ಅವರು' ಎಂದು ಶ್ಲಾಘಿಸಿದರು.

ಅಭಿನಂದನೆ ಸ್ವೀಕರಿಸಿದ ಪಿ.ವಿ. ನಾರಾಯಣ ಅವರು, 'ಹಳಗನ್ನಡ ಶ್ರೇಷ್ಠ ಎಂಬುದನ್ನು ಒಪ್ಪಿಕೊಳ್ಳಬೇಕಾಗಿಲ್ಲ. ಆದರೆ, ಹಳಗನ್ನಡದಲ್ಲೂ ಶ್ರೇಷ್ಠವಾದದ್ದಿದೆ ಎಂಬುದನ್ನು ಗುರುತಿಸಬೇಕು. ಮೂಲಭೂತವಾದ ಮನುಷ್ಯನ ಭಾವನೆಗಳು, ಆಗುಹೋಗುಗಳು, ನೋವುಗಳು ಎಲ್ಲ ಕಾಲಕ್ಕೂ ಒಂದೇ ಆಗಿರುತ್ತದೆ. ಇದರಲ್ಲಿ ವ್ಯತ್ಯಾಸವಾಗುವುದಿಲ್ಲ' ಎಂದರು.

ಅಭಿನಂದನಾ ಗ್ರಂಥದ ಸಂಪಾದಕ ಆರ್.ಲಕ್ಷ್ಮೀನಾರಾಯಣ, 'ನಾರಾಯಣ ಅವರು ತಮ್ಮ ಕೃತಿಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟವಾದ ಛಾಪು ಮೂಡಿಸಿದ್ದಾರೆ. ಅವರ ಸಂಶೋಧನೆ ಮತ್ತು ವಿಮರ್ಶೆ ಹೆಚ್ಚಾಗಿ ವಚನ ಸಾಹಿತ್ಯಕ್ಕೆ ಸಂಬಂಧಿಸಿದ್ದಾಗಿದೆ. ಅವರು ರಚಿಸಿರುವ ನಾಲ್ಕು ನಿಘಂಟುಗಳು ಹಳಗನ್ನಡದಲ್ಲಿನ ಅವರ ತಲಸ್ಪರ್ಶಿ ಪಾಂಡಿತ್ಯಕ್ಕೆ ಸಾಕ್ಷಿ' ಎಂದರು.

ಫಲಪುಷ್ಪ ಪ್ರದರ್ಶನ: ₹26 ಲಕ್ಷ ಸಂಗ್ರಹ

ಬೆಂಗಳೂರು: 'ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನವನ್ನು ಭಾನುವಾರ 37,931 ಜನ ವೀಕ್ಷಿಸಿದರು. ₹26,41,930 ಸಂಗ್ರಹವಾಗಿದೆ' ಎಂದು ಲಾಲ್‌ಬಾಗ್ ಉದ್ಯಾನದ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದ್ದಾರೆ.

ತೋಟಗಾರಿಕೆ ಇಲಾಖೆ ಏರ್ಪಡಿಸಿದ್ದ ಈ ಪ್ರದರ್ಶನದಲ್ಲಿ ಬೆಂಗಳೂರಿನ 1500 ವರ್ಷಗಳ ಇತಿಹಾಸ ಅನಾವರಣಗೊಳಿಸಲಾಗಿದೆ. ವಾರಾಂತ್ಯದಲ್ಲಿ ವೀಕ್ಷಕರ ಸಂಖ್ಯೆ ಅಧಿಕವಾಗಿತ್ತು. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಜಂಗುಳಿ ಇತ್ತು.

'ಹಿಂಡನ್‌ಬರ್ಗ್ ವರದಿ ಭಾರತದ ಮೇಲಿನ ದಾಳಿ'

ನವದೆಹಲಿ (ಪಿಟಿಐ, ರಾಯಿಟರ್ಸ್): ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ತನ್ನ ವಿರುದ್ಧ ಪ್ರಕಟಿಸಿರುವ ವರದಿಯು 'ಪರಿಣಾಮಗಳ ಬಗ್ಗೆ ಅರಿವಿದ್ದು ಭಾರತದ ಮೇಲೆ, ಅದರ ಸಂಸ್ಥೆಗಳ ಮೇಲೆ ಹಾಗೂ ಬೆಳವಣಿಗೆಯ ಮೇಲೆ ನಡೆಸಿರುವ ದಾಳಿ' ಎಂದು ಅದಾನಿ ಸಮೂಹ ಬಣ್ಣಿಸಿದೆ.

ಅದಾನಿ ಸಮೂಹವು ಒಟ್ಟು 413 ಪುಟಗಳ ಪ್ರತಿಕ್ರಿಯೆಯನ್ನು ನೀಡಿದ್ದು, ಸಂಸ್ಥೆಯ ವರದಿಯಲ್ಲಿ ಇರುವ ಆರೋಪಗಳು ಸುಳ್ಳು ಎಂದು ಹೇಳಿದೆ.

'ಇದು ನಿರ್ದಿಷ್ಟ ಕಂಪನಿಯೊಂದರ ಮೇಲಿನ ದಾಳಿ ಮಾತ್ರವೇ ಅಲ್ಲ. ಇದು ದೇಶದ ಮೇಲೆ, ದೇಶದ ಸ್ವಾತಂತ್ರ್ಯದ ಮೇಲೆ, ದೇಶದ ಸಂಸ್ಥೆಗಳ ಗುಣಮಟ್ಟದ ಮೇಲೆ ಹಾಗೂ ದೇಶದ ಮಹತ್ವಾಕಾಂಕ್ಷೆಯ ಮೇಲೆ ನಡೆಸಿದ ದಾಳಿ' ಎಂದು ಸಮೂಹವು ತೀಕ್ಷ್ಣವಾಗಿ ಹೇಳಿದೆ.

'ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್ಸ್) ಸಮೂಹದ ಮೇಲೆ ವಿಶ್ವಾಸವಿಟ್ಟಿದ್ದಾರೆ ಮತ್ತು ಸಮೂಹವು ದ್ವಿತೀಯ ಹಂತದ ಷೇರು ಮಾರಾಟದ ಮೇಲೆ ಗಮನ ಕೇಂದ್ರೀಕರಿಸಿದೆ' ಎಂದು ಅದಾನಿ ಸಮೂಹದ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಉಂಟಾಗಿರುವ ಅಲ್ಪಾವಧಿಯ ವ್ಯತ್ಯಾಸವು ಅದಾನಿ ಎಂಟರ್‌ಪ್ರೈಸಸ್ ಸಮೂಹದ ಮೇಲೂ ಪರಿಣಾಮ ಬೀರಿಲ್ಲ. ಅಲ್ಲದೆ, ಹೂಡಿಕೆದಾರರೂ ಆತಂಕ ವ್ಯಕ್ತಪಡಿಸಿಲ್ಲ. ಉದ್ದಿಮೆ ಮತ್ತು ಲಾಭದ ಕುರಿತು ವಿಶ್ವಾಸ ಹೊಂದಿದ್ದಾರೆ ಎಂದರು.

'ಅಧ್ಯಾತ್ಮದ ಸ್ಪರ್ಶವಿಲ್ಲದ ಜ್ಞಾನ ನಿರರ್ಥಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎರಡೂವರೆ ಸಾವಿರ ವರ್ಷಗಳ ಹಿಂದೆ ಭಗವಾನ್ ಬುದ್ಧ ಹೇಳಿದ ಸರಳತೆ, ಜ್ಞಾನ, ಚಿತ್ತ ನಿಯಂತ್ರಣ, ಸತ್ಯ, ಧರ್ಮಗಳ ಮೇಲಿನ ಬೋಧನೆಗಳು ಇಂದಿಗೂ ಪ್ರಸ್ತುತ. ಅಧ್ಯಾತ್ಮದ ಸ್ಪರ್ಶವಿಲ್ಲದ ಜ್ಞಾನ ಅಪ್ರಯೋಜಕ' ಎಂದು ಮಹಾಬೋಧಿ ಸಂಶೋಧನ ಕೇಂದ್ರದ ನಿರ್ದೇಶಕ ಭಿಕ್ಕು ಬುದ್ಧದತ್ತ ಭಾನುವಾರ ಇಲ್ಲಿ ಹೇಳಿದರು.

ಅಯೋಧ್ಯಾ ಪಬ್ಲಿಕೇಶನ್ಸ್ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಹಿಂದೂ ಎಂದರೇನು?', 'ಎದ್ದೇಳು ಭಾರತೀಯ', 'ಸ್ವಾಮಿ ಸಿದ್ಧೇಶ್ವರರ ಕಥೆಗಳು' ಹಾಗೂ 'ಧಮ್ಮಪದ' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಬುದ್ಧ ಪ್ರೇಮದ ಸಂದೇಶವನ್ನು ಜಗತ್ತಿಗೆ ಸಾರಿದ. ಆತನು ಜೇತವನದಲ್ಲಿ ಶ್ರಮಣರಿಗೆ ನೀಡಿದ ಸಂದೇಶಗಳ ಸಾರ ಸಂಗ್ರಹವೇ ಧಮ್ಮಪದ. ಎಲ್ಲರೂ ಧಮ್ಮಪದದ ಗಾಹೆಗಳನ್ನು ಅನುಸಂಧಾನ ಮಾಡಿಕೊಂಡು, ಬಾಳುವೆ ಮಾಡಿದರೆ ಸಮಸ್ಯೆಗಳೆಲ್ಲ ನಿವಾರಣೆಯಾಗುತ್ತವೆ' ಎಂದರು.



ನಾಲ್ಕು ಪುಸ್ತಕಗಳನ್ನು ಭಿಕ್ಕು ಬುದ್ಧದತ್ತ ಬಿಡುಗಡೆ ಮಾಡಿದರು. ರೋಹಿತ್ ಚಕ್ರತೀರ್ಥ, ಜಿ.ಬಿ. ಹರೀಶ, ಶತಾವಧಾನಿ ಆರ್. ಗಣೇಶ್ ಮತ್ತಿತರರು ಇದ್ದಾರೆ.

ವಿದ್ವಾಂಸ ಶತಾವಧಾನಿ ಆರ್. ಗಣೇಶ್ ಅವರು, 'ಬೌದ್ಧ ದರ್ಶನ ಮತ್ತು ಸನಾತನ ಧರ್ಮಕ್ಕೂ ಶತಮಾನಗಳಿಂದ ತಿಕ್ಕಾಟ, ಸಂಘರ್ಷವಿದೆ ಎಂದು ಬಿಂಬಿಸಲಾಗುತ್ತಿದೆ. ಇದು ಪೂರ್ವಾಗ್ರಹದ ಸುಳ್ಳು ಕಥನ ಎಂಬುದು ಧಮ್ಮಪದವನ್ನು ಓದಿದರೆ ಗೊತ್ತಾಗುತ್ತದೆ' ಎಂದರು.

ಚಿಂತಕ ಜಿ.ಬಿ.ಹರೀಶ ಅವರು, 'ಬುದ್ಧ ಭಾರತದವನಲ್ಲ ಎಂದು ಪ್ರಚಾರ ಮಾಡುವ ಹುನ್ನಾರ ಇಂದು ನಡೆಯುತ್ತಿದೆ' ಎಂದರು.

ಬರಹಗಾರ ರೋಹಿತ್ ಚಕ್ರತೀರ್ಥ ಅವರು, 'ಪಠ್ಯಪುಸ್ತಕಗಳಲ್ಲಿ ಬರಗೂರು ರಾಮಚಂದ್ರಪ್ಪ ತಮ್ಮ ವಿಕೃತ ಚಿಂತನೆಗಳನ್ನು ಹರಿಯಬಿಟ್ಟು, ಬುದ್ಧನನ್ನು ವೇದ ವಿರೋಧಿಯಾಗಿ ಬಿಂಬಿಸಿದರು' ಎಂದು ಹೇಳಿದರು.

ಸುಚಿತ್ರ ಸಿನಿಮಾ ಮತ್ತು ಸಂಸ್ಕೃತಿ ಅಕಾಡೆಮಿಯ ಟ್ರಸ್ಟಿ ವೃಷಾಂಕ್ ಭಟ್, 'ಬುದ್ಧನ ಅನುಯಾಯಿಗಳೆಂದು ಹೇಳಿಕೊಳ್ಳುವವರು ಬುದ್ಧನ ಧಮ್ಮಪದವನ್ನು ಓದಿರುವಂತೆ ಕಾಣುವುದಿಲ್ಲ' ಎಂದು ಅಭಿಪ್ರಾಯಪಟ್ಟರು.

ನಗರದಲ್ಲಿ ಇಂದು

'ಕಾಂಕ್ರೀಟ್ ಕಟ್ಟಡದಲ್ಲಿ ಅತ್ಯಾಧುನಿಕ ಜಲನಿರೋಧಕ ವ್ಯವಸ್ಥೆ' ವಿಷಯ ಕುರಿತು ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಎಚ್.ಕೆ. ರಾಮರಾಜು, ಪ್ರಾಸ್ತಾವಿಕ: ಎಚ್. ಆರ್.ಗಿರೀಶ್, ಅತಿಥಿ: ಎಂ.ಎನ್.ರಮೇಶ್, ಅಧ್ಯಕ್ಷತೆ: ಬಿ.ಜಿ.ಪ್ರಸಾದ್, ಉಪಸ್ಥಿತಿ: ಆರ್. ಸುಹಾಸ್, ಆಯೋಜನೆ: ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್, ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು, ಸ್ಥಳ: ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 9

ಸಾರ್ವಜನಿಕ ಸಾರಿಗೆ ಆ್ಯಪ್ 'ಬಸ್4ಅಸ್ ಬಜ್‌ಫೆಸ್ಟ್' ಬಿಡುಗಡೆ: ಎಂ.ಎ.ಸಲೀಂ, ಆಯೋಜನೆ ಮತ್ತು ಸ್ಥಳ: ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮತ್ತಿಕೆರೆ, ಬೆಳಿಗ್ಗೆ 10.30

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–10: ವಿಷಯ: 'ನಾಟಕರತ್ನ ಗುಬ್ಬಿ ವೀರಣ್ಣ', ಉಪನ್ಯಾಸ: ಸಿ.ವೀರಣ್ಣ, ಆಶಯ ನುಡಿ: ವ.ಚ.ಚನ್ನೇಗೌಡ, ಅಧ್ಯಕ್ಷತೆ: ರಾ.ನಂ. ಚಂದ್ರಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ. ಶ್ರೀ. ಪ್ರತಿಮೆ ಎದುರು, ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ಮೂಡ್ನಾಕೂಡು ಚಿನ್ನಸ್ವಾಮಿ ಮತ್ತು ಎಚ್.ಎಲ್. ಪುಷ್ಪಾ ಅವರಿಗೆ ಅಭಿನಂದನಾ ಸಮಾರಂಭ: ಭಾಷಣ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಬಿ.ಎಂ. ಹನೀಫ್, ಅತಿಥಿ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ದ್ವಾರನಕುಂಟೆ ಪಾತಣ್ಣ, ಆಯೋಜನೆ: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, ಸ್ಥಳ: ದತ್ತಿ ಸಭಾಂಗಣ, ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಸಂಜೆ 5.30



ಮೂಡ್ನಾಕೂಡು ಚಿನ್ನಸ್ವಾಮಿ

ಸರ್ವೋದಯ ದಿನಾಚರಣೆ: ಉದ್ಘಾಟನೆ: ಎಚ್.ಎನ್.ನಾಗಮೋಹನ ದಾಸ್, ಅಧ್ಯಕ್ಷತೆ: ಎಸ್. ಎಂ.ಜಯಕರ, ಅತಿಥಿಗಳು: ಮಹೇಶ್ ಬಾಬು ಎನ್., ಗಾಂಧಿ ಗೀತ ಮಂಡನೆ: ರತ್ನ ಸಕಲೇಶಪುರ, ಎಲ್ಲರ ಗಾಂಧೀಜಿ ರಂಗ ಮಂಡನೆ: ರಂಗ ಚಿರಂತನ ಥಿಯೇಟರ್ ಕ್ಲಬ್, ಗಾಂಧಿ ಚಿಂತನೆ ಯುವ ಸ್ಪಂದನಕ್ಕೆ ಚಾಲನೆ: ಮಂಜುನಾಥ್ ನೆಟ್ಕಲ್, ಆಯೋಜನೆ: ಗಾಂಧಿ ಅಧ್ಯಯನ ಕೇಂದ್ರ, ಸ್ಥಳ: ಗಾಂಧಿ ಭವನ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ನಾಗಮೋಹನ ದಾಸ್

ಎಲ್.ಕೆ.ಅತೀಕ್ ಅವರೊಂದಿಗೆ ಸಂವಾದ ಸಭೆ: ಅತಿಥಿ: ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಅಧ್ಯಕ್ಷತೆ: ಕೆ.ಎನ್.ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ: ಕಾಸಿಯಾ, ವಿಜಯನಗರ, ಮಧ್ಯಾಹ್ನ 3

ಗಾಂಧೀಜಿ ಪುಣ್ಯಸ್ಮರಣೆ, ಹುತಾತ್ಮ ದಿನಾಚರಣೆ: ಅಧ್ಯಕ್ಷತೆ: ಎಂ.ಪಿ.ನಾಡಗೌಡ, ಪುಷ್ಪ ನಮನ: ಬಿ.ಟಿ.ಲಲಿತಾ ನಾಯಕ್, ಪ್ರಾಸ್ತಾವಿಕ ನುಡಿ: ಪಿ.ಎಸ್.ಪ್ರಕಾಶ್, ಉಪಸ್ಥಿತಿ: ಎಚ್.ಡಿ.ಬಸವರಾಜ್, ಕುಮಾರ್ ಮನೀಷ್, ಆಯೋಜನೆ: ರಾಷ್ಟ್ರಪಿತ ಮಹಾತ್ಮ ಗಾಂಧಿ ಚಿಂತನ ವೇದಿಕೆ, ಸ್ಥಳ: ಜ್ಯೋತಿ ವೃಕ್ಷ, ಲಲಿತ್ ಅಶೋಕ್ ಹೋಟೆಲ್ ಆವರಣ, ಕುಮಾರಕೃಪಾ ರಸ್ತೆ, ಸಂಜೆ 4.15

ರಾಷ್ಟ್ರಕವಿ ಕುವೆಂಪು, ದ.ರಾ. ಬೇಂದ್ರೆ ಜನ್ಮದಿನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಎಸ್.ಜಿ.ಸಿದ್ಧರಾಮಯ್ಯ, ಪ್ರಶಸ್ತಿ ಪ್ರದಾನ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಅಧ್ಯಕ್ಷತೆ: ಎ.ಎಸ್.ನಾಗರಾಜಸ್ವಾಮಿ, ಉಪನ್ಯಾಸ: ಬಿ.ಸಿ. ರಾಜಕುಮಾರ್, ಅತಿಥಿ: ಕರೀಗೌಡ ಬೀಚನಹಳ್ಳಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ ಜನ್ಮದಿನೋತ್ಸವ: ಉದ್ಘಾಟನೆ: ದೊಡ್ಡರಂಗೇಗೌಡ, ಅತಿಥಿ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ದೊಡ್ಡ ರಂಗೇಗೌಡ

ಸಂವಾದ ಕಾರ್ಯಕ್ರಮ: ಅತಿಥಿ: ಎಂ.ಎ. ಸಲೀಂ, ಅಧ್ಯಕ್ಷತೆ: ಬಿ.ವಿ. ಗೋಪಾಲ್ ರೆಡ್ಡಿ, ಉಪಸ್ಥಿತಿ: ರಮೇಶ್ ಚಂದ್ರ ಲಹೋತಿ, ಎಂ.ಜಿ. ಬಾಲಕೃಷ್ಣ, ಐ.ಎಸ್. ಪ್ರಸಾದ್, ವೀರೇಂದ್ರ ಎನ್. ಕಾಮತ್, ಪಿ.ಎಚ್. ರಾಜಪುರೋಹಿತ್, ಆಯೋಜನೆ ಮತ್ತು ಸ್ಥಳ: ಸರ್.ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆಂಪೇಗೌಡ ರಸ್ತೆ, ಸಂಜೆ 5

ತಿಂಗಳ ವಿಶೇಷ ಕಾರ್ಯಕ್ರಮ: ವಿಷಯ: ಬೇಂದ್ರೆ–ಭಾವಸಂಗಮ, ಅತಿಥಿ: ಆರ್.ಪಿ. ಮೋಹನ್, ಉಪನ್ಯಾಸ: ಜಿ. ಕೃಷ್ಣಪ್ಪ, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

EDUCATION CORNER ಕ್ಲಾಸಿಫೈಡ್ಸ್

ST. BENEDICT'S ACADEMY RESIDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2023 - 24
Fee, Food, Hostel facilities for One (1) Year- One Lakh only in Installments
Free Academy for NCC, Karate, Kung Fu-Wu, Counseling, Yoga.
St. Benedict's Group of Institutions, Anchpalaya, Kengeri, Mysore Road, Bangalore.
Contact: 6360498834/ 9886812398
Mail: jeromeosb@gmail.com / www.sbab.in

SINCE 2004 BALC® Discount 50%
ಬಾಲ್ಕ್ Avail 50% Discount on all Computer Courses www.balc.in
Learn: Tally Prime, Adv Excel, SAP, C, C++, Java, Python AI, ML, Civil / Mechanical CADD, DTP, Web Design, Animation, Digital Marketing Training, Spoken English
SUNKADAKATTE 98860 50481 98860 50482 | ULLAL ROAD 8884 54 8887 8884 91 8887 | TOLLGATE 88847 08887 96060 72647
RAJAJINAGAR 8884 86 8882 | JAYANAGAR 8884 483 483 | BASAVANAGUDI 8884 482 482

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Security & Detectives

REPUTED SECURITY Agency Requires SECURITY GUARDS, SECURITY SUPERVISORS, FIELD OFFICERS, AREA/ TRAINING/ OPERATIONS MANAGER. 9886349781/ 6361852536

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Self Employment

INVITE APPLICATION for Self Employment Opportunity in Building Materials selling. Graduate in any Steam, 500 Sq foot Space and 2.5 Lak Investment. Send text message if intersted to 7483159770

REAL ESTATE BUYING

Joint Development

General

REQUIRE LAND for JD or Out Rate Layout. Good Location. Agents, Please Excuse. Contact: 9448119275

REAL ESTATE SELLING

General

South

SALE 2 acres ideal Naturopathi Clinic, Housing, Industry, 4 lakhs cent Negotiable, Bajal Mangaluru. 9449821928. paisclarence@gmail.com

Sites

Hesaraghatta

AASARE ENCLAVE 30x40 Sites for SALE, Near Hesaraghatta Main Road, Gopalapura. Good Location. Contact: 8722227750

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact: 9845114560 : 9731810277 9901641752 : 9886213331 080 - 45557163 / 164
*conditions apply

BUILDERS ESSENTIAL

Building Contractors

CONSTRUCTION OF RESIDENTIAL and COMMERCIAL Buildings Done. ARCHITECT Designed, VAASTU Compliant, FAST TRACK Construction GENUINE Materials and ALL APPROVALS/ PERMISSIONS taken care. Contact: 9980883950

PERSONAL

Change of Name

CHANGE OF NAME
I, URMILA DEVI LATH Residing at No. 156, 22nd 'A' Main, 2nd Floor, Raghavendra Layout, Padmanabhanagar, BSK 2nd Stage, Bangalore-560070, have changed my name to **UMA LATH**, vide affidavit dated 28.01.2023, before notary Mohammed Hussain. K, Bangalore.

ತ್ಯಾಜ್ಯ ವಿಲೇವಾರಿ: ಸ್ಥಳ ಹುಡುಕಾಟದಲ್ಲಿ ಬಿಬಿಎಂಪಿ • 3 ವರ್ಷದಿಂದ ಕಾರ್ಯಗತಕ್ಕೆ ಕಂಟಕ

‘ಮಿನಿ ಟ್ರಾನ್ಸ್‌ಫರ್ ಸ್ಟೇಷನ್’ಗೆ ವಿರೋಧ

• ಆರ್. ಮಂಜುನಾಥ್

ಜೆ. ಸಿ. ರಸ್ತೆಯ ‘ಮಿನಿ ಟ್ರಾನ್ಸ್‌ಫರ್ ಸ್ಟೇಷನ್’ ಕಾರ್ಯಾಚರಣೆ ಹಂತಗಳು

ಪ್ರಜಾವಾಣಿ ವಿಶೇಷ

ಬೆಂಗಳೂರು: ರಸ್ತೆ, ತೆರೆದ ಪ್ರದೇಶದಲ್ಲಿ ಕಸ ವರ್ಗಾವಣೆ, ದ್ರವ ತ್ಯಾಜ್ಯದ ಸಮಸ್ಯೆ, ಬೀದಿ ಪ್ರಾಣಿಗಳಿಂದ ಎರೆಚಾಟ, ಕಾಂಪ್ಯಾಕ್ಟರ್‌ಗಳ ಓಡಾಟ ಕಡಿಮೆಗೊಳಿಸುವ ‘ಮಿನಿ ಟ್ರಾನ್ಸ್‌ಫರ್ ಸ್ಟೇಷನ್’ (ಎಂಟಿಎಸ್) ಸ್ಥಾಪನೆಗೆ ನಾಗರಿಕರ ವಿರೋಧ ವ್ಯಕ್ತವಾಗಿದೆ. ಹೀಗಾಗಿ, ಮೂರು ವರ್ಷವಾದರೂ 9 ಕೇಂದ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.

ಎಂಟಿಎಸ್ ಅನ್ನು 30x40 ಅಡಿ ಅಳತೆಯ ಸುಮಾರು ಒಂದು ಸಾವಿರ ಚದರ ಅಡಿ ಸ್ಥಳದಲ್ಲಿ ಸ್ಥಾಪಿಸಬಹುದು. ಟ್ರಕ್ ಕೊಂಡೊಯ್ಯಬಹುದಾದ ಪೋರ್ಟಬಲ್ ಕಾಂಪ್ಯಾಕ್ಟರ್, ಹುಕ್ ಲೋಡರ್ ಇರುತ್ತವೆ. ತಲಾ ಒಬ್ಬ ಆಪರೇಟರ್, ಚಾಲಕ, ಸಹಾಯಕ, ಇಬ್ಬರು ಭದ್ರತಾ ಸಿಬ್ಬಂದಿ ಸೇರಿದಂತೆ ಐವರು ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಾರೆ.

‘ವಾರ್ಡ್‌ಗಳಲ್ಲಿ ಆಟೊ, ಟಿಪ್ಪರ್ ಹಾಗೂ ಕೈಗಾಡಿಗಳಿಂದ ಹಸಿ ಕಸ ನೇರವಾಗಿ ಕಾಂಪ್ಯಾಕ್ಟರ್‌ಗಳಿಗೆ ರಸ್ತೆ ಅಥವಾ ಕೆಲವು ತೆರೆದ ಪ್ರದೇಶಗಳಲ್ಲಿ ವರ್ಗಾವಣೆ ಆಗುತ್ತಿದೆ. ಈ ಜಾಗದಲ್ಲಿ ದ್ರವ ತ್ಯಾಜ್ಯ, ತ್ಯಾಜ್ಯ ಚೆಲ್ಲಿರುವ ಪ್ರಕರಣಗಳದ್ದೇ ಸಮಸ್ಯೆ. ಇದನ್ನು ಎಂಟಿಎಸ್ ನಿವಾರಿಸಲಿದೆ. ಆಟೊ, ಟಿಪ್ಪರ್‌ಗಳಿಂದ ಬರುವ ಕಸ ಎಂಟಿಎಸ್ ಕೇಂದ್ರದಲ್ಲಿರುವ ಪೋರ್ಟಬಲ್ ಕಾಂಪ್ಯಾಕ್ಟರ್‌ಗೆ ವರ್ಗಾವಣೆಯಾಗುತ್ತದೆ. ಅಲ್ಲಿ, ತ್ಯಾಜ್ಯವನ್ನು ಕಾಂಪ್ಯಾಕ್ಟ್ ಮಾಡುವ ಜೊತೆಗೆ ದ್ರವ ತ್ಯಾಜ್ಯವನ್ನು ಹೊರಹಾಕಲಾಗುತ್ತದೆ. ಅಲ್ಲಿಂದ ಸಂಸ್ಕರಣೆಗೆ ಘಟಕಕ್ಕೆ ಟ್ರಕ್‌ಗಳಲ್ಲಿ ತೆರಳುತ್ತದೆ’ ಎಂದು ಘನತ್ಯಾಜ್ಯ ನಿರ್ವಹಣೆ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಂತೋಷ್ ವಿವರ ನೀಡಿದರು.

‘ದಿನದ ಎಲ್ಲ ಸಮಯವೂ ಕಾರ್ಯನಿರ್ವಹಿಸುವ ಎಂಟಿಎಸ್‌ಗಳನ್ನು ಒಂದೇ ರೀತಿಯಲ್ಲಿ ಸ್ಥಾಪಿಸಲಾಗುತ್ತದೆ. ಇದರ ನೀಲನಕ್ಷೆ ಇದೆ. ಯಾವುದೇ ರೀತಿಯ ಸಮಸ್ಯೆ ಸುತ್ತಮುತ್ತಲಿನವರಿಗೆ ಉಂಟಾಗುವುದಿಲ್ಲ’ ಎಂದು ಎಂಜಿನಿಯರ್ ಮಹದೇವ್ ತಿಳಿಸಿದರು.

ರಾಜ್ಯ ಸರ್ಕಾರದ ನಗರೋತ್ಥಾನ ಅನುದಾನದಲ್ಲಿ ಪ್ರಥಮ ಬಾರಿಗೆ ₹136.06 ಕೋಟಿಯಲ್ಲಿ 50 ಎಂಟಿಎಸ್‌ಗಳು ಸ್ಥಾಪನೆಯಾಗಲಿವೆ. ಏಳು ವರ್ಷ ಇವುಗಳ ನಿರ್ವಹಣೆಗೆ ಒಟ್ಟಾರೆ ₹256.73 ಕೋಟಿ ವೆಚ್ಚವಾಗಲಿದೆ.

ಬಿಬಿಎಂಪಿ ಹೊರಭಾಗದಲ್ಲಿ 9 ಎಂಟಿಎಸ್ ಪ್ರಾರಂಭವಾಗಿವೆ. ಕೆಲವು ಮೇಲ್ಸೇತುವೆ ಕೆಳಗೆ ಸ್ಥಾಪಿಸಲಾಗುತ್ತಿದೆ. ಆದರೂ 50 ಎಂಟಿಎಸ್ ಸ್ಥಾಪನೆಯಾಗುವ ಸ್ಥಳದಲ್ಲಿ ಇದೀಗ 44ಕ್ಕೆ ಮಾತ್ರ ಚಾಲನೆ ಸಿಕ್ಕಿದೆ. ಇದರಲ್ಲಿ 16 ಪ್ರದೇಶಗಳಲ್ಲಿ ಸ್ಥಳೀಯರು ವಿರೋಧಿಸಿದ್ದಾರೆ. ಹೀಗಾಗಿ, ಯೋಜನೆ ಕುಂಟುತ್ತಿದೆ.

₹246.02 ಕೋಟಿ ಏಳು ವರ್ಷಗಳಿಗೆ ಒಟ್ಟಾರೆ ವೆಚ್ಚ

44 ಒಟ್ಟು ಸಣ್ಣ ವರ್ಗಾವಣೆ ಕೇಂದ್ರಗಳು

9 ಸದ್ಯ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳು

16 ಟನ್ ಪ್ರತಿನಿತ್ಯ ಒಂದು ಕೇಂದ್ರ ನಿರ್ವಹಿಸುವ ತ್ಯಾಜ್ಯ

ವಲಯ	ಕಾರ್ಯಗತ	ಬಾಕಿ
ರಾಜರಾಜೇಶ್ವರಿ ನಗರ	ಉಲ್ಲಾಳು, ಕೊಟ್ಟಿಗೆಪಾಳ್ಯ, ಲಕ್ಷ್ಮಿದೇವಿನಗರ	ಹೆಮ್ಮಿಗೆಪುರ, ಎಚ್‌ಎಂಟಿ, ಯಶವಂತಪುರ, ಲಗ್ಗೆರೆ
ಬೊಮ್ಮನಹಳ್ಳಿ	ವಸಂತಪುರ	ಅಂಜನಾಪುರ, ಗೊಟ್ಟಿಗೆರೆ, ಬೇಗೂರು, ಉತ್ತರಹಳ್ಳಿ, ಬೊಮ್ಮನಹಳ್ಳಿ, ಪುಟ್ಟೇನಹಳ್ಳಿ, ಅರಕೆರೆ, ಸಿಂಗಸಂದ್ರ
ದಕ್ಷಿಣ	ಜೆ.ಸಿ. ರಸ್ತೆ	ಕೋರಮಂಗಲ
ಪೂರ್ವ	ದೊಮ್ಮಲೂರು, ರಾಧಾಕೃಷ್ಣ ದೇವಸ್ಥಾನ, ನ್ಯೂ ತಿಪ್ಪಸಂದ್ರ	ಶಾಂತಿನಗರ, ಜೀವನಬಿಮಾನಗರ, ಹಲಸೂರು
ದಾಸರಹಳ್ಳಿ	ಶೆಟ್ಟಿಹಳ್ಳಿ	ಸಿಂಗಾಪುರ, ಮಲ್ಲಸಂದ್ರ, ಬಾಗಲಗುಂಟೆ
ಪಶ್ಚಿಮ		ಮಾರಪ್ಪನಪಾಳ್ಯ, ಗಾಂಧಿನಗರ, ಕೆ.ಆರ್. ಮಾರುಕಟ್ಟೆ
ಮಹದೇವಪುರ		ಬಸವನಪುರ, ರಾಮಮೂರ್ತಿನಗರ, ಕೆ.ಆರ್. ಪುರ, ವಾರ್ಡ್ 51, ಎಚ್‌ಎಎಲ್, ಹೊರಮಾವು, ದೊಡ್ಡನೆಕ್ಕುಂದಿ (2), ವರ್ತೂರು, ಮಂಜುನಾಥನಗರ
ಯಲಹಂಕ		ಥಣಿಸಂದ್ರ, ಬ್ಯಾಟರಾಯನಪುರ

ಕಾಂಪ್ಯಾಕ್ಟರ್‌ಗಳ ಸಂಚಾರಕ್ಕೆ ಅವಕಾಶ ನೀಡಬೇಕು

‘ಎಲ್ಲರೂ ಕಸ ನಮ್ಮಲ್ಲಿ ವರ್ಗಾವಣೆ, ವಿಂಗಡಣೆ ಬೇಡ ಎಂದರೆ ಆ ಕಾರ್ಯವನ್ನು ಎಲ್ಲಿ ಮಾಡುವುದು? ಆಯಾ ವಾರ್ಡ್‌ನ ತ್ಯಾಜ್ಯ ಅಲ್ಲಿಯೇ ಸಂಸ್ಕರಣೆಯಾಬೇಕೆಂಬ ಯೋಜನೆಯೂ ಇದೆ. ಆದರೆ, ಹಲವೆಡೆ ಎಂಟಿಎಸ್‌ಗೆ ವಿರೋಧ ವ್ಯಕ್ತವಾಗುತ್ತಿದೆ. ಹೀಗಾಗಿ ಯೋಜನೆ ವಿಳಂಬವಾಗುತ್ತಿದೆ’ ಎಂದು ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್ ಕುಮಾರ್ ಅವರು ಹೇಳಿದರು.

‘ಎಲ್ಲೆಲ್ಲಿ ಸ್ಥಳಾವಕಾಶವಿದೆಯೋ ಅಲ್ಲೆಲ್ಲ ಎಂಟಿಎಸ್ ಆರಂಭಿಸುತ್ತಿದ್ದೇವೆ. ಎಂಟಿಎಸ್ ಸ್ಥಾಪನೆಯಿಂದ ಕಾಂಪ್ಯಾಕ್ಟರ್‌ಗಳ ಸಂಚಾರ ಕಡಿಮೆಯಾಗುತ್ತದೆ. ಅವಕಾಶ ನೀಡಬೇಕು’ ಎಂದು ಘನತ್ಯಾಜ್ಯ ನಿರ್ವಹಣೆ ವಿಭಾಗದ ಜಂಟಿ ಆಯುಕ್ತ ಪರಶುರಾಮ ತಿಳಿಸಿದರು.

ಹೇಳುವುದು ಒಂದು, ನಂತರ ಮಾಡುವುದು ಇನ್ನೊಂದು

‘ಇವರು ಮೊದಲು ಹೇಳುವುದೊಂದು, ನಂತರ ಮಾಡುವುದೊಂದು. ಎಂಟಿಎಸ್ ಸ್ಥಾಪನೆ ಅದನ್ನು ಹೇಳಿದಂತೆ ನಿರ್ವಹಣೆ ಮಾಡಿದರೆ ಯಾರ ವಿರೋಧವೂ ಇರುವುದಿಲ್ಲ. ಆದರೆ, ತ್ಯಾಜ್ಯ ವಿಂಗಡಣೆ ರಸ್ತೆಯಲ್ಲಿ ಮಾಡುತ್ತಿದ್ದಾಗ ಕೆರೆ, ಉದ್ಯಾನಗಳಿಗೆ ದ್ರವ ತ್ಯಾಜ್ಯ ಹೋಗುತ್ತಿದೆ. ಅದೇ ರೀತಿ ಇದಾದರೆ ಸಂಕಷ್ಟ ಎಂಬುದೇ ಆತಂಕ’ ಎಂದು ಉತ್ತರಹಳ್ಳಿಯ ಶ್ರೀನಿವಾಸ್ ಹೇಳಿದರು.

ಸತ್ಯ ಹೇಳಿದರೆ ದೇಶದ್ರೋಹದ ಪಟ್ಟ: ಶಶಿಕುಮಾರ್ ಆತಂಕ

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ತೀಸ್ತಾ ಸೀತಲ್‌ವಾಡ್, ಶಶಿಕುಮಾರ್, ಕವಿತಾ ಲಂಕೇಶ್ ಸಮಾಲೋಚನೆಯಲ್ಲಿ ತೊಡಗಿದ್ದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸತ್ಯ ಹೇಳುವುದೇ ಮಾಧ್ಯಮಗಳ ಮುಖ್ಯವಾದ ಉದ್ದೇಶ. ಸತ್ಯ ಹೇಳಲು ಹೊರಟವರಿಗೆ ದೇಶದ್ರೋಹದ ಪಟ್ಟ ಕಟ್ಟಲಾಗುತ್ತಿದೆ’ ಎಂದು ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ ಅಧ್ಯಕ್ಷ ಶಶಿಕುಮಾರ್ ಕಳವಳ ವ್ಯಕ್ತಪಡಿಸಿದರು.

ಗೌರಿ ಮೆಮೋರಿಯಲ್ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ಗೌರಿ ಲಂಕೇಶ್ ಅವರ 61ನೇ ಜನ್ಮ ವಾರ್ಷಿಕೋತ್ಸವದಲ್ಲಿ ‘ಮೌನವಾದ ಧ್ವನಿಗಳು: ಹೊಸ ಭಾರತದಲ್ಲಿ ಪತ್ರಿಕೋದ್ಯಮಕ್ಕೆ ಇರುವ ಬೆದರಿಕೆಗಳು’ ಕುರಿತು ಉಪನ್ಯಾಸ ನೀಡಿದರು.

‘ಸಂವಿಧಾನ ಮೂಲಸ್ವರೂಪಕ್ಕೆ ಧಕ್ಕೆ ಉಂಟು ಮಾಡಲಾಗುತ್ತಿದೆ. ಈಗ ಮುಖ್ಯವಾಹಿನಿ ಮಾಧ್ಯಮಗಳು ಸಮರ್ಪಕವಾಗಿ ತಮ್ಮ ಪಾತ್ರ ನಿರ್ವಹಿಸುತ್ತಿಲ್ಲ. ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಬೇಕಾದ ವಾತಾವರಣ ಇಲ್ಲದಿರುವುದು ಇದಕ್ಕೆ ಕಾರಣ’ ಎಂದರು.

‘ಆಡಳಿತವನ್ನು ಎದುರಿಸುವ ಶಕ್ತಿ ಮಾಧ್ಯಮಗಳಿಗೆ ಇಲ್ಲವಾಗಿದೆ. ಸುಳ್ಳು ಎಂಬುದು ಗೊತ್ತಿದ್ದರೂ ಅದನ್ನು ಹೇಳುವ ಸಾಮರ್ಥ್ಯವನ್ನು ಮಾಧ್ಯಮಗಳು ಕಳೆದುಕೊಂಡಿವೆ. ಸತ್ಯವನ್ನು ಮುಚ್ಚಿ ಸುಳ್ಳನ್ನೇ ವಿಜೃಂಭಿಸಲಾಗುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ’ ಎಂದರು.

‘ಮಾಧ್ಯಮಗಳು ತಮ್ಮ ಪಾತ್ರವನ್ನು ಮರು ಅವಲೋಕನ ಮಾಡಿಕೊಳ್ಳಬೇಕಿದೆ’ ಎಂದರು.

ಮಾನವ ಹಕ್ಕು ಹೋರಾಟಗಾರ್ತಿ ತೀಸ್ತಾ ಸೀತಲ್‌ವಾಡ್, ‘ದ್ವೇಷದ ಮಾತುಗಳು ಮನೆಮನೆ ತಲುಪುತ್ತಿದ್ದು, ಶಾಂತಿ–ಸಹಬಾಳ್ವೆಯ ಮಾತುಗಳು ತಲುಪುತ್ತಿಲ್ಲ. ಇದನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ತಲುಪಿಸುವ ಪ್ರಯತ್ನ ನಡೆಯುತ್ತಿದೆ’ ಎಂದು ಅವರು ಹೇಳಿದರು.

‘ಸಾಮಾಜಿಕ ಮಾಧ್ಯಮದ ಜತೆಗೆ ಜನರ ಬಳಿಗೆ ತೆರಳಿ ಸತ್ಯ ಮತ್ತು ಶಾಂತಿ–ಸಹಬಾಳ್ವೆ ಬಗ್ಗೆ ಮನವರಿಕೆ ಮಾಡಿಕೊಡುವ ಅಗತ್ಯವಿದೆ. ಚುನಾವಣೆ ಸಂದರ್ಭದಲ್ಲಿ ಈ ಕಾರ್ಯ ಹೆಚ್ಚಾಗಿ ಮಾಡಬೇಕಿದೆ. ಹಳ್ಳಿ–ಹಳ್ಳಿಗಳಲ್ಲಿ ಜಾಗೃತಿ ಆಗಬೇಕಿದೆ’ ಎಂದರು.

ಕವಿತಾ ಲಂಕೇಶ್ ಅವರು ನಿರ್ಮಿಸಿರುವ ‘ಗೌರಿ’ ಕಿರು ಚಿತ್ರವನ್ನು ಬಿಡುಗಡೆ ಮಾಡಿ ಪ್ರದರ್ಶಿಸಲಾಯಿತು.

‘₹30 ಲಕ್ಷದಲ್ಲಿ ಕೆರೆ ಮಾಹಿತಿ ಕೇಂದ್ರ’

ಪ್ರಜಾವಾಣಿ ವಾರ್ತೆ

ಯಲಹಂಕ ಪುಟ್ಟೇನಹಳ್ಳಿ ಕೆರೆ ಹಬ್ಬದಲ್ಲಿ ಚಿತ್ರ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

ಬೆಂಗಳೂರು: ಯಲಹಂಕದ ಪುಟ್ಟೇನಹಳ್ಳಿ ಕೆರೆ ಆವರಣದಲ್ಲಿ ‘ಕೆರೆ ಮಾಹಿತಿ ಕೇಂದ್ರ’ವನ್ನು ಆರಂಭಿಸಲಾಗುವುದು ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಅವರು ಭಾನುವಾರ ಹೇಳಿದರು.

ಕೆರೆಯ ಪ್ರಾಮುಖ್ಯ, ಪ್ರಯೋಜನವನ್ನು ವಿದ್ಯಾರ್ಥಿಗಳು, ಪರಿಸರಪ್ರೇಮಿಗಳು ಹಾಗೂ ಸ್ಥಳೀಯರಿಗೆ ತಿಳಿಸಿಕೊಸಲು ಅರಣ್ಯ ಇಲಾಖೆ, ಯಲಹಂಕ ಪುಟ್ಟೇನಹಳ್ಳಿ ಕೆರೆ, ಪಕ್ಷಿ ಸಂರಕ್ಷಣೆ ಟ್ರಸ್ಟ್ ಸಹಯೋಗದಲ್ಲಿ ₹30 ಲಕ್ಷ ವೆಚ್ಚದಲ್ಲಿ ಕೇಂದ್ರ ಸ್ಥಾಪಿಸಲಾಗುವುದು ಎಂದರು.

‘ಪುಟ್ಟೇನಹಳ್ಳಿ ಕೆರೆ ಹಬ್ಬ’ವನ್ನು ಉದ್ಘಾಟಿಸಿ ಮಾತನಾಡಿದ ವಿಶ್ವನಾಥ್, ‘ಪುಟ್ಟೇನಹಳ್ಳಿ ಕೆರೆಯನ್ನು ಮಾದರಿ ಕೆರೆಯಾಗಿ ಅಭಿವೃದ್ಧಿ ಮಾಡಲಾಗುತ್ತಿದೆ. ಪ್ರತಿ ವರ್ಷ ಪ್ರತಿ ಕೆರೆ ಆವರಣದಲ್ಲಿ ಹಬ್ಬ ಆಚರಿಸಬೇಕು. ಕೆರೆಗಳ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ’ ಎಂದರು.

ಎಪಿಸಿಸಿಎಫ್ ಕುಮಾರ್ ಪುಷ್ಕರ್ ಮಾತನಾಡಿ, ‘ಪುಟ್ಟೇನಹಳ್ಳಿ ಕೆರೆ ಅಭಿವೃದ್ಧಿಗೆ ಈವರೆಗೆ ₹10 ಕೋಟಿ ವೆಚ್ಚ ಮಾಡಲಾಗಿದೆ. ಈ ವರ್ಷ ₹80 ಲಕ್ಷ ವ್ಯಯಿಸಲು ಯೋಜಿಸಲಾಗಿದೆ. ಕೆರೆಯನ್ನು ರಕ್ಷಿಸುವಲ್ಲಿ ಸ್ಥಳೀಯರು ಹೆಚ್ಚಿನ ಆಸಕ್ತಿ ತೋರಬೇಕು’ ಎಂದರು.

ಡಿಸಿಎಫ್ ಚಕ್ರಪಾಣಿ ಮಾತನಾಡಿ, ‘ಕಾಲೇಜು ದಿನಗಳಲ್ಲಿ ಪಕ್ಷಿ ವೀಕ್ಷಣೆಗೆ ನಾವು ಹೋಗುತ್ತಿದ್ದೆವು. ಅಂತಹ ಅಪರೂಪದ ಸಮಯ ಇಲ್ಲೂ ಸವಿಯಬಹುದು. ಪುಟ್ಟೇನಹಳ್ಳಿ ಕೆರೆ ಉತ್ತಮಗೊಳಿಸಲು ಎಲ್ಲ ರೀತಿಯ ಯೋಜನೆಗಳನ್ನೂ ಕಾರ್ಯಗತ ಮಾಡಲಾಗುತ್ತದೆ’ ಎಂದರು. ಯಲಹಂಕ ಪುಟ್ಟೇನಹಳ್ಳಿ ಕೆರೆ ಮತ್ತು ಪಕ್ಷಿ ಸಂರಕ್ಷಣೆ ಟ್ರಸ್ಟ್ ಅಧ್ಯಕ್ಷ ಡಾ. ಸಂಗುಣಿ ಇದ್ದರು.

‘ಆಳುವವರು ಪರಿಕಲ್ಪನೆಯ ಹರಿಕಾರರಲ್ಲ’

ಸಾಹಿತಿ ಚಂದ್ರಶೇಖರ ಕಂಬಾರರ 87ನೇ ಜನ್ಮದಿನ ಪ್ರಯುಕ್ತ ವಿಚಾರಸಂಕಿರಣ

ಪ್ರಜಾವಾಣಿ ವಾರ್ತೆ

ಚಂದ್ರಶೇಖರ ಕಂಬಾರ ಅವರನ್ನು ಸನ್ಮಾನಿಸಲಾಯಿತು. ಸಿ.ಬಸವಲಿಂಗಯ್ಯ, ಪಿ.ಎನ್. ಶ್ರೀನಿವಾಸಾಚಾರಿ, ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್ ಅಧ್ಯಕ್ಷ ಎಸ್. ಮಾಳಿಗಾಚಾರ್, ಟಿ.ಎಸ್. ನಾಗಾಭರಣ, ವೀರೇಶ ಬಡಿಗೇರ ಇದ್ದಾರೆ. — ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದೇಶದಲ್ಲಿ ಜಾತಿ, ಹಣ, ತಂತ್ರಗಾರಿಕೆಗಳಿಂದ ಚುನಾವಣೆಗಳಲ್ಲಿ ಗೆಲುವು ಸಾಧಿಸಲಾಗುತ್ತಿದೆ. ಆದ್ದರಿಂದ ನಮ್ಮನ್ನು ಆಳುವ ನಾಯಕರು ಪರಿಕಲ್ಪನೆಯ ಹರಿಕಾರರಲ್ಲ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ತಿಳಿಸಿದರು.

ಸಾಹಿತಿ ಚಂದ್ರಶೇಖರ ಕಂಬಾರ ಅವರ 87ನೇ ಜನ್ಮದಿನದ ಪ್ರಯುಕ್ತ ಕಮಲಾಪುರದ ಮಯ ಪ್ರಕಾಶನ, ಸಿರಿನಾಡು ವೆಬ್ ಟಿವಿ ಇಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಸಾವಿರದ ಶರಣವ್ವ ಕನ್ನಡದ ತಾಯೆ’ ಸರಣಿ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಪರಿಕಲ್ಪನೆಯ ನಿಜವಾದ ಹರಿಕಾರರು ಬುದ್ಧಿಜೀವಿಗಳು. ಆದ್ದರಿಂದ ಅವರಿಗೆ ನಾಗರಿಕ ಸಮಾಜದಲ್ಲಿ ಜನಮನ್ನಣೆ ದೊರೆಯಬೇಕು. ಯಾವ ದೇಶದಲ್ಲಿ ಬುದ್ಧಿಜೀವಿಗಳಿಗೆ ಗೌರವ ದೊರೆಯುವುದೋ ಅಲ್ಲಿ ಅತ್ಯುನ್ನತ ನಾಗರಿಕತೆ ಇರಲಿದೆ’ ಎಂದರು.

‘ಸಿನಿಮಾಗಳು ಕೂಡ ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರಲಿವೆ. ಇತ್ತೀಚೆಗೆ ಪ್ರೇಕ್ಷಕರ ಅಭಿರುಚಿ ಬದಲಾಗಿದೆ. ಹಿಂಸೆ ತೋರಿಸಿದಷ್ಟೂ ಚಲನಚಿತ್ರದ ಮಾರುಕಟ್ಟೆ ವಿಸ್ತರಿಸುತ್ತದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಚಂದ್ರಶೇಖರ ಕಂಬಾರ, ‘ಬರವಣಿಗೆ ಪರಿಣಾಮಕಾರಿಯಾಗಿ ಓದುಗನನ್ನು ತಲುಪಲು ನಿಶ್ಚಿತ ವಿಧಾನವನ್ನು ಅನುಸರಿಸಬೇಕು. ಆಗ ಮಾತ್ರ ಸಾಹಿತ್ಯ ಕೃತಿಗಳು ಶಾಶ್ವತವಾಗಿ ಉಳಿಯುತ್ತವೆ’ ಎಂದು ಹೇಳಿದರು.

‘ಕನ್ನಡ ರಂಗಭೂಮಿ: ಕಂಬಾರರ ಹೊಸ ಪ್ರಯೋಗಗಳು’ ಕುರಿತು ಉಪನ್ಯಾಸ ನೀಡಿದ ರಂಗಕರ್ಮಿ ಸಿ. ಬಸವಲಿಂಗಯ್ಯ, ‘ಕಂಬಾರರ ಚಿಂತನಾಕ್ರಮ ವಿನೂತನ ಹಾಗೂ ವಿಶಿಷ್ಟವಾದದ್ದಾಗಿದೆ’ ಎಂದರು.

‘ಜ್ಞಾನಪೀಠವನ್ನು ಸರ್ಕಾರ ನೀಡದ ಕಾರಣ ವಸ್ತುನಿಷ್ಠ ಆಯ್ಕೆಗಳು ನಡೆಯುತ್ತವೆ. ಸರ್ಕಾರವೇ ನೀಡುವುದಾಗಿದ್ದರೆ ಪದ್ಮ ಪ್ರಶಸ್ತಿಗಳ ರೀತಿ ಹಂಚಲಾಗುತ್ತಿತ್ತು’ ಎಂದರು.

‘ಕನ್ನಡ ಚಲನಚಿತ್ರ: ಕಂಬಾರರ ಪ್ರಯೋಗಶೀಲತೆ’ ಎಂಬ ವಿಷಯದ ಮೇಲೆ ನಿರ್ದೇಶಕ ಟಿ.ಎಸ್. ನಾಗಾಭರಣ, ‘ಕನ್ನಡ ವಿಶ್ವವಿದ್ಯಾಲಯ: ಕಂಬಾರರ ಪ್ರಯೋಗಗಳು’ ಎಂಬ ವಿಷಯದ ಮೇಲೆ ವಿಮರ್ಶಕ ಬಸವರಾಜ ಕಲ್ಗುಡಿ ಮಾತನಾಡಿದರು.

ರಾಜಾನುಕುಂಟೆ: ಗ್ರಾ.ಪಂ. ಅಧ್ಯಕ್ಷ ಆಯ್ಕೆ

ಯಲಹಂಕ: ರಾಜಾನುಕುಂಟೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಎಸ್.ಜಿ.ನರಸಿಂಹ ಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಿಂದೆ ಅಧ್ಯಕ್ಷರಾಗಿದ್ದ ಕೆ.ವೀರಣ್ಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಸೋಮವಾರ ಚುನಾವಣೆ ನಡೆಯಿತು.

ಚಿತ್ರಾವಳಿ

ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನದಲ್ಲಿ ನಡೆದ ತೋಟಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂ) ಮುಖ್ಯ ಆಡಳಿತಾಧಿಕಾರಿಗಳ ಕಚೇರಿಯ ಸಿಬ್ಬಂದಿಗೆ ಶನಿವಾರ ಶಾಸಕ ಉದಯ್ ಬಿ ಗರುಡಾಚಾರ್ ಟ್ರೋಫಿ ಮತ್ತು ಪ್ರಶಸ್ತಿ ಪತ್ರ ವಿತರಿಸಿದರು. — ಪ್ರಜಾವಾಣಿ ಚಿತ್ರ

ವಿಜಯನಗರದ ಯುವಪಥ ವಿವೇಕ್ ಸಭಾಂಗಣದಲ್ಲಿ ಶ್ರೀಮ್ಯೂಸಿಕ್ ಮತ್ತು ಉನ್ನತಿ ಸೇವಾ ಟ್ರಸ್ಟ್ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ವಿದ್ವಾಂಸ ಎಂ.ಪಿ. ಹೆಗಡೆ ಪಡಿಗೆರೆ ಅವರನ್ನು ಸನ್ಮಾನಿಸಲಾಯಿತು. ಸಾಹಿತಿ ಚಂದ್ರಶೇಖರ ಕಂಬಾರ, ಪ.ರಾ. ಕೃಷ್ಣಮೂರ್ತಿ, ಜೀವನ ಯೋಗಾಚಾರ್ಯ ಅರುಣ್ ಪ್ರಕಾಶ್, ಸಿಂಚನಾ ಭಟ್ ಇದ್ದಾರೆ.

ಅನುದಾನ ವರ್ಗಾವಣೆ: ಹೋರಾಟಕ್ಕೆ ನಿರ್ಧಾರ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದಲ್ಲಿನ (ಎಸ್‌ಟಿ) ಅಲೆಮಾರಿ ಸಮುದಾಯಗಳ ಜನರ ವಸತಿ ಯೋಜನೆಗೆ ಮೀಸಲಿಟ್ಟಿದ್ದ ₹300 ಕೋಟಿ ಅನುದಾನವನ್ನು ಬೇರೆ ವಸತಿ ಯೋಜನೆಗೆ ವರ್ಗಾವಣೆ ಮಾಡಿರುವುದನ್ನು ಖಂಡಿಸಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಎಸ್‌ಸಿಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ನಿರ್ಧರಿಸಿದೆ.

ಭಾನುವಾರ ಸಭೆ ನಡೆಸಿದ ಮುಖಂಡರು, ‘ಅಲೆಮಾರಿ ಸಮುದಾಯದ ವಸತಿ ಮತ್ತು ಇತರೆ ಅಭಿವೃದ್ಧಿಗೆ ಮೀಸಲಿಟ್ಟಿದ್ದ ₹300 ಕೋಟಿ ಅನುದಾನವನ್ನು ವರ್ಗಾವಣೆ ಮಾಡಲಾಗಿದೆ. 2021–22ನೇ ಸಾಲಿನಲ್ಲೂ ₹250 ಕೋಟಿ ಕಡಿತಗೊಳಿಸಲಾಗಿದೆ. ಒಟ್ಟು ₹550 ಕೋಟಿ ಅನುದಾನ ಕಡಿತಗೊಳಿಸಿ ಅಲೆಮಾರಿ ಸಮುದಾಯಗಳನ್ನು ವಂಚಿಸಲಾಗಿದೆ’ ದೂರಿದರು.

ಈ ಬಗ್ಗೆ ಮುಖ್ಯಮಂತ್ರಿ ಮತ್ತು ಸಚಿವರನ್ನು ಭೇಟಿ ಮಾಡಿ ಬೇಡಿಕೆ ಸಲ್ಲಿಸಲು ಮತ್ತು ರಾಜಧಾನಿಯಲ್ಲೂ ದೊಡ್ಡ ಮಟ್ಟದ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ ತಿಳಿಸಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅನಂತನಾಯಕ್, ಮಹಾಸಭಾ ಅಧ್ಯಕ್ಷ ಮಂಜುನಾಥ್ ದಾಯತ್ಕರ್, ಕಾರ್ಯಾಧ್ಯಕ್ಷ ಆದರ್ಶ ಯಲಪ್ಪ ಇದ್ದರು.

ಆವಣಿಯಲ್ಲಿ ಲವ–ಕುಶ ಮಂದಿರಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ಅಯೋಧ್ಯೆ ರಾಮಜನ್ಮಭೂಮಿ ಟ್ರಸ್ಟ್ ಅಧ್ಯಕ್ಷ ಮಹಂತ್ ನೃತ್ಯ ಗೋಪಾಲ್ ದಾಸ್ ಮಹಾರಾಜ್ ಮತ್ತು ಉಪಾಧ್ಯಕ್ಷ ಕಮಲ ನಯನದಾಸ್ ಶಾಸ್ತ್ರಿ, ಸಂಸದ ಎಸ್. ಮುನಿಸ್ವಾಮಿ ಆವಣಿಯಲ್ಲಿ ಲವ–ಕುಶ ಮಂದಿರಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಐತಿಹಾಸಿಕ ಮತ್ತು ಪೌರಾಣಿಕವಾಗಿ ಮಹತ್ವ ಪಡೆದಿರುವ ಆವಂತಿಕಾ ಕ್ಷೇತ್ರ ಎಂಬ ಖ್ಯಾತಿ ಪಡೆದಿರುವ ಆವಣಿಯಲ್ಲಿ ಸೀತೆಯು ಲವ–ಕುಶರಿಗೆ ಜನ್ಮನೀಡಿದ ಪವಿತ್ರ ಸ್ಥಳ ಎಂಬ ನಂಬಿಕೆ ಇದೆ. ಈ ಹಿನ್ನಲೆಯಲ್ಲಿ ಲವ–ಕುಶ ಮಂದಿರ ನಿರ್ಮಾಣ ಆಗಲಿದೆ ಎಂದು ಮಹಂತ್ ನೃತ್ಯ ಗೋಪಾಲದಾಸ್ ಅವರು ತಿಳಿಸಿದರು.

ಸಂಸದ ಎಸ್. ಮುನಿಸ್ವಾಮಿ ಮಾತನಾಡಿ, ಆವಣಿ ಈಗಾಗಲೇ ಪೌರಾಣಿಕವಾಗಿ ಮಹತ್ವ ಪಡೆದಿದೆ. ಮಂದಿರ ನಿರ್ಮಾಣಕ್ಕೆ ಎಲ್ಲ ರೀತಿಯ ಸಹಕಾರ ಮತ್ತು ಸಹಾಯ ಮಾಡಲಾಗುವುದು ಎಂದು ಅವರು ಹೇಳಿದರು.

ಅಪಘಾತ: ತಂದೆ, ಮಗಳು ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಹೆಬ್ಬೂರು ಹೋಬಳಿಯ ಕಲ್ಕೆರೆ ಗೇಟ್ ಸಮೀಪದ ವೈ.ಕೆ.ರಾಮಯ್ಯ ವೃತ್ತದ ಬಳಿ ಭಾನುವಾರ ರಾತ್ರಿ ಬೈಕ್ ಮತ್ತು ಖಾಸಗಿ ಬಸ್ ಮಧ್ಯೆ ನಡೆದ ಅಪಘಾತದಲ್ಲಿ ತಂದೆ, ಮಗಳು ಮೃತಪಟ್ಟಿದ್ದಾರೆ.

ಗುಬ್ಬಿ ತಾಲ್ಲೂಕು ಸಿ.ಎಸ್. ಪುರ ಹೋಬಳಿ ನೆಟ್ಟಿಕೆರೆ ಗ್ರಾಮದ ತಿರುಮಲೇಗೌಡ (50) ಮತ್ತು ಅವರ ಪುತ್ರಿ ಚಂದನಾ (20) ಮೃತರು. ಬೆಂಗಳೂರಿನ ಸುಂಕದಕಟ್ಟೆಯಲ್ಲಿ ವಾಸವಿದ್ದರು.

ಬೈಕ್‌ನಲ್ಲಿ ಬೆಂಗಳೂರಿಗೆ ವಾಪಸ್ಸಾಗುವಾಗ ಅಪಘಾತ ಸಂಭವಿಸಿದೆ. ತಿರುಮಲೇಗೌಡ ಸ್ಥಳದಲ್ಲೇ ಮೃತಪಟ್ಟಿದ್ದು, ಚಂದನಾ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯ ಸಾವನ್ನಪ್ಪಿದ್ದಾರೆ. ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿಮಾನ ನಿಲ್ದಾಣ ಭದ್ರತೆ: ಹೆಚ್ಚುವರಿ 1,700 ಸಿಬ್ಬಂದಿ ಮಂಜೂರು

ನವದೆಹಲಿ (ಪಿಟಿಐ): ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಭದ್ರತೆಗಾಗಿ ಕೇಂದ್ರ ಗೃಹ ಸಚಿವಾಲಯವು ಹೆಚ್ಚುವರಿಯಾಗಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) 1,700 ಸಿಬ್ಬಂದಿಯನ್ನು ಮಂಜೂರು ಮಾಡಿದೆ.

'ವಿಮಾನ ನಿಲ್ದಾಣದ ಭದ್ರತೆಗೆ ಈಗಾಗಲೇ 3,500 ಮಹಿಳಾ ಹಾಗೂ ಪುರುಷ ಸಿಬ್ಬಂದಿ ನಿಯೋಜಿಸಲಾಗಿದೆ' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷದ ನವೆಂಬರ್‌ನಲ್ಲಿ ವಿಮಾನ ನಿಲ್ದಾಣದ ಟರ್ಮಿನಲ್‌-2 ಲೋಕಾರ್ಪಣೆ ಮಾಡಿದ್ದರು. ಟರ್ಮಿನಲ್ ಸಂಖ್ಯೆ ಹೆಚ್ಚಿದ್ದರ ಹಿಂದೆಯೇ ಪ್ರಯಾಣಿಕರ ದಟ್ಟಣೆಯೂ ಹೆಚ್ಚಾಗಿತ್ತು.

ಈ ಹಿನ್ನೆಲೆಯಲ್ಲಿ ಭದ್ರತಾ ಹಾಗೂ ಗುಪ್ತಚರ ಸಂಸ್ಥೆಗಳು ಭದ್ರತೆ ಕುರಿತು ಪರಾಮರ್ಶೆ ನಡೆಸಿದ್ದವು. ಇದರ ಹಿಂದೆಯೇ ಕೇಂದ್ರ ಗೃಹ ಸಚಿವಾಲಯವು ಹೆಚ್ಚುವರಿ ಸಿಬ್ಬಂದಿ ಮಂಜೂರು ಕುರಿತು ತೀರ್ಮಾನ ತೆಗೆದುಕೊಂಡಿದೆ.

'ಬಹುಭಾಷಿಕರ ನೆಲ'ದಲ್ಲಿ ಟಿಕೆಟ್‌ಗೆ ಕುಬೇರರ ಪೈಪೋಟಿ

• ಆದಿತ್ಯ ಕೆ.ಎ.

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ 2023

ಕ್ಷೇತ್ರ ಸ್ಥಿತಿ ಗತಿ

ಬೆಂಗಳೂರು: ಬಹುಭಾಷಿಕರ ನೆಲ, ಜವಳಿ ವ್ಯಾಪಾರಕ್ಕೆ ಪ್ರಸಿದ್ಧಿ ಪಡೆದಿರುವ ಚಿಕ್ಕಪೇಟೆ ಕ್ಷೇತ್ರದಲ್ಲಿ ಈ ಬಾರಿ ಟಿಕೆಟ್‌ಗೆ ಚಿನ್ನಾಭರಣ ವ್ಯಾಪಾರಿಗಳು ಹಾಗೂ ಬಿಲ್ಡ್‌ರ್‌ಗಳಂತಹ ಕುಬೇರರೇ ತುದಿಗಾಲಿನಲ್ಲಿ ನಿಂತಿದ್ದಾರೆ.

ಮತ್ತೊಂದು ಜಯದೊಂದಿಗೆ ಕ್ಷೇತ್ರದ ಮೇಲೆ ಹಿಡಿತ ಸಾಧಿಸಲು ಬಿಜೆಪಿ ಕಸರತ್ತು ನಡೆಸುತ್ತಿದ್ದರೆ, ಬಿಜೆಪಿಯ ಓಟಕ್ಕೆ ಕಡಿವಾಣ ಹಾಕಲು ಕಾಂಗ್ರೆಸ್ 'ತಂತ್ರ' ರೂಪಿಸುತ್ತಿದೆ. ಎಸ್‌ಡಿಪಿಐ, ಜೆಡಿಎಸ್ ಪ್ರಬಲ ಪೈಪೋಟಿ ನೀಡುವ ಅಭ್ಯರ್ಥಿಯ ಶೋಧದಲ್ಲಿದೆ. ಕ್ಷೇತ್ರದಿಂದ ಸ್ಪರ್ಧಿಸಲು ಅಭ್ಯರ್ಥಿಗಳ ದಂಡೇ ಇದೆ.

ಕಳೆದ ಕೆಲ ಚುನಾವಣೆಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ನಡುವೆಯೇ ಜಯ ತೂಗುಯ್ಯಾಲೆ ಆಡುತ್ತಿದೆ. 1999ರಲ್ಲಿ ಜಿ.ಡಿ.ನಾಯಕ್ (ಕಾಂಗ್ರೆಸ್), 2004ರಲ್ಲಿ ನಾಯಕ್ ಶಿವಾನಂದ್ ನಾರಾಯಣ (ಬಿಜೆಪಿ), 2008ರಲ್ಲಿ ಡಾ.ಹೇಮಚಂದ್ರ ಸಾಗರ್ (ಬಿಜೆಪಿ), 2013ರಲ್ಲಿ ಆರ್.ವಿ.ದೇವರಾಜು (ಕಾಂಗ್ರೆಸ್), 2018ರಲ್ಲಿ ಉದಯ್ ಗರುಡಾಚಾರ್ (ಬಿಜೆಪಿ) ಗೆಲುವು ಸಾಧಿಸಿದ್ದಾರೆ.

ರಾಜಸ್ಥಾನ ಹಾಗೂ ಗುಜರಾತ್‌ನಿಂದ ಬಂದಿರುವ ವ್ಯಾಪಾರಸ್ಥರು, ತಮಿಳು ಹಾಗೂ ತೆಲುಗು ಭಾಷಿಕರು ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗರು, ಪರಿಶಿಷ್ಟರು, ಮುಸ್ಲಿಮರೂ ನೆಲೆಸಿದ್ದಾರೆ. ಕ್ಷೇತ್ರದಲ್ಲಿ ಕೊಳೆಗೇರಿಗಳೂ ಸಾಕಷ್ಟಿವೆ. ಜಾತಿ ಸಮೀಕರಣಕ್ಕಿಂತ ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸಿನ ಮೇಲೆ ಫಲಿತಾಂಶ ನಿರ್ಧಾರ ಆಗಿರುವುದು ಹಿಂದಿನ ಚುನಾವಣೆಗಳಲ್ಲಿ ಸಾಬೀತಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಮತದಾರರ ಖಾಸಗಿ ಮಾಹಿತಿ ಕಳವು ಮಾಡಿದ್ದ ಆರೋಪವು ಈ ಕ್ಷೇತ್ರದಲ್ಲೂ ಕೇಳಿಬಂದಿತ್ತು. ಆ ಕಾರಣಕ್ಕೆ ಚುನಾವಣಾ ಆಯೋಗದ ನಿರ್ದೇಶನದಂತೆ ಕ್ಷೇತ್ರದಲ್ಲಿ ಮತದಾರರ ಪಟ್ಟಿ ಪರಿಷ್ಕರಿಸಲಾಗಿದೆ.

ಮತ್ತೊಮ್ಮೆ ಬಿಜೆಪಿಯ ಟಿಕೆಟ್ ನಿರೀಕ್ಷೆಯಲ್ಲಿ ಶಾಸಕ ಉದಯ್ ಗರುಡಾಚಾರ್ ಇದ್ದರೆ, ಪಕ್ಷದ ಬೆಂಗಳೂರು ದಕ್ಷಿಣ ವಿಭಾಗದ ಅಧ್ಯಕ್ಷ ಎನ್.ಆರ್.ರಮೇಶ್ ಹೆಸರೂ ಚಾಲ್ತಿಯಲ್ಲಿದೆ. ಕಾಂಗ್ರೆಸ್‌ನಿಂದ ಮಾಜಿ ಶಾಸಕ ಆರ್.ವಿ.ದೇವರಾಜ್ ಹಾಗೂ ಅವರ ಪುತ್ರ, ಬಿಬಿಎಂಪಿ ಮಾಜಿ ಸದಸ್ಯ ಯುವರಾಜ್ ಪ್ರಬಲ ಆಕಾಂಕ್ಷಿಗಳು. ಪಿ.ಆರ್.ರಮೇಶ್, ಗಂಗಾಬಿಕೆ ಸಹ ಕಾಂಗ್ರೆಸ್‌ನಿಂದ ಟಿಕೆಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಕಾಂಗ್ರೆಸ್‌ನಿಂದ ಅಮಾನತುಗೊಂಡಿದ್ದರೂ 'ಕೆಜಿಎಫ್' ಬಾಬು ಅದೇ ಪಕ್ಷದಿಂದ ಟಿಕೆಟ್ ಪಡೆಯುವ ಪ್ರಯತ್ನದಲ್ಲಿದ್ದಾರೆ.

ಜೆಡಿಎಸ್‌ನಿಂದ ಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಕ್ಷೇತ್ರದ ಜೆಡಿಎಸ್ ಘಟಕದ ಅಧ್ಯಕ್ಷೆ ಲತಾ ಶಿವಕುಮಾರ್ ಟಿಕೆಟ್ ಬಯಸಿದ್ದಾರೆ. ಕಾಂಗ್ರೆಸ್ ತೊರೆದು ಎಎಪಿ ಸೇರಿರುವ ಸುಪ್ರೀಂ ಕೋರ್ಟ್ ವಕೀಲ ಬ್ರಜೇಶ್ ಕಾಳಪ್ಪ ಈ ಕ್ಷೇತ್ರದಿಂದ ಸ್ಪರ್ಧೆ ಬಯಸಿದ್ದಾರೆ.

ಎಸ್‌ಡಿಪಿಐ ಪ್ರಭಾವ: ಕ್ಷೇತ್ರದ ಚುನಾವಣೆ ಫಲಿತಾಂಶ ಮೇಲೆ ಎಸ್‌ಡಿಪಿಐ ಮಹತ್ವ ಪಾತ್ರ ವಹಿಸುತ್ತಿದೆ. 2013ರ ಚುನಾವಣೆಯಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಮುಜೀರ್ ಪಾಷಾ 4,821 ಮತಗಳನ್ನು ಪಡೆದಿದ್ದರು. 2018ರ ಚುನಾವಣೆಯಲ್ಲೂ ಸ್ಪರ್ಧಿಸಿದ್ದ ಪಾಷಾ 11,700 ಮತ ಪಡೆದಿದ್ದರು. ಎಸ್‌ಡಿಪಿಐ ಮತ ಗಳಿಕೆ ಪ್ರಮಾಣ ಏರಿದೆ. ಈ ಎಲ್ಲ ಲೆಕ್ಕಾಚಾರಗಳನ್ನು ಗಮನಿಸಿಯೇ ಪ್ರಮುಖ ಪಕ್ಷಗಳು ಟಿಕೆಟ್ ನೀಡುವ ಸಾಧ್ಯತೆಯಿದೆ.

ಚಿಕ್ಕಪೇಟೆ



ಉದಯ್ ಗರುಡಾಚಾರ್
ಹಾಲಿ ಶಾಸಕ (ಬಿಜೆಪಿ)



ಹಾಲಿ ಮತದಾರರ ವಿವರ

1,08,852 ಪುರುಷರು
1,04,197 ಮಹಿಳೆಯರು
17 ತೃತೀಯ ಲಿಂಗಿಗಳು
2,13,066 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	57,312	31,655	40,252
ಕಾಂಗ್ರೆಸ್	49,378	44,714	32,971
ಎಸ್‌ಡಿಪಿಐ	11,700	4,821	...
ಜೆಡಿಎಸ್	6,286	24,382	23,662

ಸುದ್ದಿ 2 ನಿಮಿಷ

ವ್ಯಾಪಾರಿಯಿಂದ ₹ 80 ಲಕ್ಷ ಸುಲಿಗೆ: ಆರೋಪಿಗಳಿಗೆ ಜನಪ್ರತಿನಿಧಿ ನಂಟು

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಅಡಿಕೆ ಮಂಡಿ ಮಾಲೀಕರಿಗೆ ಸೇರಿದ ₹ 80 ಲಕ್ಷ ದೋಚಿದ್ದ ಅಂತರರಾಜ್ಯ ಆರೋಪಿಗಳಿಗೆ ಆಂಧ್ರಪ್ರದೇಶದ ಅದೋನಿಯ ಜನಪ್ರತಿನಿಧಿಯೊಬ್ಬರ ನಂಟಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಮೋಹನ್‌ಕುಮಾರ್ ಅವರು ಸೇಲಂನ ವ್ಯಕ್ತಿಯೊಬ್ಬರಿಗೆ ₹ 80 ಲಕ್ಷ ತಲುಪಿಸಲು ಕಾರು ಚಾಲಕ ಚಂದನ್ ಹಾಗೂ ಕಾರ್ಮಿಕ ಕುಮಾರಸ್ವಾಮಿ ಅವರನ್ನು ಡಿಸೆಂಬರ್ 27ರಂದು ಬೆಂಗಳೂರಿಗೆ ಕಳುಹಿಸಿದ್ದರು.

ಅಲ್ಲದೆ, ಉದ್ಯಮಿ ಒಬ್ಬರಿಂದ ಹಣ ಪಡೆಯುವಂತೆಯೂ ತಿಳಿಸಿದ್ದರು. ಇಬ್ಬರೂ ನಗರಕ್ಕೆ ಬಂದು ಹಣ ಪಡೆದು ಸೇಲಂಗೆ ವಾಪಸ್ ತೆರಳುವಾಗ ಶಾಂತಿನಗರ ಸಮೀಪ ಪೊಲೀಸ್ ಸೋಗಿನಲ್ಲಿ ಬಂದ ಮೂವರು ಹಣ ದೋಚಿದ್ದರು.

ಪ್ರಕರಣದಲ್ಲಿ ಆಂಧ್ರಪ್ರದೇಶದ ಕಡಪ ಜಿಲ್ಲೆಯ ಭತಲ್ ಶಿವರಾಮ್ ಕೃಷ್ಣ ಯಾದವ್, ಸಹೋದರರಾದ ಶೇಖ್ ಚೆಂಪತಿ ಲಾಲ್‌ಬಾಷಾ ಹಾಗೂ ಶೇಖ್ ಚೆಂಪತಿ ಜಾಕೀರ್ ಅವರನ್ನು ಬಂಧಿಸಲಾಗಿದೆ.

ಬಂಧಿತರು ತನಿಖೆಯ ವೇಳೆ ಜನಪ್ರತಿನಿಧಿಯೊಬ್ಬರ ಹೆಸರು ಹೇಳಿದ್ದಾರೆ. ಈ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ನಂದಿ ಗಿರಿಧಾಮ: ಪ್ರಪಾತಕ್ಕೆ ಬಿದ್ದ ಯುವಕನ ರಕ್ಷಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 80 ಅಡಿ ಆಳದ ಪ್ರಪಾತಕ್ಕೆ ಬಿದ್ದಿದ್ದ ಮನೋಜ್
- ವೀರಭದ್ರೇಶ್ವರ ದೇಗುಲದ ಬಳಿ ಆಯತಪ್ಪಿದ್ದ ಯುವಕ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಪ್ರಸಿದ್ಧ ನಂದಿ ಗಿರಿಧಾಮದಲ್ಲಿ ಪ್ರಪಾತಕ್ಕೆ ಬಿದ್ದಿದ್ದ ದೊಡ್ಡಬಳ್ಳಾಪುರದ ಮನೋಜ್ ಕುಮಾರ್ ಅವರನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ ಭಾನುವಾರ ರಕ್ಷಿಸಿದ್ದಾರೆ.

ಬೆಳಿಗ್ಗೆ ಸುಲ್ತಾನ್ ಪೇಟೆ ಮಾರ್ಗದಲ್ಲಿ ನಂದಿಗಿರಿಧಾಮಕ್ಕೆ ಮೆಟ್ಟಿಲುಗಳ ಮೂಲಕ ಮನೋಜ್ ಹಾಗೂ ಇಬ್ಬರು ಸ್ನೇಹಿತರು ಹತ್ತಿದ್ದಾರೆ. ವೀರಭದ್ರೇಶ್ವರ ದೇಗುಲದ ಬಳಿ ಹೋದಾಗ ಮನೋಜ್ ಆಯತಪ್ಪಿ ಜಾರಿದ್ದು, 80 ಅಡಿ ಆಳದ ಪ್ರಪಾತಕ್ಕೆ ಬಿದ್ದಿದ್ದಾರೆ. ತಕ್ಷಣ ಅವರ ಸ್ನೇಹಿತರು 112 ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ.

ಮನೋಜ್ ಕುಮಾರ್ ಅವರಿಗೆ ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ್ದು, 'ಅವರ ಕಾಲಿನ ಮೂಳೆ ಮುರಿದಿದೆ. ಪ್ರಾಣಾಪಾಯವಿಲ್ಲ' ಎಂದು ನಂದಿ ಗಿರಿಧಾಮ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಗರದ ವ್ಯವಸ್ಥಿತ ಅಭಿವೃದ್ಧಿಗೆ ಕ್ರಮ: ಬೊಮ್ಮಾಯಿ

ಬೆಂಗಳೂರು: 'ಬೆಂಗಳೂರು ನಗರವನ್ನು ಇನ್ನು ಮುಂದೆ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಯೋಜನೆಯೊಂದನ್ನು ಜಾರಿಗೆ ತರಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿದರು.

'ನಗರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬದ್ಧವಾಗಿದೆ. ಅದು ಯೋಜನಾಬದ್ಧವಾಗಿಸಲು ಎಲ್ಲ ರೀತಿಯ ಕ್ರಮ ಮತ್ತು ಯೋಜನೆಗಳನ್ನು ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಪ್ರಕಟಿಸಲಾಗುತ್ತದೆ' ಎಂದರು.

ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಮಾಗಡಿ ರಸ್ತೆ, ಪೊಲೀಸ್ ಕಾಲೊನಿಯಲ್ಲಿ ಪ್ರಥಮದರ್ಜೆ ಕಾಲೇಜು ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣ ಸೇರಿ ವಿವಿಧ ಕಾಮಗಾರಿಗಳನ್ನು ಉದ್ಘಾಟಿಸಿ ಮಾತನಾಡಿದರು.

'ಮುಂಬೈ, ಚೆನ್ನೈನಲ್ಲೂ ಮಳೆ ಬಂದಾಗ ಸಾಕಷ್ಟು ಪ್ರದೇಶ ಮುಳುಗಡೆಯಾಗುತ್ತದೆ. ಆದರೆ, ಬೆಂಗಳೂರಿನಲ್ಲಿ ಶತಮಾನದ ಅತಿದೊಡ್ಡ ಮಳೆಯಾಗಿ ಸಮಸ್ಯೆಯಾದಾಗ ನಗರದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ' ಎಂದರು.

'ರಾಜಕಾಲುವೆಗಳನ್ನು ದಶಕಗಳಿಂದ ಒತ್ತುವರಿ ಮಾಡಿಕೊಂಡವರೇ ಈಗ ಬೆಂಗಳೂರು ಮುಳುಗುತ್ತಿದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ನಾವು ಅದನ್ನೇ ಸಕಾರಾತ್ಮಕವಾಗಿ ತೆಗೆದುಕೊಂಡು ₹2 ಸಾವಿರ ಕೋಟಿ ವೆಚ್ಚದಲ್ಲಿ ರಾಜಕಾಲುವೆ ನಿರ್ಮಿಸುತ್ತಿದ್ದೇವೆ' ಎಂದು ಹೇಳಿದರು.

'ರಾಜಕಾಲುವೆಗೆ ನೀಡಿರುವ ಅನುದಾನ ಹೊರತುಪಡಿಸಿ, ನಗರೋತ್ಥಾನ ಯೋಜನೆಯಲ್ಲಿ ₹6 ಸಾವಿರ ಕೋಟಿ ಅನುದಾನ ನೀಡಿದ್ದೇವೆ. ಮೂರೂವರೆ ವರ್ಷದಲ್ಲಿ ₹10 ಸಾವಿರ ಕೋಟಿಯನ್ನು ನಗರ ಅಭಿವೃದ್ಧಿಗೆ ಕೊಟ್ಟಿದ್ದೇವೆ' ಎಂದರು.

'ನಕಾರಾತ್ಮಕವಾಗಿ ಮಾತನಾಡುವ ಎಲ್ಲರಿಗೂ ನಾನು ಆಹ್ವಾನ ನೀಡುತ್ತಿದ್ದೇನೆ. ಬನ್ನಿ, ಬೆಂಗಳೂರನ್ನು ನೋಡಿ ಹೇಗೆ ಅಭಿವೃದ್ಧಿಯಾಗಿದೆ' ಎಂದರು.

ಬೆಂಗಳೂರಿನ ಪಶ್ಚಿಮ ವಿಭಾಗದ ನೂತನ ಡಿಸಿಪಿ ಕಚೇರಿಯನ್ನು ಮುಖ್ಯಮಂತ್ರಿ ಉದ್ಘಾಟಿಸಿದರು. ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಇದ್ದರು.

'ವೆಸ್ಟ್ ಆಫ್ ಕಾರ್ಡ್ ರಸ್ತೆ ಮೇಲ್ಸೇತುವೆ' ಮುಕ್ತ

ನಗರದ ದಕ್ಷಿಣ ಹಾಗೂ ಪಶ್ಚಿಮ ವಿಭಾಗಗಳನ್ನು ಸಂಪರ್ಕಿಸುವ 'ವೆಸ್ಟ್ ಆಫ್ ಕಾರ್ಡ್ ರಸ್ತೆ ಮೇಲ್ಸೇತುವೆ'ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಸಂಚಾರಕ್ಕೆ ಮುಕ್ತಗೊಳಿಸಿದರು. ತುಮಕೂರು ರಸ್ತೆ ಮತ್ತು ಮೈಸೂರು ರಸ್ತೆಯನ್ನು ಸಂಪರ್ಕಿಸುವ ಕಾರ್ಡ್ ರಸ್ತೆಯಲ್ಲಿರುವ ಮೇಲ್ಸೇತುವೆ, ಬಸವೇಶ್ವರನಗರ ಮುಖ್ಯರಸ್ತೆ, 72ನೇ ಅಡ್ಡರಸ್ತೆ ಕೂಡು ರಸ್ತೆಯಲ್ಲಿದೆ. ನಾಲ್ಕೈದು ವರ್ಷದಿಂದ ಈ ಮೇಲ್ಸೇತುವೆ ಕೆಲಸ ನಡೆದಿತ್ತು. ಈ ಗ್ರೇಡ್ ಸೆಪರೇಟರ್ ಸೇರಿದಂತೆ ಈಗಾಗಲೇ ಪೂರ್ಣಗೊಂಡಿರುವ ಮಂಜುನಾಥನಗರ–ಶಿವನಗರ ಮೇಲ್ಸೇತುವೆಗೆ ಒಟ್ಟು ₹166.70 ಕೋಟಿ ವೆಚ್ಚವಾಗಿದೆ.

'ವೆಸ್ಟ್ ಆಫ್ ಕಾರ್ಡ್ ರಸ್ತೆ ಮೇಲ್ಸೇತುವೆ'ಯ ಉದ್ಘಾಟನಾ ಫಲಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಅನಾವರಣಗೊಳಿಸಿದರು. ಸಚಿವರಾದ ವಿ. ಸೋಮಣ್ಣ, ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಶಾಸಕ ಸುರೇಶ್‌ಕುಮಾರ್, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಇದ್ದರು

ಅಂಬೇಡ್ಕರ್ ಪ್ರತಿಮೆ ಅನಾವರಣ

ಪೀಣ್ಯ ದಾಸರಹಳ್ಳಿ: 'ಸಮಾಜದ ಕಟ್ಟಕಡೆಯ ಪ್ರಜೆಗೂ ಸಮಾನ ಹಕ್ಕು, ಸಾಮಾಜಿಕ ನ್ಯಾಯ ಸಿಗುವಂತೆ ಶ್ರಮಿಸಿದ ಶ್ರೇಯ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ' ಎಂದು ಶಾಸಕ ಆರ್.ಮಂಜುನಾಥ್ ತಿಳಿಸಿದರು.

ಮೇದರಹಳ್ಳಿಯಲ್ಲಿ ಪ್ರಜಾ ವಿಮೋಚನಾ ಸಮಿತಿ ದಾಸರಹಳ್ಳಿ ಶಾಖೆಯ ಅಧ್ಯಕ್ಷ ವೆಂಕಟೇಶಮೂರ್ತಿ ನೇತೃತ್ವದಲ್ಲಿ ನಡೆದ ಡಾ.ಅಂಬೇಡ್ಕರ್ ಪ್ರತಿಮೆಯ ಲೋಕಾರ್ಪಣೆ, ದಲಿತ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

'ಶ್ರೇಷ್ಠ ಸಂವಿಧಾನ ನೀಡುವ ಮೂಲಕ ಮಹಿಳೆಯರು, ಅಲ್ಪಸಂಖ್ಯಾತರು, ದಲಿತರು, ಶೋಷಿತರ ಪ್ರಗತಿಗೆ ಬಾಬಾ ಸಾಹೇಬರು ಶ್ರಮಿಸಿದ್ದರಿಂದ ಕೋಟ್ಯಂತರ ಜನರು ಘನತೆ, ಸ್ವಾಭಿಮಾನದಿಂದ ಬದುಕುವಂತಾಗಿದೆ' ಎಂದರು.

'ಪ್ರಜಾ ವಿಮೋಚನಾ ಸಮಿತಿ ಗ್ರಂಥಾಲಯ ಸ್ಥಾಪಿಸಿ ವ್ಯಕ್ತಿಯ ವಿಕಾಸಕ್ಕೆ ಪೂರಕವಾಗಿರುವ ಜ್ಞಾನದ ಬೆಳಕು ಪಸರಿಸಲು ಮುಂದಾಗಿರುವುದು ಶ್ಲಾಘನೀಯ ಕಾರ್ಯ' ಎಂದರು.

ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ಪ್ರಜಾ ವಿಮೋಚನಾ ಸಮಿತಿ ರಾಜ್ಯಾಧ್ಯಕ್ಷ ಜೈ ಭೀಮ್ ಮಧುರೆ, ದಾಸರಹಳ್ಳಿ ಕ್ಷೇತ್ರದ ಎಎಪಿ ನಿಯೋಜಿತ ಅಭ್ಯರ್ಥಿ ಎಂ.ಕೀರ್ತನ್ ಕುಮಾರ್ ಮಂಜಪ್ಪ, ದಲಿತ ಸಮಿತಿ ಹೋರಾಟಗಾರರಾದ ಗುರುಮೂರ್ತಿ, ವೆಂಕಟೇಶಮೂರ್ತಿ ಹಾಗೂ ಸೋನಿಯಾ ಇದ್ದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಸಂಚಾರಿ ನಿಯಮ ಉಲ್ಲಂಘನೆ'

ಕಾಮಾಕ್ಯ ಚಿತ್ರಮಂದಿರದ ಎದುರಿಗಿನ ಪಾದಚಾರಿ ಮಾರ್ಗದಲ್ಲಿಯೇ ಸವಾರರು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದು, ನಿಯಂತ್ರಿಸುವವರೇ ಇಲ್ಲದಂತಾಗಿದೆ. ಪಾದಚಾರಿಗಳಿಗೆ ವಿಶೇಷವಾಗಿ ವೃದ್ಧರು, ಮಕ್ಕಳು, ಮಹಿಳೆಯರಿಗೆ ಸಮಸ್ಯೆ ಆಗುತ್ತಿದೆ. ಸಂಚಾರ ಪೊಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ನಿಯಮ ಉಲ್ಲಂಘನೆ ನಡೆಯುತ್ತಿದ್ದರೂ ಅಧಿಕಾರಿಗಳು ಮೌನವಾಗಿದ್ದಾರೆ. ಗಮನಹರಿಸಲಿ.

ಪುಟ್ಟೇಗೌಡ, ಸ್ಥಳೀಯ ನಿವಾಸಿ

'ಖಾಲಿ ನಿವೇಶನದಲ್ಲಿ ಕಸದ ರಾಶಿ'

ಕಾವಲ್ ಬೈರಸಂದ್ರದ ಅಂಬೇಡ್ಕರ್ ಬಡಾವಣೆಯ 1ನೇ ಮುಖ್ಯ ರಸ್ತೆಯಲ್ಲಿ ಖಾಲಿ ನಿವೇಶನದಲ್ಲಿ ಕಸ, ಮದ್ಯದ ಬಾಟಲಿಗಳು ಎಸೆಲಾಗುತ್ತಿದ್ದು, ವಾರಗಟ್ಟಲೆ ವಿಲೇವಾರಿಯಾಗುತ್ತಿಲ್ಲ. ಆ ಕಸ ರಸ್ತೆಗಳಲ್ಲಿ ಚೆಲ್ಲಾಡುತ್ತಿದೆ. ಇದರಿಂದ ಬೀದಿ ನಾಯಿಗಳ ಕಾಟವೂ ಅಧಿಕವಾಗಿದೆ. ಖಾಲಿ ನಿವೇಶನದಲ್ಲಿ ಕಸ ಎಸೆಯುವುದಕ್ಕೆ ಕಡಿವಾಣ ಹಾಕಬೇಕು.

ಅಶೋಕ್ ಕುಮಾರ್, ಕಾವಲ್ ಬೈರಸಂದ್ರದ ನಿವಾಸಿ

'ದೂರು ನೀಡಿದರೂ ರಸ್ತೆ ಗುಂಡಿ ಮುಚ್ಚಿಲ್ಲ'

ಜಯಣ್ಣ ಬಡಾವಣೆಯಲ್ಲಿ ರಸ್ತೆ ಗುಂಡಿಗಳನ್ನು ಆರು ತಿಂಗಳಿಂದ ದೂರು ನೀಡಿದರೂ ದುರಸ್ತಿ ಮಾಡಿಲ್ಲ. 'ಫಿಕ್ಸ್ ಮೈ ಸ್ಟ್ರೀಟ್' ಆ್ಯಪ್ ಮೂಲಕವೂ ದೂರು ನೀಡಲಾಗಿದೆ. ರಾಜರಾಜೇಶ್ವರಿನಗರ ವಲಯದ ಮುಖ್ಯ ಎಂಜಿನಿಯರ್ ಸೇರಿದಂತೆ ಕಿರಿಯ ಎಂಜಿನಿಯರ್‌ಗಳು ನಾಗರಿಕರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ವಾರ್ಡ್ ರಸ್ತೆಗಳಲ್ಲಿ ಗುಂಡಿ ಇದ್ದರೆ ಎಂಜಿನಿಯರ್ ಹೊಣೆ ಎಂದು ತುಷಾರ್ ಗಿರಿನಾಥ್ ಹೇಳಿದ್ದರು. ರಾಜರಾಜೇಶ್ವರಿನಗರ ವಲಯದ ವಾರ್ಡ್‌ಗಳಲ್ಲಿ ಅಧಿಕಾರಿಗಳು ಸಂಚರಿಸಿದರೆ ವಸ್ತುಸ್ಥಿತಿಯ ಅರಿವಾಗುತ್ತದೆ. ರಾಜರಾಜೇಶ್ವರಿ ದೇವಸ್ಥಾನದ ಬಳಿ ಅರ್ಧ ರಸ್ತೆಯನ್ನು ಡಾಂಬರು ಹಾಕದೇ ಬಿಡಲಾಗಿದೆ. ಸವಾರರಿಗೆ ಸಮಸ್ಯೆಯಾಗಿದ್ದು, ತ್ವರಿತವಾಗಿ ದುರಸ್ತಿಗೆ ಕ್ರಮಕೈಗೊಳ್ಳಬೇಕು.

ರಾಜೇಶ್, ರಾಜರಾಜೇಶ್ವರಿನಗರ

ಬಾಣಸವಾಡಿ: ದುರಸ್ತಿಯಾಗದ ರಸ್ತೆ

ಬಾಣಸವಾಡಿಯ ಚಂದ್ರಮ್ಮ ಬಡಾವಣೆಯ 2ನೇ ಅಡ್ಡರಸ್ತೆಯಲ್ಲಿ ಗುಂಡಿಗಳು ಬಿದ್ದು, ಹಾಳಾಗಿದೆ. ಇದು ತಿರುವು ಭಾಗವಾಗಿದ್ದು, ಅಪಘಾತಗಳಿಗೂ ಆಸ್ಪದವಾಗುತ್ತಿದೆ. ದೂಳಿನಿಂದಾಗಿ ಸ್ಥಳೀಯರ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಈ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಬಿಬಿಎಂಪಿ ಅಧಿಕಾರಿಗಳಿಗೆ ಕೂಡಲೇ ರಸ್ತೆ ಸರಿಪಡಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲಿ.

ಸುಧಾ ಪ್ರಕಾಶ್ ರಾವ್
ಬಾಣಸವಾಡಿ ನಿವಾಸಿ

'ಪಾದಚಾರಿ ಮಾರ್ಗ ದುರಸ್ತಿ ಮಾಡಿ'

'ಹಳೆ ಮದ್ರಾಸ್ ಮುಖ್ಯರಸ್ತೆ ಟ್ರಿನಿಟಿ ಮೆಟ್ರೊ ಸ್ಟೇಷನ್ ಬಳಿಯ ಪಾದಚಾರಿ ಮಾರ್ಗ ಸಂಪೂರ್ಣವಾಗಿ ಹಾಳಾಗಿದೆ. ಕೇಬಲ್ ಅಳವಡಿಸಲು ಕೆಲ ತಿಂಗಳ ಹಿಂದೆ ರಸ್ತೆಯ ಒಂದು ಬದಿ ಅಗೆಯಲಾಗಿದೆ. ಬಳಿಕ ದುರಸ್ತಿಗೊಳಿಸಿಲ್ಲ. ಈ ರಸ್ತೆಯಲ್ಲಿ ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡಲು ಆತಂಕ ಪಡುವಸ್ಥಿತಿ ಇದೆ. ಬಿಬಿಎಂಪಿ, ಬೆಸ್ಕಾಂ ಸಿಬ್ಬಂದಿ ತುರ್ತು ಕ್ರಮವಹಿಸಿ ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು'

ರಾಜೇಶ್, ವಿಜಯ್ ಸ್ಥಳೀಯ ನಿವಾಸಿಗಳು

ನಗರದಲ್ಲಿ ಮೊದಲ 'ಇಂಗಾಲ ತಟಸ್ಥ' ಆಸ್ಪತ್ರೆ

ಬೆಂಗಳೂರು: 'ಅಂಬಿಕಾ ಮೆಡಿಕಲ್ ಫೌಂಡೇಷನ್ ಮತ್ತು ಸಂಶೋಧನಾ ಕೇಂದ್ರ ಭಾರತದ ಮೊದಲ 'ಇಂಗಾಲ ತಟಸ್ಥ' ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಬೆಂಗಳೂರಿನ ಕಲ್ಯಾಣನಗರದಲ್ಲಿ ಆರಂಭಿಸುತ್ತಿದೆ' ಎಂದು ಕೇಂದ್ರ ಶಿಕ್ಷಣ ಮತ್ತು ವಿದೇಶಾಂಗ ಖಾತೆ ರಾಜ್ಯ ಸಚಿವ ರಾಜ್‌ಕುಮಾರ್ ರಂಜನ್ ಸಿಂಗ್ ಹೇಳಿದರು.

ಚೆನ್ನೈನ ಲೈಫ್‌ಲೈನ್ ಆಸ್ಪತ್ರೆ ಸಹಯೋಗದಲ್ಲಿ ₹1,200 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ 500 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

' ಸಾಂಪ್ರದಾಯಿಕ ಆಸ್ಪತ್ರೆಗಳಿಗಿಂತ ಇಲ್ಲಿ ಭಿನ್ನ ರೀತಿಯ ಸೇವೆ ದೊರಕಲಿದೆ. ಅಲೋಪಥಿ, ಭಾರತೀಯ ಚಿಕಿತ್ಸಾ ವಿಜ್ಞಾನ, ಆಧ್ಯಾತ್ಮಿಕ ವೈದ್ಯಕೀಯ ಶಾಸ್ತ್ರ, ಮುಂದುವರಿದ ವೈದ್ಯಕೀಯ ವಿಜ್ಞಾನ ಸೇರಿದಂತೆ ಸಮಗ್ರ ವೈದ್ಯಕೀಯ ಸಾಧ್ಯತೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ಪ್ರತಿಯೊಂದು ಕಾಯಿಲೆಗೂ ಒಂದೇ ವೇದಿಕೆಯಲ್ಲಿ ಸಮಗ್ರ ಚಿಕಿತ್ಸೆ ನೀಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ಭಾರತ ವಿಶ್ವದ ಔಷಧಾಲಯವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತ ಬಂದಿದೆ. ಅಮೆರಿಕ, ಇಂಗ್ಲೆಂಡ್, ಆಫ್ರಿಕಾ ಒಳಗೊಂಡಂತೆ ಹಲವು ರಾಷ್ಟ್ರಗಳಿಗೆ ಭಾರತದಿಂದಲೇ ಜನರಿಕ್ ಔಷಧ ತಲುಪುತ್ತದೆ' ಎಂದು ವಿವರಿಸಿದರು.

ಅಂಬಿಕಾ ಕನ್‌ಸ್ಟ್ರಕ್ಷನ್ ಸಿಇಒ ಪ್ರವೀಶ್ ಕುಜಿಪಿಲ್ಲಿ, 'ಯೋಜನೆಗಾಗಿ ಕಲ್ಯಾಣ ನಗರದಲ್ಲಿ ಭೂಮಿ ಪಡೆಯಲಾಗಿದೆ. ಎರಡನೇ ಹಂತದ ಆಸ್ಪತ್ರೆಗೆ ಕೆಂಗೇರಿಯಲ್ಲಿ 50 ಎಕರೆ ಭೂಮಿ ಖರೀದಿಸಲಾಗಿದೆ' ಎಂದರು.

'ಆಸ್ಪತ್ರೆಯು ಜನರಿಗೆ ಸುಲಭ ಪ್ರವೇಶ ಮತ್ತು ಸಮಗ್ರ ಆರೈಕೆ ಒದಗಿಸಲಿದೆ' ಎಂದು ಚೆನ್ನೈನ ಲೈಫ್‌ಲೈನ್ ಆಸ್ಪತ್ರೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಜೆ.ಎಸ್. ರಾಜ್‌ಕುಮಾರ್ ಮಾಹಿತಿ ನೀಡಿದರು. ವಕೀಲ ರಾಮಸ್ವಾಮಿ, ಸಂಸ್ಥೆಯ ಪ್ರಮುಖರಾದ ಶ್ರೀನಿವಾಸ ರೆಡ್ಡಿ, ಅಮಿತ್ ಇದ್ದರು.

ಇಂಗಾಲ ತಟಸ್ಥ ಎಂದರೇನು?

ವಾತಾವರಣಕ್ಕೆ ಇಂಗಾಲದ ಡೈ ಆಕ್ಸೈಡ್ ಸೇರಿಸುವ ಪ್ರಮಾಣವನ್ನು ತಗ್ಗಿಸಲು ಒತ್ತು ನೀಡಲಾಗುತ್ತಿದೆ. ವಾತಾವರಣಕ್ಕೆ ಸೇರುವಷ್ಟೇ ಸಮಾನ ಪ್ರಮಾಣದ ಇಂಗಾಲದ ಡೈ ಆಕ್ಸೈಡ್ ತಗ್ಗಿಸುವ ಪ್ರಕ್ರಿಯೆಗೆ 'ಇಂಗಾಲ ತಟಸ್ಥ' ಅಥವಾ 'ಕಾರ್ಬನ್ ನ್ಯೂಟ್ರಲ್' ಎನ್ನಲಾಗುತ್ತದೆ. ಹೆಚ್ಚು ಮರಗಳನ್ನು ಬೆಳೆಸುವುದು, ನವೀಕರಿಸಬಹುದಾದ ಸಂಪನ್ಮೂಲಗಳ ಬಳಕೆಗೆ ಆದ್ಯತೆಯಿಂದ ಈ ವಾತಾವರಣ ಮೂಡಿಸುವುದು ಸಾಧ್ಯ.

ಕೊಚ್ಚಿ: ವಿಮಾನ ತುರ್ತು ಭೂಸ್ಪರ್ಶ

ಕೊಚ್ಚಿ (ಪಿಟಿಐ): ಶಾರ್ಜಾದಿಂದ ಬರುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ, ಹೈಡ್ರಾಲಿಕ್ ವೈಫಲ್ಯದ ಶಂಕೆ ಮೇರೆಗೆ ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ತುರ್ತು ಭೂಸ್ಪರ್ಶ ಮಾಡಿದೆ ಎಂದು ನಿಲ್ದಾಣದ ವಕ್ತಾರರು ಹೇಳಿದ್ದಾರೆ.

ಕಾಳಾಪುರ ಘರ್ಷಣೆ: 12 ಜನರ ಬಂಧನ

ಹೊಸಪೇಟೆ (ವಿಜಯನಗರ): ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ಕಾಳಾಪುರದಲ್ಲಿ ಶನಿವಾರ ತರಳಬಾಳು ಬೃಹನ್ಮಠ ಹಾಗೂ ಉಜ್ಜಯಿನಿ ಪೀಠದ ಭಕ್ತರ ನಡುವೆ ನಡೆದಿದ್ದ ಘರ್ಷಣೆಗೆ ಸಂಬಂಧಿಸಿದಂತೆ ಪೊಲೀಸರು ಭಾನುವಾರ 12 ಜನರನ್ನು ಬಂಧಿಸಿದ್ದಾರೆ. ಘಟನೆಯಲ್ಲಿ ಕಾನ್‌ಸ್ಟೆಬಲ್ ಸೇರಿದಂತೆ 20 ಜನ ಗಾಯಗೊಂಡಿದ್ದರು.

ಬೇರೆ ಖಾತೆಗಳಿಗೆ ₹4.92 ಕೋಟಿ ಹಣ ವರ್ಗಾವಣೆ ಮಾಡಿ ವಂಚನೆ

ಐಡಿಬಿಐ ಬ್ಯಾಂಕ್ ವ್ಯವಸ್ಥಾಪಕಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರ ಬ್ಯಾಂಕ್ ಖಾತೆಗಳಿಂದ ಬೇರೆ ಬೇರೆ ಬ್ಯಾಂಕ್ ಖಾತೆಗಳು ಹಾಗೂ ಎಲ್‌ಐಸಿ ಬಾಂಡ್‌ಗಳಿಗೆ ₹4.92 ಕೋಟಿ ಹಣವನ್ನು ವರ್ಗಾವಣೆ ಮಾಡಿ ವಂಚಿಸಿದ್ದ ಐಡಿಬಿಐ ಬ್ಯಾಂಕ್‌ನ ಮಿಷನ್ ರಸ್ತೆ ಶಾಖೆಯ ಗ್ರಾಹಕ ಸಂಪರ್ಕ ವ್ಯವಸ್ಥಾಪಕಿ ಸಜೀಲಾ ಗುರುಮೂರ್ತಿ (34) ಅವರನ್ನು ಸಂಪಂಗಿರಾಮನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಕನ್ಯಾಕುಮಾರಿಯ ಸಜೀಲಾ ಅವರು ನಗರದ ಭಾರತಿ ನಗರದ ಹುಣಸೇಮಾರೇನಹಳ್ಳಿಯಲ್ಲಿ ನೆಲೆಸಿದ್ದರು. ಬ್ಯಾಂಕಿನ ಡೆಪ್ಯೂಟಿ ಜನರಲ್ ಮ್ಯಾನೇಜರ್ ಎಸ್.ಎನ್. ಸಂಗಮೇಶ್ವರ ದೂರು ನೀಡಿದ್ದರು.

'ಸುಜೀಲಾ ಅವರನ್ನು ಬಂಧಿಸಿ 3ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದು, ಹೆಚ್ಚಿನ ವಿಚಾರಣೆಗೆ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಜೂನ್ 13ರಿಂದ ಡಿಸೆಂಬರ್ 21ರ ತನಕ ಬ್ಯಾಂಕ್‌ನಲ್ಲಿ ಸುಜೀಲಾ ವ್ಯವಸ್ಥಾಪಕಿಯಾಗಿ ಕೆಲಸ ಮಾಡಿದ್ದರು. ಆ ಸಂದರ್ಭದಲ್ಲಿ ವಂಚನೆ ನಡೆಸಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

'ಗ್ರಾಹಕರ ಅರಿವಿಗೆ ಬಾರದಂತೆ ಅವರ ಖಾತೆಯಿಂದ ಹಣ ತೆಗೆದು ಎಲ್‌ಐಸಿ ಬಾಂಡ್‌ಗಳಲ್ಲಿ ತೊಡಗಿಸುತ್ತಿದ್ದರು. ಹೀಗೆ ₹1.44 ಕೋಟಿ ವರ್ಗಾವಣೆ ಮಾಡಲಾಗಿತ್ತು. ಬ್ಯಾಂಕ್‌ನ ಗಾಂಧಿನಗರ ಶಾಖೆಯಲ್ಲೂ ಸುಜೀಲಾ ಕೆಲಸ ಮಾಡುವಾಗಲೂ ಹೀಗೇ ಎಲ್‌ಐಸಿ ಬಾಂಡ್‌ಗಳ ಮೇಲೆ ಗ್ರಾಹಕರ ಹಣ ತೊಡಗಿಸಿದ್ದರು. ಮಿಷನ್ ರಸ್ತೆಯ ಶಾಖೆಯಲ್ಲಿ ಡಿ.23ರಂದು ಒಂದೇ ದಿನ ₹4.92 ಕೋಟಿಯನ್ನು ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಐಡಿಬಿಐ ಬ್ಯಾಂಕ್ ಜತೆಗೆ ಎಲ್‌ಐಸಿ ಒಪ್ಪಂದ ಮಾಡಿಕೊಂಡಿತ್ತು. ಇದನ್ನೇ ದುರ್ಬಳಕೆ ಮಾಡಿಕೊಂಡಿದ್ದ ಸುಜೀಲಾ, ಕಮಿಷನ್ ಆಸೆಗೆ ಗ್ರಾಹಕರ ಒಪ್ಪಿಗೆ ಪಡೆಯದೆ ಎಲ್‌ಐಸಿ ಬಾಂಡ್ ಮೇಲೆ ಹಣ ತೊಡಗಿಸುತ್ತಿದ್ದರು. ಆರೋಪಿಯಿಂದ ಒಂದು ಕಂಪ್ಯೂಟರ್ ಹಾಗೂ ₹23 ಲಕ್ಷ ಮೊತ್ತದ ಬಾಂಡ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿವೆ.

ಅಪರಾಧ ಸುದ್ದಿಗಳು

ಬಂಧಿತ ಆರೋಪಿ ಬಾಂಗ್ಲಾ ಪ್ರಜೆ

ಬೆಂಗಳೂರು: ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ನಾಜ್ (22) ಅವರ ಕೊಲೆ ಪ್ರಕರಣದಲ್ಲಿ ಬಂಧಿತ ಆರೋಪಿ, ಆಕೆಯ ಪತಿ ನಾಸಿರ್ ಹುಸೇನ್ ಬಾಂಗ್ಲಾ ದೇಶದ ಪ್ರಜೆ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ತಾವರೆಕೆರೆಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಕೊಲೆ ನಡೆದಿತ್ತು. ಕೃತ್ಯದ ಬಳಿಕ ಪರಾರಿಯಾಗಿದ್ದ ನಾಸಿರ್ ಹುಸೇನ್‌ನನ್ನು ದೆಹಲಿಯಲ್ಲಿ ಬಂಧಿಸಲಾಗಿತ್ತು. ವಿಚಾರಣೆ ವೇಳೆ 'ಬಾಂಗ್ಲಾದೇಶದಿಂದ ಅಕ್ರಮವಾಗಿ ಬಂದಿದ್ದಾಗಿ ತಿಳಿಸಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'ಬಾಂಗ್ಲಾದೇಶದ ಢಾಕಾದಲ್ಲಿ ಹಾರ್ಡ್‌ವೇರ್ ಎಂಜಿನಿಯರಿಂಗ್ ಪದವಿ ಪಡೆಯಲು ಸೇರಿದ್ದ. ಅರ್ಧಕ್ಕೆ ಮೊಟಕುಗೊಳಿಸಿ ಖಾಸಗಿಯಾಗಿ ಹಾರ್ಡ್‌ವೇರ್ ತರಬೇತಿ ಪಡೆದಿದ್ದ. ಈತ 9 ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದ. ಪಶ್ಚಿಮ ಬಂಗಾಳಕ್ಕೆ ಬಂದು ಅಲ್ಲಿ ನಕಲಿ ಆಧಾರ್ ಕಾರ್ಡ್ ಹಾಗೂ ಪಾನ್‌ಕಾರ್ಡ್ ಮಾಡಿಸಿಕೊಂಡಿದ್ದ' ಎಂದು ಮೂಲಗಳು ತಿಳಿಸಿವೆ.

'ದೆಹಲಿ, ಮುಂಬೈನಲ್ಲಿ ಮೊಬೈಲ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದ. ಬಳಿಕ 2019ರಲ್ಲಿ ಬೆಂಗಳೂರಿಗೆ ಬಂದು ಲ್ಯಾಪ್‌ಟಾಪ್ ರಿಪೇರಿ ಕೆಲಸ ಮಾಡುತ್ತಿದ್ದ. ಸುಭಾಷ್ ನಗರದಲ್ಲಿ ಶಾಪ್ ತೆರೆದುಕೊಂಡಿದ್ದ. ಈತನಿಗೆ ನಕಲಿ ದಾಖಲೆ ಮಾಡಿಕೊಟ್ಟವರಿಗಾಗಿ ಹುಡುಕಾಟ ನಡೆದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಾಹನ ಕಳ್ಳರ ಬಂಧನ

ದಾಬಸ್ ಪೇಟೆ: ಪಟ್ಟಣದಲ್ಲಿ ವಾಹನ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮೂವರನ್ನು ದಾಬಸ್ ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ತುಮಕೂರಿನ ಶಾಂತಿನಗರ ವಾಸಿ ಮುಬಾರಕ್ (27), ಎನ್.ಆರ್ ಕಾಲೊನಿಯ ನಂದೀಶ್ (19), ಅರವಿಂದ ನಗರದ ಅಭಿಶೇಖ್ (26) ಬಂಧಿತರು.

ಇವರಿಂದ ₹ 9.5 ಲಕ್ಷ ಮೌಲ್ಯದ 12 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳು ಸದ್ಯ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಮೋಜು ಮಸ್ತಿಗಾಗಿ ಬೈಕ್ ಕಳ್ಳತನ ಮಾಡುತ್ತಿದ್ದುದಾಗಿ ಆರೋಪಿಗಳು ವಿಚಾರಣೆ ವೇಳೆ ತಿಳಿಸಿದ್ದಾರೆ. ದಾಬಸ್ ಪೇಟೆ, ನರಸೀಪುರ, ತುಮಕೂರು, ಬೆಂಗಳೂರು ಸೇರಿದಂತೆ ವಿವಿಧೆಡೆ ವಾಹನ ಕಳ್ಳತನ ಮಾಡಿರುವುದನ್ನು ಆರೋಪಿಗಳು ಒಪ್ಪಿಕೊಂಡಿದ್ದಾರೆ. ಕಳವು ಮಾಡಿದ್ದ ಬೈಕ್‌ಗಳನ್ನು ದಾಖಲಾತಿಗಳನ್ನು ತಂದು ಕೊಡುವುದಾಗಿ ನಂಬಿಸಿ ಹಲವರಿಗೆ ಮಾರಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಸಾಧನೆ ಮುಂದಿಟ್ಟು ಮತಯಾಚನೆ: ಮುಖ್ಯಮಂತ್ರಿ ಬೊಮ್ಮಾಯಿ

'ದ್ವೇಷಾಧಾರಿತ ರಾಜಕಾರಣ ನಡೆಯಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕರ್ನಾಟಕದಲ್ಲಿ ವ್ಯಕ್ತಿ ಅಥವಾ ದ್ವೇಷಾಧಾರಿತ ರಾಜಕಾರಣ ನಡೆಯುವುದಿಲ್ಲ. ವಿಷಯಾಧಾರಿತ ಹಾಗೂ ಅಭಿವೃದ್ಧಿಯಾಧಾರಿತವಾಗಿ ನಡೆಯುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಮುಂದಿಟ್ಟು ಚುನಾವಣೆ ಎದುರಿಸುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಮುಖಂಡರು ಯಾವುದೇ ಟೀಕೆ, ಟಿಪ್ಪಣಿ ಮಾಡದೆ ಸಾಧನೆಗಳನ್ನು ಮುಂದಿಟ್ಟು ಮತ ಕೇಳುತ್ತಿದ್ದಾರೆ. ಬಿಜೆಪಿಯ ಅಭಿವೃದ್ಧಿ ಕಾರ್ಯಗಳಿಂದ ಕಾಂಗ್ರೆಸ್‌ಗೆ ಚುನಾವಣೆ ಎದುರಿಸಲು ಕಷ್ಟವಾಗುತ್ತಿದೆ. ಇಲ್ಲ ಸಲ್ಲದ ಆರೋಪ ಮಾಡುತ್ತ, ಅಧಿಕಾರಕ್ಕೆ ಬಂದೇ ಬಿಟ್ಟೆವು ಎನ್ನುವಂತೆ ಬಿಂಬಿಸಿಕೊಳ್ಳುತ್ತಿದ್ದಾರೆ' ಎಂದು ದೂರಿದರು.

'ಭಿನ್ನಮತ ಮರೆತು ಗೆಲುವಿಗೆ ತಂತ್ರ ರೂಪಿಸೋಣ'

ಬೆಳಗಾವಿ: 'ನಾನು ಮತ್ತೊಮ್ಮೆ ಬೆಳಗಾವಿಗೆ ಬರುವೆ. ಅಷ್ಟರಲ್ಲಿ ಎಲ್ಲ ಭಿನ್ನಮತ ಮುಗಿದಿರಬೇಕು. ಬೆಂಗಳೂರು ಹೊರತುಪಡಿಸಿದರೆ ಬೆಳಗಾವಿಯಲ್ಲಿ ಹೆಚ್ಚು ಕ್ಷೇತ್ರಗಳು ಇವೆ. ಎಲ್ಲ 18 ಕ್ಷೇತ್ರಗಳನ್ನೂ ನಾವು ಗೆಲ್ಲಬೇಕು. ಇದು ಎಲ್ಲರೂ ಒಂದಾಗಿದ್ದರೆ ಸಾಧ್ಯ. ಗೆಲುವಿಗೆ ಬೇಕಾದ ತಂತ್ರ ರೂಪಿಸೋಣ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಜಿಲ್ಲೆಯ ನಾಯಕರಿಗೆ ಕಟ್ಟುನಿಟ್ಟಿನ ತಾಕೀತು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಗರದ ಯುಕೆ-27 ಹೋಟೆಲ್‌ನಲ್ಲಿ ಶನಿವಾರ ರಾತ್ರಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಈಗ 13 ಸೀಟ್ ಗೆದ್ದಿದ್ದೇವೆ. ಉಳಿದ ಕ್ಷೇತ್ರಗಳನ್ನೂ ಗೆಲ್ಲುವುದು ಕಷ್ಟವಲ್ಲ. ಬದಲಾವಣೆ ಹಾಗೂ ಗೆಲುವಿನ ಸಾಧ್ಯತೆಗಳ ಬಗ್ಗೆ ಕಾರ್ಯಕರ್ತರಿಗೆ ಮನವರಿಕೆ ಮಾಡಬೇಕು' ಎಂಬುದಾಗಿಯೂ ಅವರು ಸೂಚನೆ ನೀಡಿದರು ಎಂದು ಮುಖಂಡರೊಬ್ಬರು ತಿಳಿಸಿದರು.

ಈ ಸಭೆಗೆ ಬೆಳಗಾವಿ ಗ್ರಾಮೀಣ, ಬೈಲಹೊಂಗಲ, ಖಾನಾಪುರ ಕ್ಷೇತ್ರಗಳಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳನ್ನೂ ಆಹ್ವಾನಿಸಲಾಗಿತ್ತು.

'ಕಿತ್ತೂರು ಕರ್ನಾಟಕ ಭಾಗದಲ್ಲಿ ಬಿಜೆಪಿ ಪ್ರಬಲವಾಗಿದ್ದು, ಕಾರ್ಯಕರ್ತರಲ್ಲಿ ಮತ್ತಷ್ಟು ಶಕ್ತಿ ತುಂಬಲು ಕೇಂದ್ರ ಗೃಹಸಚಿವ ಅಮಿತ್ ಶಾ ಪ್ರವಾಸ ಕೈಗೊಂಡಿದ್ದರು' ಎಂದರು.

ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳ ಸಮೀಕ್ಷಾ ಕಾರ್ಯ ನಡೆಯುತ್ತಿದೆ. ಯಾವ ಕ್ಷೇತ್ರಕ್ಕೂ, ಯಾರ ಹೆಸರನ್ನೂ ಅಧಿಕೃತವಾಗಿ ಅಂತಿಮಗೊಳಿಸಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಜನಪರ ಬಜೆಟ್: ಪ್ರಸಕ್ತ ವರ್ಷದ ಬಜೆಟ್ ದುಡಿಯುವವರ, ಜನರ, ರೈತರ ಪರವಾಗಿರಲಿದೆ. ಶಿಕ್ಷಣ, ಸಾಮಾಜಿಕ ಕ್ಷೇತ್ರಗಳ ಜನರ ನಿರೀಕ್ಷೆಗೆ ತಕ್ಕಂತೆ ಬಜೆಟ್ ಮಂಡನೆಯಾಗಲಿದೆ ಎಂದು ಶಿಗ್ಗಾವಿಯಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿದ ನಂತರ ಅವರು ಹೇಳಿದರು.

'ರಾಜ್ಯದ ಹಣಕಾಸಿನ ಪರಿಸ್ಥಿತಿ ಸದ್ಯ ಸುಧಾರಿಸಿದೆ. ಈ ಹಿಂದಿನ ಆಡಳಿತಗಳ ಸಾಲ ತೀರಿಸುವ ಹೊಣೆಗಾರಿಕೆಯೊಂದಿಗೆ, ಅಭಿವೃದ್ಧಿಯ ನೊಗವೂ ಹೊರಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯದ ಆರ್ಥಿಕ ಸ್ಥಿತಿ ಕಳೆದ ವರ್ಷಕ್ಕೆ ಹೋಲಿಸಿದರೆ ಆಶಾದಾಯಕವಾಗಿದೆ' ಎಂಬ ಭರವಸೆ ನೀಡಿದರು.

> **ಬೆಳಗಾವಿಯಲ್ಲಿ ಭಿನ್ನಮತವಿದೆ ಎನ್ನುವುದು ಸುಳ್ಳು. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಪಕ್ಷ ಸಂಘಟನೆಗೆ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಮುಂದಿನ ಚುನಾವಣೆಗೆ ಸ್ಪರ್ಧಿಸುವುದಿಲ್ಲ: ಬಿಎಸ್‌ವೈ

ಬೆಳಗಾವಿ: 'ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಸ್ಪರ್ಧಿಸುವುದಿಲ್ಲ' ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಂದಿದ್ದೇನೆ. ನನಗೀಗ 80 ವರ್ಷ. ಪಕ್ಷದ ಸಂಘಟನೆಗಾಗಿ ರಾಜ್ಯದಾದ್ಯಂತ ಪ್ರವಾಸ ಮಾಡುತ್ತೇನೆ' ಎಂದರು.

'ನಾನು ರಾಜಕೀಯದಿಂದ ನಿವೃತ್ತಿ ಪಡೆದಿಲ್ಲ. ದೇವರು ಶಕ್ತಿ ಕೊಟ್ಟರೆ ಮುಂದಿನ ಚುನಾವಣೆವರೆಗೂ ಪಕ್ಷಕ್ಕಾಗಿ ದುಡಿಯುತ್ತೇನೆ. ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ. ಬಿಜೆಪಿ ಋಣ ತೀರಿಸಲು ರಾಜ್ಯಾದ್ಯಂತ ಸಂಚರಿಸುತ್ತೇನೆ' ಎಂದರು.

'ಚುನಾವಣೆಯಲ್ಲಿ 140 ಸ್ಥಾನ ಗೆಲ್ಲುತ್ತೇವೆ. ಯಾರೋ ನಾನೇ ಮುಂದಿನ ಸಿ.ಎಂ ಎಂದು ತಿರುಕನ ಕನಸು ಕಾಣುತ್ತಿದ್ದಾರೆ. ಯೋಗ್ಯ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗುವುದು. ಇದಕ್ಕಾಗಿ ಎರಡು ಸಮೀಕ್ಷೆ ನಡೆಸಲಾಗುವುದು' ಎಂದರು.

ಸುದ್ದಿ 2 ನಿಮಿಷ

ಸ್ವಾತಂತ್ರ್ಯ ಚಳವಳಿಯ ಆಶಯ ಈಡೇರಿಲ್ಲ: ತೀಸ್ತಾ ಸೀತಲ್‌ವಾಡ್

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಸ್ವಾತಂತ್ರ್ಯಕ್ಕಾಗಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಸೇರಿದಂತೆ ಎಲ್ಲಾ ಧರ್ಮೀಯರು ಹೋರಾಟ ಮಾಡಿದ್ದಾರೆ. ಆದರೆ, ಸ್ವಾತಂತ್ರ್ಯ ಹೋರಾಟದ ಮಹತ್ತರ ಆಶಯ ಇನ್ನೂ ಈಡೇರದೇ ಇರುವುದು ದುರದೃಷ್ಟಕರ' ಎಂದು ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೀತಲ್‌ವಾಡ್ ಅವರು ವಿಷಾದ ವ್ಯಕ್ತಪಡಿಸಿದರು.

ಸಮಾನ ಮನಸ್ಕರ ವೇದಿಕೆ ಭಾನುವಾರ ಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಾಲಯದ ಮೈದಾನದಲ್ಲಿ ಏರ್ಪಡಿಸಿದ್ದ 'ಸಾಮರಸ್ಯ ಸಹಬಾಳ್ವೆ ಸಂಗಮ ಸಮಾವೇಶ' ಉದ್ಘಾಟಿಸಿ ಮಾತನಾಡಿದರು.

'ಬಹು ಸಂಸ್ಕೃತಿಯ ಸಮೃದ್ಧ ಸಮಾಜ ನಿರ್ಮಾಣ ಸ್ವಾತಂತ್ರ್ಯ ಹೋರಾಟದ ಮುಖ್ಯ ಆಶಯವಾಗಿತ್ತು. ಆದರೆ, ಪ್ರಸ್ತುತ ಈ ಆಶಯಕ್ಕೆ ವಿರುದ್ಧವಾದ ಘಟನೆಗಳು ನಡೆಯುತ್ತಿವೆ' ಎಂದರು.

'ಗೋಡ್ಸೆ ಸ್ವತಂತ್ರ ಭಾರತದ ಮೊದಲ ಉಗ್ರಗಾಮಿಯಾಗಿದ್ದ. ಗಾಂಧೀಜಿ ಹತ್ಯೆಗೆ 3 ಬಾರಿ ವಿಫಲನಾಗಿದ್ದ ಆತ 4ನೇ ಬಾರಿ ಸಫಲನಾದ. ಇಂತಹ ಗೋಡ್ಸೆ ಮನಸ್ಥಿತಿಯವರು ನಮ್ಮ ನಡುವೆ ಇಂದಿಗೂ ಇದ್ದಾರೆ' ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್ ಮಾತನಾಡಿದರು.

'ಕುವೆಂಪುಗೆ ಭಾರತರತ್ನ ನೀಡಿ'

ಮೈಸೂರು: 'ಯಾರ್‍ಯಾರಿಗೋ ಪ್ರಶಸ್ತಿಗಳು ಸಿಗುತ್ತಿವೆ. ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರವಾಗಿ ಭಾರತರತ್ನ ಪುರಸ್ಕಾರ ನೀಡಬೇಕು' ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಸರ್ಕಾರವನ್ನು ಒತ್ತಾಯಿಸಿದರು.

ಶಾಂತವೇರಿ ಜನವೇದಿಕೆ ಕರ್ನಾಟಕ ಸಹಕಾರದಲ್ಲಿ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಭಾನುವಾರ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೃಪಾಕರ–ಸೇನಾನಿ ವಿರಚಿತ 'ಕ್ಯಾಮರಾ v/s ಕುವೆಂಪು' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

'ಅಂಬೇಡ್ಕರ್, ಕುವೆಂಪು ಮುಂದಿನ ಜನಾಂಗಕ್ಕೆ ಏನು ಬೇಕು ಮತ್ತು ಏನಾಗಬಹುದು ಎಂಬುದನ್ನು ಹೇಳಿರುವ ಮಹಾಶಯರು. ಕುವೆಂಪು ಕ್ರಾಂತಿಕಾರಿ ಕವಿತೆಗಳು ಇಂದಿಗೂ ಸಲ್ಲುವಂಥವು. ದಾರ್ಶನಿಕ ಕವಿಯಾದ ಅವರು, ಪಂಚಮಂತ್ರ ಹಾಗೂ ಸಪ್ತಸೂತ್ರಗಳನ್ನು ನೀಡಿದ್ದಾರೆ. ಅವುಗಳಿಗೆ ತದ್ವಿರುದ್ಧವಾಗಿ ಇಂದಿನ ವಿದ್ಯಮಾನಗಳೆಲ್ಲವೂ ನಡೆಯುತ್ತಿವೆ' ಎಂದರು.

'ಇಂದು ವಿಶ್ವಪಥವಿಲ್ಲ. ಸರ್ವೋದಯವಿಲ್ಲ. ಸಮನ್ವಯವನ್ನು ಕೇಳುವಂತೆಯೇ ಇಲ್ಲ. ಮನುಜ ಮತವಿಲ್ಲ; ಪೂರ್ಣದೃಷ್ಟಿಯಂತೂ ಇಲ್ಲವೇ ಇಲ್ಲ' ಎಂದು ವಿಷಾದ ವ್ಯಕ್ತಪಡಿಸಿದರು. ಚಿತ್ರನಟ ಪ್ರಕಾಶ್ ರಾಜ್ ಮಾತನಾಡಿದರು. ಪ್ರಕಾಶನದ ಪ್ರೊ.ಬಿ.ಎನ್.ಶ್ರೀರಾಮ್, ಕೃಪಾಕರ–ಸೇನಾನಿ ಇದ್ದರು.

ಒಳನೋಟ | ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3jleSeW

ನನ್ನ–ಕುಮಾರಸ್ವಾಮಿ ಮಧ್ಯೆ ಭಿನ್ನಾಭಿಪ್ರಾಯ ಸೃಷ್ಟಿಸಲು ಸಾಧ್ಯವಿಲ್ಲ: ರೇವಣ್ಣ

ಹೊಳೆನರಸೀಪುರ (ಹಾಸನ): 'ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ, ಯಾರು ಏನೇ ಹೇಳಿದರೂ ನನ್ನ ಮತ್ತು ಎಚ್.ಡಿ.ಕುಮಾರಸ್ವಾಮಿ ನಡುವೆ ಯಾವುದೇ ಭಿನ್ನಾಭಿಪ್ರಾಯ ಸೃಷ್ಟಿಸಲು ಸಾಧ್ಯವಿಲ್ಲ' ಎಂದು ಶಾಸಕ ಎಚ್.ಡಿ.ರೇವಣ್ಣ ತಿಳಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ಹಾಸನ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಲು ಭವಾನಿ ರೇವಣ್ಣ ಹೆಸರನ್ನು ಮುನ್ನೆಲೆಗೆ ತಂದವರು ನಾವಲ್ಲ, ಕಾರ್ಯಕರ್ತರು. ಅದು ಅವರ ಅಭಿಮಾನ. ಆದರೆ, ಟಿಕೆಟ್ ವಿಷಯದಲ್ಲಿ ಯಾವುದೇ ನಿರ್ಧಾರ ಆಗಿಲ್ಲ' ಎಂದು ಸ್ಪಷ್ಟಪಡಿಸಿದರು.

'ಭವಾನಿ ರೇವಣ್ಣ ಅವರಿಗೆ ಸೂರಜ್ ಅಥವಾ ಪ್ರಜ್ವಲ್ ಟಿಕೆಟ್ ಕೊಡಿಸಲು ಸಾಧ್ಯವಿಲ್ಲ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, ವರಿಷ್ಠ ಎಚ್.ಡಿ.ದೇವೇಗೌಡರು, ಕುಮಾರಸ್ವಾಮಿ, ನಾನು ಮತ್ತು ಜಿಲ್ಲೆಯ ಶಾಸಕರು ಸೇರಿ ಹಾಸನ ಸೇರಿದಂತೆ ಏಳು ಕ್ಷೇತ್ರಗಳ ಅಭ್ಯರ್ಥಿಗಳ ಬಗ್ಗೆ ನಿರ್ಧಾರ ಮಾಡುತ್ತೇವೆ. ಪಕ್ಷ ಯಾರಿಗೇ ಟಿಕೆಟ್ ನೀಡಿದರೂ ಅವರನ್ನು ಗೆಲ್ಲಿಸುವುದು ಕಾರ್ಯಕರ್ತರ ಕರ್ತವ್ಯ' ಎಂದರು.

'ಕುಮಾರಸ್ವಾಮಿ ಆಡಳಿತದಲ್ಲಿ ಆದ ಅಭಿವೃದ್ಧಿ ಕಂಡಿರುವ ಜನ, ಈ ಬಾರಿ ರಾಜ್ಯದಲ್ಲಿ ಜೆಡಿಎಸ್‌ಗೆ ಅಧಿಕಾರ ನೀಡುತ್ತಾರೆ ಎನ್ನುವ ವಿಶ್ವಾಸವಿದೆ' ಎಂದರು.

ಡಿಕೆಶಿ – ಸಿದ್ದರಾಮಯ್ಯ ಪ್ರತ್ಯೇಕ ಯಾತ್ರೆ ವೇಳಾಪಟ್ಟಿ ಸಿದ್ಧ

'ಪ್ರಜಾಧ್ವನಿ' 2ನೇ ಹಂತ: 'ಪ್ರತಿಷ್ಠೆ' ಪಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಬೇಟೆಗೆ ಕೈಗೊಂಡ ಜಂಟಿ 'ಪ್ರಜಾಧ್ವನಿ' ಯಾತ್ರೆ ಮುಗಿಯುತ್ತಿದ್ದಂತೆ, ಇದೀಗ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಪ್ರತ್ಯೇಕ ಯಾತ್ರೆಯ ವೇಳಾಪಟ್ಟಿ ಸಿದ್ಧವಾಗಿದೆ ಪಕ್ಷದ ಪ್ರಮುಖ ನಾಯಕರನ್ನು ಜೊತೆಗೆ ಕರೆದುಕೊಂಡು ಉತ್ತರ– ದಕ್ಷಿಣ ಭಾಗದಿಂದ ಇಬ್ಬರೂ ಫೆಬ್ರುವರಿ 3ರಿಂದ ಕ್ಷೇತ್ರವಾರು 'ದಂಡಯಾತ್ರೆ' ಹೊರಡಲಿದ್ದಾರೆ.

ಪಕ್ಷದ 35 ನಾಯಕರು ಮತ್ತು ಆಪ್ತ ಬಳಗದ ಜೊತೆ ಬೀದರ್‌ನ ಬಸವಕಲ್ಯಾಣದಿಂದ ಸಿದ್ದರಾಮಯ್ಯ ಯಾತ್ರೆ ಆರಂಭಿಸಲಿದ್ದಾರೆ. ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಮುಖಂಡರಾದ ಜಮೀರ್ ಅಹಮ್ಮದ್, ಬೈರತಿ ಸುರೇಶ್, ಎಚ್.ಸಿ. ಮಹಾದೇವಪ್ಪ, ಸಂತೋಷ್ ಲಾಡ್, ಈಶ್ವರ್ ಖಂಡ್ರೆ, ಸತೀಶ್ ಜಾರಕಿಹೊಳಿ, ಉಮಾಶ್ರೀ, ಅಂಜಲಿ ನಿಂಬಾಳ್ಕರ್ ಮುಂತಾದವರು ಸಿದ್ದರಾಮಯ್ಯ ಜೊತೆ ಯಾತ್ರೆಯಲ್ಲಿ ಇರಲಿದ್ದಾರೆ.

> **ನನ್ನನ್ನು ರಾಷ್ಟ್ರಪತಿ, ಪ್ರಧಾನಿ ಮಾಡುತ್ತೇನೆ ಎಂದರೂ ನನ್ನ ಹೆಣವೂ ಬಿಜೆಪಿಗೆ ಹೋಗುವುದಿಲ್ಲ. ಆರ್‌ಎಸ್‌ಎಸ್ ಕುರಿತ ನನ್ನ ನಿಲುವು ಯಾವುದೇ ಕಾರಣಕ್ಕೂ ಬದಲಾಗಲ್ಲ**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

ಬಸವಕಲ್ಯಾಣದ ಅನುಭವ ಮಂಟಪಕ್ಕೆ ಭೇಟಿ ನೀಡಿ ಯಾತ್ರೆ ಆರಂಭಿಸಲಿರುವ ಸಿದ್ದರಾಮಯ್ಯ, ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಅದೇ ದಿನ ಬಾಲ್ಕಿಯಲ್ಲಿ, ಫೆ. 4ರಂದು ಔರಾದ್, ಬೀದರ್, ಬೀದರ್ ದಕ್ಷಿಣ ಕ್ಷೇತ್ರ, ಹುಮನಾಬಾದ್‌ನಲ್ಲಿ ಸಮಾವೇಶದಲ್ಲಿ ಮಾತನಾಡಿ ಕಲಬುರಗಿಯಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಫೆ. 6 ರಂದು ಗುಲಬರ್ಗಾ ಗ್ರಾಮೀಣ, ಚಿಂಚೋಳಿ, ಸೇಡಂ, 7ರಂದು ಆಳಂದ, ಅಫ್ಜಲಪುರ, ಯಡ್ರಾಮಿ ಜೇವರ್ಗಿ, 8ರಂದು ಚಿತ್ತಾಪುರ, 10ರಂದು ಸುರಪೂರ, ಶಹಾಪುರ, ಕಲಬುರ್ಗಿ ಉತ್ತರಹಾಗೂದಕ್ಷಿಣ, 11ರಂದು ಸಿಂಧಗಿ, ಇಂಡಿ, ನಾಗಠಾಣಾ, 12ರಂದು ಬಬಲೇಶ್ವರ, ದೇವರ ಹಿಪ್ಪರಗಿ, ಬಸವನ ಬಾಗೇವಾಡಿ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ಸಂಚರಿಸಲಿದ್ದಾರೆ.

ಹಳೇ ಮೈಸೂರು ಭಾಗದಲ್ಲಿ ಡಿ.ಕೆ. ಶಿವಕುಮಾರ್ ಯಾತ್ರೆ ಕೈಗೊಳ್ಳಲಿದ್ದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ವೀರಪ್ಪ ಮೊಯಿಲಿ, ಜಿ.ಪರಮೇಶ್ವರ, ದಿನೇಶ್ ಗುಂಡೂರಾವ್, ರೆಹಮಾನ್ ಖಾನ್, ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ಕೆ.ಎಚ್. ಮುನಿಯಪ್ಪ., ಕೆ.ಜೆ. ಜಾರ್ಜ್ ಸೇರಿದಂತೆ 54 ನಾಯಕರು ಜೊತೆಗೆ ಇರಲಿದ್ದಾರೆ. ಕೋಲಾರ ಜಿಲ್ಲೆಯಿಂದ ಶಿವಕುಮಾರ್ ನೇತೃತ್ವದ ತಂಡದ ಯಾತ್ರೆ ಆರಂಭವಾಗಲಿದೆ. ಫೆ. 3ರಂದು ಮುಳಬಾಗಿಲು, ಕೆಜಿಎಫ್, 4ರಂದು ಮಾಲೂರು, ದೇವನಹಳ್ಳಿ, 6ರಂದು ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, 7ರಂದು ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, 8ರಂದು ಶಿಕಾರಿಪುರ, ಸೊರಬ, ಸಾಗರ, 9ರಂದು ತೀರ್ಥಹಳ್ಳಿ, ಭದ್ರಾವತಿಯ ಸಮಾವೇಶಗಳಲ್ಲಿ ಶಿವಕುಮಾರ್ ಭಾಗವಹಿಸಲಿದ್ದಾರೆ.

'ಇಡೀ ರಾಜ್ಯ ಹಿಂದುತ್ವದ ಫ್ಯಾಕ್ಟರಿ ಆಗಲಿದೆ'

ತುಮಕೂರು: 'ದಕ್ಷಿಣ ಕನ್ನಡ ಜಿಲ್ಲೆ ಮಾತ್ರ ಅಲ್ಲ, ಮುಂದೊಂದು ದಿನ ಇಡೀ ರಾಜ್ಯ ಹಿಂದುತ್ವದ ಫ್ಯಾಕ್ಟರಿ ಆಗಲಿದೆ' ಎಂದು ವಿಶ್ವ ಹಿಂದೂ ಪರಿಷತ್ತಿನ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹೇಳಿದ್ದಾರೆ.

ನಗರದಲ್ಲಿ ಶನಿವಾರ ನಡೆದ ವಿಶ್ವ ಹಿಂದೂ ಪರಿಷತ್ತಿನ ಶೌರ್ಯ ಯಾತ್ರೆಯಲ್ಲಿ ಅವರು ಮಾಡಿದ ಭಾಷಣ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ದಕ್ಷಿಣ ಕನ್ನಡ ಜಿಲ್ಲೆ ಹಿಂದುತ್ವದ ಫ್ಯಾಕ್ಟರಿ ಆಗಿದೆ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಸಿದ್ದರಾಮಯ್ಯನವರೇ ನೆನಪಿರಲಿ, ಮುಂದಿನ ದಿನಗಳಲ್ಲಿ ತುಮಕೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳೂ ಹಿಂದುತ್ವದ ಫ್ಯಾಕ್ಟರಿ ಆಗಲಿವೆ' ಎಂದ್ದಾರೆ.

ಗುಜರಾತ್‌ನಲ್ಲಿ 59 ಜನ ಕರಸೇವಕರ ಹತ್ಯೆಗೆ ಪ್ರತೀಕಾರವಾಗಿ ಸುಮಾರು ಎರಡು ಸಾವಿರ ಜನರ ಹತ್ಯೆಯಾಗಿದೆ. ಇದು ಹಿಂದೂಗಳ ಪರಾಕ್ರಮ, ಸಾಮರ್ಥ್ಯ ಎಂದು ಅವರು ಸಮರ್ಥಿಸಿಕೊಂಡಿದ್ದಾರೆ.

'ಹಿಂದೂ ಸಮಾಜ ಯಾವತ್ತೂ ನಪುಂಸಕ ಸಮಾಜ ಅಲ್ಲ. ನಮ್ಮ ಸಾಮರ್ಥ್ಯವನ್ನು ಇಡೀ ಜಗತ್ತಿಗೆ ತೋರಿಸಿದ್ದೇವೆ. ಗುಜರಾತಿನ ಘಟನೆಯನ್ನು ಒಂದು ಸಲ ನೆನಪು ಮಾಡಿಕೊಳ್ಳಬೇಕು. 59 ಕರಸೇವಕರ ಹತ್ಯೆಯ ನಂತರ ಗುಜರಾತಿನಲ್ಲಿ ನಡೆದ ಹತ್ಯೆಗಳ ಸಂಖ್ಯೆಯ ಲೆಕ್ಕ ಇನ್ನೂ ಸಿಕ್ಕಿಲ್ಲ' ಎಂದು ಪಂಪ್‌ವೆಲ್ ಹೇಳಿದ್ದಾರೆ.

ಸರ್ಕಾರಿ ಗೌರವದೊಂದಿಗೆ ಸಾರಥಿ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ವಿಂಗ್ ಕಮಾಂಡರ್ ಹನುಮಂತರಾವ್ ಸಾರಥಿ ಅವರ ಪಾರ್ಥಿವ ಶರೀರಕ್ಕೆ ಕುಟುಂಬದವರು ಅಂತಿಮ ನಮನ ಸಲ್ಲಿಸಿದರು – ಪಿಟಿಐ ಚಿತ್ರ

ಬೆಳಗಾವಿ: ಮಧ್ಯಪ್ರದೇಶದ ಗ್ವಾಲಿಯರ್ ಸಮೀಪ ಯುದ್ಧ ವಿಮಾನಗಳ ಮಧ್ಯೆ ಶನಿವಾರ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ಪೈಲಟ್, ವಿಂಗ್ ಕಮಾಂಡರ್ ಹನುಮಂತರಾವ್ ಸಾರಥಿ ಅವರ ಅಂತ್ಯಕ್ರಿಯೆ ತಾಲ್ಲೂಕಿನ ಬೆನಕನಹಳ್ಳಿಯ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಭಾನುವಾರ ನೆರವೇರಿತು.

ಕುರುಬ ಸಮುದಾಯದ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಿತು. ಹಿರಿಯ ಸಹೋದರ ಪ್ರವೀಣ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಲಾಯಿತು. ಗಣೇಶಪುರದ ಮುಖ್ಯ ರಸ್ತೆಯಲ್ಲಿ ಪಾರ್ಥಿವ ಶರೀರದ ಮೆರವಣಿಗೆ ಮಾಡಲಾಯಿತು.

ಹಾಸ್ಯ ನಟ ಮನದೀಪ್ ರಾಯ್ ನಿಧನ

ಬೆಂಗಳೂರು: ಹಾಸ್ಯ ನಟ ಮನದೀಪ್ ರಾಯ್ (73) ಅವರು ಭಾನುವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಕೆಲ ದಿನಗಳ ಹಿಂದೆಯೂ ಹೃದಯಾಘಾತಕ್ಕೀಡಾಗಿದ್ದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು.

ಮನ್‌ದೀಪ್ ಅವರು ಬಾಲ್ಯದಿಂದಲೂ ರಂಗಭೂಮಿಯತ್ತಲೇ ಆಕರ್ಷಿತರಾಗಿದ್ದರು. ಮುಂಬೈ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ಅವರಿಗೆ ಶಂಕರ್‌ನಾಗ್ ಒಡನಾಟ ಸಿಕ್ಕಿತು. ಸಾಕಷ್ಟು ರಂಗಪ್ರಯೋಗಗಳಲ್ಲಿ ರಾಯ್ ಅಭಿನಯಿಸಿದ್ದರು. ಮುಂದೆ ಶಂಕರ್‌ನಾಗ್ ಜೊತೆ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟರು. ಕೆಲಕಾಲ ಶಂಕರ್‌ನಾಗ್, ಅನಂತನಾಗ್ ಜೊತೆಗೇ ದುಡಿದರು. ಕನ್ನಡ ಕಲಿತು ಕನ್ನಡ ಚಿತ್ರರಂಗದಲ್ಲಿ ದುಡಿದರು.

ಸುಮಾರು 500ರಷ್ಟು ಚಿತ್ರಗಳಲ್ಲಿ ಬಣ್ಣಹಚ್ಚಿದ ಹೆಗ್ಗಳಿಕೆ ಅವರದ್ದು. ಕಿರುತೆರೆ ಧಾರಾವಾಹಿಗಳಲ್ಲಿಯೂ ಅವರು ಅಭಿನಯಿಸಿದ್ದರು. ಮಿಂಚಿನ ಓಟ, ಬಾಡದ ಹೂ, ಆಕಸ್ಮಿಕ, ಅಗ್ನಿ ಐಪಿಎಸ್, ದೀಪಾವಳಿ, ಅಯ್ಯ, ಅಪೂರ್ವ ಸಂಗಮ, ಪ್ರೀತ್ಸೋದ್ ತಪ್ಪಾ, ಏಳು ಸುತ್ತಿನ ಕೋಟೆ, ಗಜಪತಿ ಗರ್ವಭಂಗ ಅವರ ನಟಿಸಿದ ಪ್ರಮುಖ ಚಿತ್ರಗಳು.

ಮನದೀಪ್ ಅಂತ್ಯಕ್ರಿಯೆ ಹೆಬ್ಬಾಳದ ಚಿತಾಗಾರದಲ್ಲಿ ನಡೆಯಿತು.

ಕರ್ನಾಟಕ ಸರ್ಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮೈಸೂರು–570 023.

ಸಂ.ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ. 21/2022–23/ದಿ: 25–01–2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರುರವರ ಸಹಯೋಗದೊಂದಿಗೆ, CPWD/ /KPWD/ WRDO/PRED and any other Government Organisation ನಲ್ಲಿ ನೊಂದಾಯಿತರಾಗಿರುವ ಅಂದರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಕಡ್ಡಾಯವಾಗಿ ಎನ್‌ರೋಲ್ ಮಾಡಿರುವ 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್ ನಮೂನೆ **KW-4** ಪದ್ಧತಿಯಂತೆ **"2022–23ನೇ ಸಾಲಿನ 5054 ಮಳೆ ಪರಿಹಾರ ಕಾರ್ಯಕ್ರಮ ಯೋಜನೆ ಅನುದಾನದಡಿ ಟೆಂಡರ್** ಆಹ್ವಾನಿಸಲಾಗಿದ್ದು, **ಮೈಸೂರು ತಾಲ್ಲೂಕಿನಲ್ಲಿ** ಅನುಮೋದನೆಯಾಗಿರುವ ಕಾಮಗಾರಿಗಳಾಗಿದ್ದು, ಸದರಿ ಕಾಮಗಾರಿಗಳಲ್ಲಿ ಸಿ.ಸಿ.ರಸ್ತೆ ಮತ್ತು ಸಿ.ಸಿ ಚರಂಡಿಗಳ ನಿರ್ಮಾಣ/ಅಭಿವೃದ್ಧಿ ಹಾಗೂ ಡಾಂಬರ್ ರಸ್ತೆ ಮತ್ತು ಇತರೆ ಕಾಮಗಾರಿಗಳಾಗಿರುತ್ತವೆ. ಸದರಿ ಕಾಮಗಾರಿಗಳ ಮೊತ್ತವು ರೂ.500.00 ಲಕ್ಷಗಳಾಗಿದ್ದು, ಒಟ್ಟು 02 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಗಳ ಇ.ಎಂ.ಡಿ ರೂ.7,50,000/– ಗಳಿಗೆ ಸಾಮಾನ್ಯ ವರ್ಗಕ್ಕೆ ಕಾಮಗಾರಿಗಳನ್ನು ಮೀಸಲಿರಿಸಿದೆ. ಇದರಂತೆ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು **ದಿ: 25.01.2023 ರಿಂದ 01.02.2023 ಸಂಜೆ 16.00 ಘಂಟೆಯವರೆಗೆ** ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ **ದಿನಾಂಕ: 31.01.2023, 16.00** ಘಂಟೆಯವರೆಗೆ ಹಾಗೂ ಟೆಂಡರ್ ತೆರೆಯುವ ದಿ: **02.02.2023ರ ಸಂಜೆ 17.00 ಘಂಟೆಯ ನಂತರ** ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು
ಪಂ.ರಾ.ಇಂ.ವಿಭಾಗ, ಮೈಸೂರು

DIPR/DDMYS/KSMCA/933/2022-23

ಬಜರಂಗದಳದ ಮೂವರ ವಿರುದ್ಧ ಪ್ರಕರಣ ದಾಖಲು

ಚಿಕ್ಕಮಗಳೂರು: ಮೂಡಿಗೆರೆ ತಾಲ್ಲೂಕಿನ ಮುದ್ರೆಮನೆ ಬಳಿ (ಬೇಲೂರು ರಸ್ತೆ) ಗೋಮಾಂಸ ಮಾರಾಟ ಮಾಡಿದ ಆರೋಪದಲ್ಲಿ ಅಸ್ಸಾಂನ ಕೂಲಿಕಾರ ಗಾಜಿವುರ್ ರೆಹಮಾನ್ ಎಂಬಾತನನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಥಳಿಸಿದ ಪ್ರಕರಣದಲ್ಲಿ ಬಜರಂಗದಳದ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ಗಾಜಿವುರ್ ಪತ್ನಿ ಅಲಿಸಾ ಅವರು ನಿತಿನ್, ಅಜಿತ್ ಹಾಗೂ ಮಧು ವಿರುದ್ಧ ದೂರು ನೀಡಿದ್ದಾರೆ. ಗಾಜಿವುರ್‌ನನ್ನು ಕಂಬಕ್ಕೆ ಕಟ್ಟಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

'ಆರೋಪಿಗಳು ತಲೆಮರೆಸಿಕೊಂಡಿದ್ದಾರೆ, ಶೋಧ ನಡೆಯುತ್ತಿದೆ' ಎಂದು ಗೋಣಿಬೀಡು ಠಾಣೆ ಪಿಎಸ್‌ಐ ಎಂ.ಆರ್. ಧನಂಜಯ 'ಪ್ರಜಾವಾಣಿ'ಗೆ ತಿಳಿಸಿದರು.

ಗಾಜಿವುರ್ ವಶಕ್ಕೆ: ತಾಲ್ಲೂಕಿನ ಮುದ್ರೆಮನೆ ಕಾಫಿ ಎಸ್ಟೇಟ್‌ನ ಕೂಲಿ ಲೈನ್ ಪ್ರದೇಶದಲ್ಲಿ ಗೋಮಾಂಸ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಗಾಜಿವುರ್ ರೆಹಮಾನ್‌ನನ್ನು ವಶಕ್ಕೆ ಪಡೆದಿದ್ದಾರೆ.

ಅಭಿಮಾನಿಗಳಲ್ಲಿ ಸಂತಸದ ಹೊನಲು • ಸ್ಮಾರಕ ವೀಕ್ಷಣೆಗೆ ನೂಕುನುಗ್ಗಲು

'ವಿಷ್ಣುವರ್ಧನ್ ಸ್ಮಾರಕ ಭವನ' ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮೈಸೂರು ತಾಲ್ಲೂಕಿನ ಹಾಲಾಳು ಗ್ರಾಮದಲ್ಲಿ ನಿರ್ಮಾಣಗೊಂಡಿರುವ 'ಸಾಹಸಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕ ಭವನ' ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಷ್ಣು ಪ್ರತಿಮೆಯನ್ನು ಭಾನುವಾರ ಅನಾವಣಗೊಳಿಸಿದರು. ಸಂಸದ ಪ್ರತಾಪಸಿಂಹ, ಶಾಸಕರಾದ ಎಲ್‌.ನಾಗೇಂದ್ರ, ಎಸ್‌.ಎ.ರಾಮದಾಸ್‌, ನಟಿ ಭಾರತಿ, ಶಾಸಕ ಜಿ.ಟಿ.ದೇವೇಗೌಡ, ಕೀರ್ತಿ ವಿಷ್ಣುವರ್ಧನ್ ಇದ್ದಾರೆ – ಪ್ರಜಾವಾಣಿ ಚಿತ್ರ

ಮೈಸೂರು: ಚಲನಚಿತ್ರ ನಟ ವಿಷ್ಣುವರ್ಧನ್ ಅಭಿಮಾನಿಗಳ ಜಯಘೋಷದ ನಡುವೆ 'ಸಾಹಸಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕ ಭವನ'ವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಲೋಕಾರ್ಪಣೆಗೊಳಿಸಿದರು.

ತಾಲ್ಲೂಕಿನ ಹಾಲಾಳು ಗ್ರಾಮದ ಉದ್ಬೂರು ಗೇಟ್ ಬಳಿ ನಿರ್ಮಿಸಿರುವ ಸ್ಮಾರಕದಲ್ಲಿ 'ಆಪ್ತರಕ್ಷಕ' ಚಲನಚಿತ್ರ ಪಾತ್ರದ ಮಾದರಿಯಲ್ಲಿ ಕೆತ್ತಲಾದ 7 ಅಡಿ ಎತ್ತರದ ಪ್ರತಿಮೆಯನ್ನೂ ಅನಾವರಣಗೊಳಿಸಿದರು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ, '70ರ ದಶಕದಲ್ಲಿ 'ನಾಗರಹಾವು' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ 4 ದಶಕದ ಕಾಲ ಚಿತ್ರಗಳ ಮೂಲಕ ಕನ್ನಡ ಸಂಸ್ಕೃತಿಯ ಧ್ವಜ ಎತ್ತಿಹಿಡಿದರು. ಅವರ ಅಭಿಮಾನಿಯಾಗಿ ಇಲ್ಲಿಗೆ ಬಂದಿದ್ದೇನೆ' ಎಂದರು.

'ಮಾನವೀಯತೆ ಮೆರೆದ ವಿಷ್ಣು ಅವರ ಶಕ್ತಿಯಾಗಿದ್ದವರು ಭಾರತಿ. ಸ್ಮಾರಕ ನಿರ್ಮಾಣಕ್ಕೆ ಸ್ಥಳ ವಿವಾದ ಸೇರಿದಂತೆ ಹಲವು ಕಷ್ಟಗಳು ಎದುರಾದಾಗ ಮೈಸೂರಿನಲ್ಲೇ ಸ್ಥಾಪಿಸುವ ಗಟ್ಟಿ ನಿಲುವು ತೆಗೆದುಕೊಂಡರು' ಎಂದು ಹೇಳಿದರು.

'ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ₹ 11 ಕೋಟಿ ಅನುದಾನ ನೀಡಿದ್ದರಿಂದ ಸ್ಮಾರಕ ಎಲ್ಲರ ಎದುರು ಭವ್ಯವಾಗಿ ನಿಂತಿದೆ. ಸಿನಿಮಾ ಕಲಿಕಾ ಸಂಸ್ಥೆ ನಿರ್ಮಾಣ ಕನಸಿದ್ದು, ಅದಕ್ಕೂ ಸರ್ಕಾರದ ಸಹಕಾರವಿದೆ' ಎಂದು ಭರವಸೆ ನೀಡಿದರು.

ಮುಖ್ಯಾಂಶಗಳು
- 7 ಅಡಿ ಎತ್ತರದ ಪ್ರತಿಮೆ
- ಮುಗಿಲುಮುಟ್ಟಿದ ಜಯಘೋಷ
- ನಾಡಿನ ವಿವಿಧೆಡೆಯಿಂದ ಬಂದಿದ್ದ ಅಭಿಮಾನಿಗಳು

ಬೊಮ್ಮಾಯಿ ಅವರೇ ಬರಲಿ: ನಟಿ ಭಾರತಿ ಮಾತನಾಡಿ, 'ದಶಕದ ತಪಸ್ಸಿಗೆ ಫಲ ಸಿಕ್ಕಿದೆ. ಹೆರಿಗೆ ನೋವು ಮಗುವಿನ ಮುಖ ನೋಡಿದಾಗ ನಿವಾರಣೆಯಾಗುವಂತೆ ಸಂತೃಪ್ತ ಭಾವ ಮೂಡಿದೆ. ಬೊಮ್ಮಾಯಿ ಅವರು ಸ್ಮಾರಕ ನಿರ್ಮಾಣಕ್ಕೆ ಒತ್ತಾಸೆಯಾಗಿ ನಿಂತರು. ಅವರು ಮತ್ತೆ ಬಂದರೆ ಒಳ್ಳೆಯದೇ ಅಲ್ಲವೇ?' ಎಂದರು.

ನಟಿ ಭವ್ಯಾ, ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ರಮೇಶ್ ಭಟ್ ಹಾಗೂ ವಿಷ್ಣುವರ್ಧನ್ ಕುಟುಂಬದ ಸದಸ್ಯರು ಇದ್ದರು.

ಸ್ಮಾರಕ ವೀಕ್ಷಣೆಗೆ ನೂಕುನುಗ್ಗಲು: ನಾಡಿನ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಅಭಿಮಾನಿಗಳಿಗೆ ಆರಂಭದಲ್ಲಿ ಸ್ಮಾರಕ ವೀಕ್ಷಣೆಗೆ ಅವಕಾಶ ಸಿಗದೆ ನಿರಾಶರಾದರು. ಸ್ಥಳದಲ್ಲೇ ಆಕ್ರೋಶ ವ್ಯಕ್ತಪಡಿಸಿದರು.

'ಸ್ಮಾರಕ ಒಳಗೆ ಭದ್ರತೆಯ ವ್ಯವಸ್ಥೆ ಇಲ್ಲ. ಹೀಗಾಗಿ, ನಾಳೆ ಬರುವಂತೆ ಪೊಲೀಸರು ಹೇಳಿದ್ದಾರೆ. ದಯವಿಟ್ಟು ಸಹಕರಿಸಿ' ಎಂದು ನಟ ಅನಿರುದ್ಧ ಮನವೊಲಿಸಲು ಯತ್ನಿಸಿದರು. ಆದರೂ ಅಭಿಮಾನಿಗಳು ಆವರಣಕ್ಕೆ ನುಗ್ಗಿ ಸ್ಮಾರಕ ವೀಕ್ಷಿಸಿದರು. ಈ ವೇಳೆ ನೂಕುನುಗ್ಗಲು ಉಂಟಾಗಿತ್ತು.

'ವಿಷ್ಣು ಕರ್ನಾಟಕ ರತ್ನ ಅಲ್ಲವೇ?'

ವಿಷ್ಣುಗೆ ಕರ್ನಾಟಕ ರತ್ನ ನೀಡಬೇಕು ಎಂಬ ಒತ್ತಾಯ ಅಭಿಮಾನಿಗಳಿಂದ ಕೇಳಿಬಂತು.

'ಸಾಹಸಸಿಂಹ ವಿಷ್ಣುವರ್ಧನ್ ಅವರು ಕರ್ನಾಟಕ ರತ್ನ ಅಲ್ಲವೇ' ಎಂಬ ಪ್ಲೆಕಾರ್ಡ್ ಹಿಡಿದು ಮುಖ್ಯಮಂತ್ರಿ ಅವರ ಗಮನಸೆಳೆದರು.

'ನಿಮ್ಮ ಭಾವನೆಗಳಿಗೆ ಮುಂದಿನ ದಿನಗಳಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಲಾಗುವುದು' ಎಂದು ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದರಿಂದ ಅಭಿಮಾನಿಗಳು ಸುಮ್ಮನಾದರು.

ಇದಕ್ಕೂ ಮುನ್ನ, ಮೈಸೂರಿನಿಂದ ಸ್ಮಾರಕ ಸ್ಥಳದವರೆಗೆ ಅಭಿಮಾನಿಗಳು ಪಲ್ಲಕ್ಕಿ ಮೆರವಣಿಗೆ ನಡೆಸಿದರು.

ಕರ್ನಾಟಕ ಕ್ಷತ್ರಿಯ ಸಮಾಜದ ಸಮಾವೇಶದಲ್ಲಿ ಭರವಸೆ

ಬೇಡಿಕೆ ಈಡೇರಿಸಲು ಬದ್ಧ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಕ್ಷತ್ರಿಯ ಸಮಾವೇಶದಲ್ಲಿ ತಿಗಳ ಮಹಾಸಭಾ ಅಧ್ಯಕ್ಷ ಸುಬ್ಬಣ್ಣ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿಪತ್ರ ಸಲ್ಲಿಸಿದರು. ಕರ್ನಾಟಕ ಕ್ಷತ್ರಿಯ ಒಕ್ಕೂಟದ ಅಧ್ಯಕ್ಷ ಉದಯ್ ಸಿಂಗ್, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಮರಾಠಾ ಪರಿಷತ್ ಅಧ್ಯಕ್ಷ ಸುರೇಶ್ ರಾವ್ ಸಾಠೆ, ರಾಮಕ್ಷತ್ರಿಯ ಸಂಘದ ಅಧ್ಯಕ್ಷ ಎಸ್‌.ಕೆ. ನಾಯಕ್ ಇದ್ದರು

ಬೆಂಗಳೂರು: 'ಪ್ರತ್ಯೇಕ ಅಭಿವೃದ್ಧಿ ನಿಗಮ, ಸಮುದಾಯ ಭವನಗಳ ನಿರ್ಮಾಣಕ್ಕೆ ಜಮೀನು ಮತ್ತು ಅನುದಾನ ಮಂಜೂರಾತಿ ಸೇರಿದಂತೆ ರಾಜ್ಯದಲ್ಲಿನ ಕ್ಷತ್ರಿಯ ಸಮಾಜದ ಎಲ್ಲ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ನಗರದ ಅರಮನೆ ಮೈದಾನದಲ್ಲಿ ಕರ್ನಾಟಕ ಕ್ಷತ್ರಿಯ ಒಕ್ಕೂಟದ ನೇತೃತ್ವದಲ್ಲಿ ಭಾನುವಾರ ನಡೆದ ಕ್ಷತ್ರಿಯ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 'ಕ್ಷತ್ರಿಯ ಅಭಿವೃದ್ಧಿ ನಿಗಮ ಸ್ಥಾಪನೆ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಸಮುದಾಯ ಭವನಗಳ ನಿರ್ಮಾಣಕ್ಕೆ ನೆರವು ನೀಡಲಾಗುವುದು. ಕ್ಷತ್ರಿಯ ಒಕ್ಕೂಟದ ಭಾಗವಾಗಿರುವ 38 ಸಮುದಾಯಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವ ಪ್ರಯತ್ನವನ್ನು ಮುಂಬರುವ ಬಜೆಟ್‌ನಲ್ಲಿ ಮಾಡಲಾಗುವುದು' ಎಂದರು.

'ಶ್ರೀರಾಮ, ಶ್ರೀಕೃಷ್ಣ ಕ್ಷತ್ರಿಯ ವಂಶದವರು. ಸಾಮ್ರಾಟ್ ಅಶೋಕ, ರಾಣಾ ಪ್ರತಾಪ್ ಸಿಂಗ್, ಶಿವಾಜಿ ಮಹಾರಾಜ ಕೂಡ ಕ್ಷತ್ರಿಯರು. ಸ್ವಾಮಿ ವಿವೇಕಾನಂದ ಕೂಡ ಕ್ಷತ್ರಿಯರು. ಕ್ಷತ್ರಿಯರಿಗೆ ಯುದ್ಧಕ್ಕಾಗಿ ಕತ್ತಿ ಹಿಡಿಯುವುದು ಹಾಗೂ ಜ್ಞಾನದ ಕತ್ತಿ ಹಿಡಿಯುವುದು ಎರಡೂ ಗೊತ್ತಿದೆ' ಎಂದರು.

ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮಾತನಾಡಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಶಾಸಕರಾದ ಬಂಡೆಪ್ಪ ಕಾಶೆಂಪೂರ, ಅರವಿಂದ ಲಿಂಬಾವಳಿ, ಸಂಸದ ಪಿ.ಸಿ. ಮೋಹನ್, ಮರಾಠಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾರುತಿ ರಾವ್ ಮುಳೆ, ಬಿಜೆಪಿ ಮುಖಂಡ ಕೃಷ್ಣ ಜೆ. ಪಾಲೇಮಾರ್ ಮಾತನಾಡಿದರು. ಕರ್ನಾಟಕ ಕ್ಷತ್ರಿಯ ಒಕ್ಕೂಟದ ಅಧ್ಯಕ್ಷ ಉದಯ್ ಸಿಂಗ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಗವಿಪುರ ಗೋಸಾಯಿ ಮಠದ ಮಂಜುನಾಥ ಭಾರತಿ ಸ್ವಾಮೀಜಿ, ದೊಡ್ಡಬಳ್ಳಾಪುರ ತಾಲ್ಲೂಕಿನ ತಪಸೀಹಳ್ಳಿಯ ಪುಷ್ಪಾಂಡಜ ಮುನಿ ಆಶ್ರಮದ ಜ್ಞಾನಾನಂದಗಿರಿ ಸ್ವಾಮೀಜಿ, ಪಂಡರಾಪುರದ ಏಕನಾಥ ತುಳಸಿದಾಸ ಮಹಾರಾಜ ನಾಮದಾಸ್, ಮಂಟೇಸ್ವಾಮಿ ಮಠದ ಪೀಠಾಧಿಪತಿ ವರ್ಚಸ್ವಿ ಶ್ರೀಕಂಠ ಸಿದ್ದಲಿಂಗ ರಾಜೇ ಅರಸ್, ಮೈಲಾರಲಿಂಗ ಕ್ಷೇತ್ರದ ಧರ್ಮಾಧಿಕಾರಿ ವೆಂಕಟಪ್ಪ, ಮಾಜಿ ಶಾಸಕ ಲಕ್ಷ್ಮೀನಾರಾಯಣ, ತಿಗಳ ಮಹಾಸಭಾ ಅಧ್ಯಕ್ಷ ಸುಬ್ಬಣ್ಣ, ಭಾವಸಾರ ಮಹಾಸಭಾ ಅಧ್ಯಕ್ಷ ನಾರಾಯಣ ತಾತುಸ್ಕರ್, ರಾಜ್ಯ ಮರಾಠಾ ಪರಿಷತ್ ಅಧ್ಯಕ್ಷ ಸುರೇಶ್ ರಾವ್ ಸಾಠೆ, ನೇಕಾರರ ಸಂಘದ ಅಧ್ಯಕ್ಷ ಸೋಮಶೇಖರ್, ತೊಗಟವೀರ ಕ್ಷತ್ರಿಯ ಸಂಘದ ಅಧ್ಯಕ್ಷ ಅಶ್ವತ್ಥನಾರಾಯಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಸ್ವಸ್ಥಗೊಂಡಿದ್ದ ಬರಗೂರು ಚೇತರಿಕೆ

ಬರಗೂರು ರಾಮಚಂದ್ರಪ್ಪ

ಹರಿಹರ (ದಾವಣಗೆರೆ ಜಿಲ್ಲೆ): ಬಂಡಾಯ ಸಾಹಿತ್ಯ ಸಂಘಟನೆ ಭಾನುವಾರ ನಗರದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕಾರ್ಯಕ್ರಮದ ನಂತರ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಅಸ್ವಸ್ಥಗೊಂಡು ಕುಸಿದು ಬಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದ್ದು, ಚೇತರಿಸಿಕೊಂಡಿದ್ದಾರೆ.

ಯಾವುದೇ ಗಂಭೀರ ಆರೋಗ್ಯ ಸಮಸ್ಯೆಗಳಿಲ್ಲ ಎಂದು ವೈದ್ಯರು ತಿಳಿಸಿದ್ದರಿಂದ ಅವರು ಬಳಿಕ ಬೆಂಗಳೂರಿಗೆ ತೆರಳಿದರು.

'ಮಧುಮೇಹ, ರಕ್ತದೊತ್ತಡದ ಪರೀಕ್ಷೆ ನಡೆಸಿದ ವೈದ್ಯರು ಯಾವುದೇ ಸಮಸ್ಯೆ ಇಲ್ಲ ಎಂದಿದ್ದಾರೆ. ಇದೇ ಮೊದಲ ಬಾರಿಗೆ ಹೀಗಾಗಿದೆ. ನಿರಂತರ ಪ್ರಯಾಣದ ಆಯಾಸದಿಂದಾಗಿ ಆರೋಗ್ಯದಲ್ಲಿ ಏರುಪೇರಾಗಿರುವ ಸಾಧ್ಯತೆ ಇದೆ.' ಎಂದು ಬರಗೂರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.



ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಹೇಗೆ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1 ನಾನು ಸರ್ಕಾರಿ ಮಹಾವಿದ್ಯಾಲಯದಲ್ಲಿ ಐಚ್ಛಿಕ ವಿಷಯವಾಗಿ ಗ್ರಾಮೀಣ ಅಭಿವೃದ್ಧಿ ವಿಷಯ ತೆಗೆದುಕೊಂಡು, ಪ್ರಥಮ ಸ್ಥಾನದೊಂದಿಗೆ ಉತ್ತೀರ್ಣನಾಗಿದ್ದೇನೆ. ಈಗ, ಪಿಡಿಒ ಹುದ್ದೆಗಾಗಿ ತಯಾರಿ ನಡೆಸಬೇಕಿದೆ. ಮುಂದೆ ಏನು ಮಾಡಬೇಕು. ಸಲಹೆ ನೀಡಿ.

ಬಸವರಾಜ, ಊರು ತಿಳಿಸಿಲ್ಲ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಬೇಕೆನ್ನುವ ನಿಮಗೆ ಅಭಿನಂದನೆಗಳು. ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಪಂಚಾಯತ್ ಮಟ್ಟದಲ್ಲಿನ ಸರ್ವತೋಮುಖ ಅಭಿವೃದ್ಧಿ ಇತ್ಯಾದಿ ಪ್ರಮುಖ ಜವಾಬ್ದಾರಿಗಳಿರುವ ಈ ಹುದ್ದೆಯನ್ನು ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಬೇಕು. ಇದಾದ ನಂತರ, ದಾಖಲಾತಿಗಳ ಪರಿಶೀಲನೆಯಾಗಿ ಅಂತಿಮ ಆಯ್ಕೆ ಪಟ್ಟಿಯನ್ನು ಮಾಡಲಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯ ಮೊದಲ ಪ್ರಶ್ನೆಪತ್ರಿಕೆಯಲ್ಲಿ ಸಾಮಾನ್ಯ ಜ್ಞಾನ, ಸಾಮಾನ್ಯ ಕನ್ನಡ ಮತ್ತು ಸಾಮಾನ್ಯ ಇಂಗ್ಲಿಷ್ ಇರುತ್ತದೆ. ಎರಡನೇ ಪತ್ರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಪಟ್ಟಿರುತ್ತದೆ. ಈ ಪರೀಕ್ಷೆಯನ್ನು ಎಲ್ಲಾ ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ ನಡೆಸಲಾಗುತ್ತದೆ.ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸ್ವಯಂ-ಅಧ್ಯಯನದಿಂದ ತಯಾರಾಗುವುದೇ ಅಥವಾ ಕೋಚಿಂಗ್ ಸೆಂಟರ್ ಸೇರಬೇಕೇ ಎನ್ನುವ ನಿರ್ಧಾರ ನಿಮ್ಮದು. ಆದರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸನ್ನು ಗಳಿಸಲು ಯೋಜನಾ ಶಕ್ತಿ, ಏಕಾಗ್ರತೆ, ಪರಿಶ್ರಮ, ಸಮಯದ ನಿರ್ವಹಣೆ, ನಿರಂತರ ಅಭ್ಯಾಸ, ಪರಿಣಾಮಕಾರಿ ಓದುವಿಕೆ ಮತ್ತು ಮಾರ್ಗದರ್ಶನವಿರಬೇಕು. ಹಾಗಾಗಿ, ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk

2. ನಾನು ಎಂಎ (ಇಂಗ್ಲಿಷ್) ಮುಗಿಸಿದ್ದೇನೆ. ರಾಷ್ಟ್ರೀಯ ಅರ್ಹತಾ ಪರೀಕ್ಷೆಗೆ (ನೆಟ್) ತಯಾರಿ ನಡೆಸುತ್ತಿದ್ದೇನೆ. ಬಿ.ಇಡಿ ತೆಗೆದುಕೊಂಡಿಲ್ಲ. ಶಿಕ್ಷಕ ವೃತ್ತಿಯಲ್ಲದೆ, ಬೇರೆ ಯಾವ ವೃತ್ತಿಯ ಆಯ್ಕೆಗಳಿವೆಯೆಂದು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಶಿಕ್ಷಣದ ನಂತರದ ಬದುಕಿನ ಕನಸುಗಳೇನು ಎನ್ನುವುದರ ಬಗ್ಗೆ ಸ್ಪಷ್ಟತೆಯಿರಬೇಕು. ಆ ಕನಸುಗಳನ್ನು ನನಸಾಗಿಸಲು ಸೂಕ್ತವಾದ ವೃತ್ತಿಯ ಬಗ್ಗೆ ಮೊದಲೇ ನಿಶ್ಚಯಿಸಿರಬೇಕು. ಏಕೆಂದರೆ, ಯಶಸ್ಸಿನ ಹಾದಿಯಲ್ಲಿ ವೈಯಕ್ತಿಕ ಬದುಕಿನ ಕನಸುಗಳೇ ಪ್ರೇರಣೆ. ಎಂಎ (ಇಂಗ್ಲಿಷ್) ನಂತರ, ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಸೇರಿದಂತೆ ಮಾಧ್ಯಮಗಳು, ಪ್ರಕಾಶನ ಸಂಸ್ಥೆಗಳು, ಚಿತ್ರೋದ್ಯಮ ಮತ್ತು ಮನರಂಜನಾ ಕ್ಷೇತ್ರ, ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಇ-ಕಾಮರ್ಸ್, ಕೋಚಿಂಗ್ ತರಗತಿಗಳು, ಭಾಷಾಂತರ, ಕಂಟೆಂಟ್ ಡೆವಲಪ್‌ಮೆಂಟ್ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ವೃತ್ತಿಯ ಅವಕಾಶಗಳಿವೆ. ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಕೌಶಲಾಭಿವೃದ್ಧಿಗೆ ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಮಾಡುವುದು ಸೂಕ್ತ. ವೃತ್ತಿಯೋಜನೆ ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/@ExpertCareerConsultantAuthor

3. ನಾನು ಬಿಎ ಪ್ರಥಮ ಸೆಮಿಸ್ಟರ್ ಓದುತ್ತಿದ್ದೇನೆ. ಯುಪಿಎಸ್‌ಸಿ ಪರೀಕ್ಷೆ ಬರೆಯಬೇಕೆಂಬ ಆಸೆಯಿದೆ. ಇದಕ್ಕೆ ಯಾವ ರೀತಿ ತಯಾರಿ ನಡೆಸಬೇಕು? ನಾನು ಕನ್ನಡ ಮಾಧ್ಯಮದ ವಿದ್ಯಾರ್ಥಿ; ಇಂಗ್ಲಿಷ್ ಭಾಷೆ ಮಾತನಾಡಲು ಹೇಗೆ ಪ್ರಯತ್ನಿಸಬೇಕು?

ಸುನೀಲ್ ಮೇಲ್ಮಟ್ಟಿ, ಗೋಕಾಕ್.

ಯುಪಿಎಸ್‌ಸಿ ಆಯೋಜಿಸುವ ಪರೀಕ್ಷೆಯ ಪ್ರಕ್ರಿಯೆಯಲ್ಲಿ ಮೂರು ಹಂತಗಳಿವೆ.

- ಪೂರ್ವಭಾವಿ (ಬಹು ಆಯ್ಕೆ ಮಾದರಿ- ಇಂಗ್ಲಿಷ್/ಹಿಂದಿ).
- ಮುಖ್ಯ ಪರೀಕ್ಷೆ (ಕನ್ನಡದಲ್ಲಿ ಬರೆಯಬಹುದು).
- ಸಂದರ್ಶನ/ವ್ಯಕ್ತಿತ್ವ ಪರೀಕ್ಷೆ (ಕನ್ನಡದಲ್ಲಿ ನೀಡಬಹುದು).ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ ಖುದ್ದಾಗಿ ಅಥವಾ ಕೋಚಿಂಗ್ ಮುಖಾಂತರ ತಯಾರಿ ಮಾಡಬಹುದು. ಯೂಟ್ಯೂಬ್‌ನಲ್ಲಿ ತಯಾರಿ ಕುರಿತ ಮಾಹಿತಿಯುಳ್ಳ ಉಪಯುಕ್ತ ವಿಡಿಯೊಗಳನ್ನು ವೀಕ್ಷಿಸಿ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಸಮಗ್ರ ಮತ್ತು ಆಳವಾದ ಓದುವಿಕೆ, ಏಕಾಗ್ರತೆಯ ಜೊತೆಗೆ ಸಾಕಷ್ಟು ಪರಿಶ್ರಮ, ದೃಢತೆ ಅತ್ಯಗತ್ಯ. ಇಂಗ್ಲಿಷ್ ಕಲಿಕೆ ಕುರಿತ ಉಪಯುಕ್ತ ಮಾಹಿತಿ ಕಳೆದ ವರ್ಷದ ಅಕ್ಟೋಬರ್ 3ನೇ ತಾರೀಖಿನ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ.

4. ನಾನು ಬಿಎ ಅಂತಿಮ ವರ್ಷದ ವಿದ್ಯಾರ್ಥಿ. ಎಂಎ (ಅಪರಾಧ ಶಾಸ್ತ್ರ ಮತ್ತು ವಿಧಿ ವಿಜ್ಞಾನ) ಮಾಡಬೇಕೆಂದು ನಿರ್ಧರಿಸಿದ್ದೇನೆ. ಎಂಎ ಮುಗಿದ ನಂತರ ನನಗೆ ಯಾವ ಆಯ್ಕೆಗಳಿರುತ್ತವೆ?

ಹೆಸರು, ಊರು ತಿಳಿಸಿಲ್ಲ.

ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ವಿಧಿ ವಿಜ್ಞಾನ ಲ್ಯಾಬೋರೇಟರಿಗಳು, ಸಿಐಡಿ, ಸಿಬಿಐ, ಐಬಿ, ಪೊಲೀಸ್ ಇಲಾಖೆ, ನಾರ್ಕೋಟಿಕ್ಸ್ ಇಲಾಖೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು.

ಇನ್ನಷ್ಟು ಪ್ರಶ್ನೆಗಳಿಗೆ https://www.prajavani.net/education-career ಓದಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ, ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಹಾಗೂ ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಜೆಎನ್ ಟಾಟಾ ಎಂಡೋಮೆಂಟ್ ಲೋನ್ ಸ್ಕಾಲರ್‌ಶಿಪ್ 2023-24

ವಿವರ: ವಿದೇಶದಲ್ಲಿ ಉನ್ನತ ಅಧ್ಯಯನ ಮುಂದುವರಿಸಲು ಬಯಸುವ ಭಾರತೀಯ ವಿದ್ಯಾರ್ಥಿಗಳಿಂದ ಜೆಎನ್ ಟಾಟಾ ಎಂಡೊಮೆಂಟ್, ಲೋನ್ ಸ್ಕಾಲರ್‌ಶಿಪ್‌ಗಾಗಿ ಅರ್ಜಿ ಆಹ್ವಾನಿಸಿದೆ. ಈ ಲೋನ್ ಸ್ಕಾಲರ್‌ಶಿಪ್‌ಗೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಭಾಗಶಃ 'ಟ್ರಾವೆಲ್ ಗ್ರಾಂಟ್' ಮತ್ತು 'ಗಿಫ್ಟ್ ಅವಾರ್ಡ್'ಗೆ ಶಿಫಾರಸು ಮಾಡಬಹುದಾಗಿದ್ದು, ಇದು ಅವರ ಸಾಗರೋತ್ತರ ಅಧ್ಯಯನದಲ್ಲಿನ ಶೈಕ್ಷಣಿಕ ಕಾರ್ಯಕ್ಷಮತೆಗೆ ಸಂಬಂಧಿಸಿರುತ್ತದೆ.

ಅರ್ಹತೆ : ಕನಿಷ್ಠ ಒಂದು ಪದವಿಯನ್ನು ಪೂರ್ಣಗೊಳಿಸಿದ ಭಾರತೀಯ ಪ್ರಜೆಗಳಿಗೆ ಅಥವಾ ಭಾರತದಲ್ಲಿನ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ಕಾಲೇಜು/ಸಂಸ್ಥೆಯಲ್ಲಿ ಯಾವುದೇ ಪದವಿ ಕೋರ್ಸ್‌ನ ಅಂತಿಮ ವರ್ಷದಲ್ಲಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು ವಿದೇಶದಲ್ಲಿ ಸ್ನಾತಕೋತ್ತರ/ ಡಾಕ್ಟರೇಟ್/ಪೋಸ್ಟ್ ಡಾಕ್ಟರಲ್ ಅಧ್ಯಯನಗಳನ್ನು ಮುಂದುವರಿಸಲು ಸಿದ್ಧರಿರಬೇಕು.

2023ರ ಕೊನೆಯಲ್ಲಿ ಓದುತ್ತಿರುವ ಮತ್ತು ಸಾಗರೋತ್ತರ ಅಧ್ಯಯನದ ಎರಡನೇ ವರ್ಷಕ್ಕೆ (2024) ಪ್ರವೇಶಿಸುತ್ತಿರುವ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಕೋರ್ಸ್‌ನ ಕನಿಷ್ಠ ಅವಧಿಯು 2 ವರ್ಷಗಳಾಗಿದ್ದರೆ ಮತ್ತು ಲೋನ್ ಸ್ಕಾಲರ್‌ಶಿಪ್ ನೀಡುವ ವೇಳೆ ಕೋರ್ಸ್ ಪೂರ್ಣಗೊಳಿಸಲು ಕನಿಷ್ಠ ಒಂದು ಶೈಕ್ಷಣಿಕ ವರ್ಷ ಬಾಕಿ ಇದ್ದವರಿಗೆ ಮಾತ್ರ ಇದು ಅನ್ವಯಿಸುತ್ತದೆ.

ವಿದ್ಯಾರ್ಥಿಗಳು ತಮ್ಮ ಪದವಿ ಅಥವಾ ಸ್ನಾತಕೋತ್ತರ ಅಧ್ಯಯನದಲ್ಲಿ ಸರಾಸರಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು.

ಅಭ್ಯರ್ಥಿಗಳು ಜೂನ್ 30, 2023ಕ್ಕೆ 45 ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿರಬಾರದು.

ಆರ್ಥಿಕ ಸಹಾಯ: ₹ 10 ಲಕ್ಷದವರೆಗೆ

ಅರ್ಜಿ ಸಲ್ಲಿಕೆಗೆ ಕೊನೆ ದಿನ: 07-03-2023

ಅರ್ಜಿ ಸಲ್ಲಿಸುವ ವಿಧಾನ : ಆನ್‌ಲೈನ್

ಮಾಹಿತಿಗೆ: Short Url: www.b4s.in/praja/JNT6

ಮಾಹಿತಿ ಕೃಪೆ: www.Buddy4Study.com

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1) ಯಾವ ಮಳೆಯನ್ನು ಆಮ್ಲಮಳೆ ಎನ್ನುವರು?

ಉತ್ತರ:- ಮಳೆ ನೀರಿನ ಮೌಲ್ಯ PH 5.6ಕ್ಕಿಂತ ಕಡಿಮೆಯಿದ್ದಾಗ ಅದನ್ನು ಆಮ್ಲಮಳೆ ಎನ್ನುವರು.

2) ಮಾನವನ ದೇಹವು ಯಾವ PH ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ?

ಉತ್ತರ:- ಮಾನವನ ದೇಹವು 7.0 ಯಿಂದ 7.8 PH ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ

3) ಮೆದುಳಿನ ಬಳ್ಳಿಯನ್ನು ಯಾವುದು ರಕ್ಷಿಸುತ್ತದೆ?

ಉತ್ತರ:- ಕಶೇರು ಸ್ತಂಭ ಅಥವಾ ಬೆನ್ನು ಮೂಳೆಯು ಮಿದುಳಿನ ಬಳ್ಳಿಯನ್ನು ರಕ್ಷಿಸುತ್ತದೆ.

4) ದ್ಯುತಿಸಂಶ್ಲೇಷಣೆಯ ಪ್ರಕ್ರಿಯೆಯಲ್ಲಿ ಯಾವೆಲ್ಲಾ ಘಟನೆಗಳು ಜರುಗುತ್ತವೆ?

ಉತ್ತರ:- ದ್ಯುತಿಸಂಶ್ಲೇಷಣೆಯ ಪ್ರಕ್ರಿಯೆ ನಡೆಯುವಾಗ ಕೆಳಗಿನ ಘಟನೆಗಳು ಜರುಗುತ್ತವೆ.

(i) ಕ್ಲೋರೋಫಿಲ್‌ನಿಂದ ಬೆಳಕಿನ ಶಕ್ತಿ ಹೀರುವಿಕೆ.

(ii) ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಯಾಗುವುದು ಮತ್ತು ನೀರಿನ ಅಣುಗಳು ಹೈಡ್ರೋಜನ್ ಮತ್ತು ಆಕ್ಸಿಜನ್ ಆಗಿ ವಿಭಜಿಸಲ್ಪಡುವುದು.

(iii) ಕಾರ್ಬನ್ ಡೈಆಕ್ಸೈಡ್ ಕಾರ್ಬೋಹೈಡ್ರೇಟ್ ಆಗಿ ಪರಿವರ್ತಿಸಲ್ಪಡುವುದು. ಈ ಹಂತಗಳು ಒಂದಾದ ನಂತರ ಒಂದರಂತೆ ತಕ್ಷಣವೇ ಜರುಗುವುದಿಲ್ಲ

5) ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಯಾವುವು?

ಉತ್ತರ: ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು

(i) ಭೌತ ಸ್ಥಿತಿ : ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ. (ii) ಕರಗುವ ಮತ್ತು ಕುದಿಬಿಂದುಗಳು : ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) ವಿಲೀನತೆ : ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) **ವಿದ್ಯುದ್ವಾಹಕತೆ :** ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ. ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ. ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್‌ಅನ್ನು ಹರಿಯಲು ಬಿಡುತ್ತವೆ.

6) ಮನುಷ್ಯರಲ್ಲಿ ವಿಸರ್ಜನೆ ಕುರಿತು ಬರೆಯಿರಿ

ಉತ್ತರ:- ಮನುಷ್ಯರ ವಿಸರ್ಜನಾಂಗವ್ಯೂಹವು (ಚಿತ್ರ ನೋಡಿ) ಒಂದು ಜೊತೆ ಮೂತ್ರಪಿಂಡಗಳು, ಒಂದು ಜೊತೆ ಮೂತ್ರನಾಳಗಳು, ಒಂದು ಮೂತ್ರಕೋಶ ಮತ್ತು ಒಂದು ಮೂತ್ರದ್ವಾರವನ್ನು ಒಳಗೊಂಡಿದೆ. ಮೂತ್ರಪಿಂಡಗಳು ಉದರಭಾಗದಲ್ಲಿ, ಬೆನ್ನುಮೂಳೆಯ ಎರಡೂ ಪಾರ್ಶ್ವಗಳಲ್ಲಿ ಒಂದೊಂದರಂತೆ ಇವೆ. ಮೂತ್ರವು ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾಗಿ ಮೂತ್ರನಾಳಗಳ ಮೂಲಕ ಹರಿದು ಮೂತ್ರದ್ವಾರದ ಮೂಲಕ ವಿಸರ್ಜನೆಯಾಗುವವರೆಗೂ ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ. ಮಾನವರಲ್ಲಿ ಮೂತ್ರ ಉತ್ಪತ್ತಿಯಾಗುವ ರೀತಿಯು ವಿಶಿಷ್ಟವಾಗಿದೆ. ರಕ್ತದಿಂದ ತ್ಯಾಜ್ಯ ವಸ್ತುಗಳನ್ನು ಸೋಸಿ ಹೊರತೆಗೆಯುವುದು ಮೂತ್ರ ತಯಾರಿಕೆಯ ಉದ್ದೇಶವಾಗಿದೆ. ಶ್ವಾಸಕೋಶಗಳಲ್ಲಿ ರಕ್ತದಿಂದ ಕಾರ್ಬನ್ ಡೈಆಕ್ಸೈಡ್ ಅನ್ನು ತೆಗೆದುಹಾಕುವಂತೆ ಮೂತ್ರಪಿಂಡಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥ ನೈಟ್ರೋಜನ್‌ಯುಕ್ತ ತ್ಯಾಜ್ಯಗಳನ್ನು ತೆಗೆದು ಹಾಕಲಾಗುತ್ತದೆ. ಮೂತ್ರಪಿಂಡಗಳಲ್ಲಿರುವ ಮೂಲಭೂತ ಸೋಸುವ ಅತ್ಯಂತ ತೆಳುವಾದ ಭಿತ್ತಿ ಹೊಂದಿರುವ ಲೋಮನಾಳಗಳ ಗುಂಪು. ಮೂತ್ರಪಿಂಡದಲ್ಲಿರುವ ಪ್ರತಿಯೊಂದು ಲೋಮನಾಳಗಳ ಗುಂಪು ಸೋಸಲ್ಪಟ್ಟ ದ್ರವವನ್ನು ಸಂಗ್ರಹಿಸುವ ಬಟ್ಟಲಿನಾಕಾರದ ತುದಿ ಇರುವ ಒಂದು ನಾಳದ ಸಂಪರ್ಕದಲ್ಲಿ ಇರುತ್ತದೆ ಪ್ರತಿಯೊಂದು ಮೂತ್ರಪಿಂಡವು ನೆಫ್ರಾನ್‌ಗಳೆಂದು ಕರೆಯಲ್ಪಡುವ ಒತ್ತೊತ್ತಾಗಿ ಜೋಡಿಸಲ್ಪಟ್ಟ ಈ ಸೋಸುವ ಘಟಕಗಳನ್ನು ಭಾರೀ ಸಂಖ್ಯೆಯಲ್ಲಿ ಹೊಂದಿದೆ.



ಮಾನವನ ಮೂತ್ರ ವಿಸರ್ಜನಾಂಗ

ಪ್ರಾರಂಭಿಕ ಹಂತದ ಸೋಸುವಿಕೆಯಲ್ಲಿ ಶೋಧಿಸಲ್ಪಟ್ಟ ಗ್ಲುಕೋಸ್, ಅಮೈನೋ ಆಮ್ಲ, ಲವಣಗಳು ಮತ್ತು ಹೆಚ್ಚಿನ ಪ್ರಮಾಣದ ನೀರಿನಂಥ ಆಯ್ದ ಕೆಲವು ವಸ್ತುಗಳು ಮೂತ್ರವು ನಾಳದಲ್ಲಿ ಮುಂದೆ ಹರಿದಂತೆ ಪುನಃ ಹೀರಲ್ಪಡುತ್ತವೆ. ಮರುಹೀರಿಕೆಯಾಗುವ ನೀರಿನ ಪ್ರಮಾಣವು ದೇಹದಲ್ಲಿ ನೀರು ಎಷ್ಟು ಅಧಿಕವಾಗಿದೆ ಮತ್ತು ಎಷ್ಟು ಪ್ರಮಾಣದ ಕರಗಿದ ತ್ಯಾಜ್ಯಗಳನ್ನು ವಿಸರ್ಜಿಸಬೇಕಾಗುತ್ತದೆ ಎಂಬುದನ್ನು ಆಧರಿಸಿದೆ. ಪ್ರತಿಯೊಂದು ಮೂತ್ರಪಿಂಡದಲ್ಲಿ ಉತ್ಪತ್ತಿಯಾದ ಮೂತ್ರವು ಅಂತಿಮವಾಗಿ ಮೂತ್ರಪಿಂಡಗಳನ್ನು ಮೂತ್ರಕೋಶಕ್ಕೆ ಸಂಪರ್ಕಿಸುವ ಮೂತ್ರನಾಳ ಎಂಬ ಉದ್ದನೆಯ ನಾಳವನ್ನು ಪ್ರವೇಶಿಸುತ್ತದೆ. ಹಿಗ್ಗಿದ ಮೂತ್ರಕೋಶದ ಒತ್ತಡವು ಮೂತ್ರವನ್ನು ಮೂತ್ರದ್ವಾರದ ಮೂಲಕ ಹೊರಹಾಕಲು ಪ್ರೇರೇಪಿಸುವವರೆಗೂ ಮೂತ್ರವು ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ. ಮೂತ್ರಕೋಶವು ಸ್ನಾಯುವಿನಿಂದಾದ ಅಂಗವಾಗಿರುವುದರಿಂದ ಇದು ನರವ್ಯೂಹದ ನಿಯಂತ್ರಣಕ್ಕೆ ಒಳಪಟ್ಟಿದೆ. ಇದರ ಪರಿಣಾಮವಾಗಿ ನಾವು ಮೂತ್ರವಿಸರ್ಜಿಸಬೇಕೆಂಬ ಪ್ರಚೋದನೆಯನ್ನು ಸಾಮಾನ್ಯವಾಗಿ ನಿಯಂತ್ರಿಸಬಹುದಾಗಿದೆ.

ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿ ವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್‌ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪಿಯುಸಿ ಪರೀಕ್ಷೆ ದಿಕ್ಸೂಚಿ

ಭೌತವಿಜ್ಞಾನ

51) ಎಲೆಕ್ಟ್ರಾನ್‌ಗಳ ತರಂಗ ಸ್ವಭಾವ ಸಂಬಂಧಿಸಿದಂತೆ ಡೇವಿಸನ್ ಹಾಗೂ ಜರ್ಮರ್ ಪ್ರಯೋಗದ ಕುರಿತು ಬರೆಯಿರಿ.

ಉತ್ತರ:- ಎಲೆಕ್ಟ್ರಾನ್‌ಗಳ ತರಂಗ ಸ್ವಭಾವವನ್ನು ಪ್ರಪ್ರಥಮವಾಗಿ ಸಿ. ಜೆ. ಡೇವಿಸನ್ ಹಾಗೂ ಎಲ್. ಎಚ್. ಜರ್ಮರ್‌ರವರು 1927ರಲ್ಲಿ ಮತ್ತು ಸ್ವತಂತ್ರವಾಗಿ ಜಿ. ಪಿ. ಥಾಮ್ಸನ್‌ರವರು 1928ರಲ್ಲಿ ಪ್ರಯೋಗಿಕವಾಗಿ ಪರಿಶೀಲಿಸಿದರು. ಥಾಮ್ಸನ್‌ರವರು ಸ್ಫಟಿಕದಿಂದ ಚದುರಿದ ಎಲೆಕ್ಟ್ರಾನ್ ಗುಚ್ಛದ ವಿವರ್ತನೆ ಪರಿಣಾಮವನ್ನು ವೀಕ್ಷಿಸಿದರು.

ಡೇವಿಸನ್ ಹಾಗೂ ಜರ್ಮರ್ ಬಳಸಿದ ಪ್ರಯೋಗಿಕ ವ್ಯವಸ್ಥೆಯನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ.



ಇದು ಬೇರಿಯಂ ಆಕ್ಸೈಡ್ ಲೇಪಿತ ಹಾಗೂ ಕಡಿಮೆ ವಿದ್ಯುತ್ ವಿಭವ ಪೂರೈಕೆಯಿಂದ (L.T ಅಥವಾ ಬ್ಯಾಟರಿ) ಬಿಸಿಮಾಡಿದ ಟಂಗ್ ಸ್ಟನ್ ತಂತಿ F ಒಳಗೊಂಡಿರುವ ಎಲೆಕ್ಟ್ರಾನ್‌ಗಳನ್ನು ಹೊಂದಿದೆ. ಯಾವುದೇ ಅಧಿಕ ವಿಭವ ಸಾಮರ್ಥ್ಯದ ವಿದ್ಯುತ್ ಸಂಗ್ರಹ ಸಾಧನದಿಂದ (H.T ಅಥವಾ ಬ್ಯಾಟರಿ) ಸೂಕ್ತ ವಿಭವವನ್ನು ಅಳವಡಿಸುವ ಮೂಲಕ ತಂತಿಗಳಿಂದ ಉತ್ಸರ್ಜಿತ ಎಲೆಕ್ಟ್ರಾನ್‌ಗಳನ್ನು ಅಪೇಕ್ಷಿತ ಜವಕ್ಕೆ ವೇಗವರ್ಧಿಸಲಾಯಿತು. ಅಕ್ಷದ ಉದ್ದಕ್ಕೂ ರಂಧ್ರಗಳಿರುವ ಸಿಲಿಂಡರ್‌ನ ಮೂಲಕ ಹಾದು ಹೋಗುವಂತೆ ಮಾಡಿ ಉತ್ತಮವಾಗಿ ಸಮಾಂತರೀಣಿಸಿದ (Collimated) ಕಿರಣಗುಚ್ಛವನ್ನು ಉತ್ಪಾದಿಸಲಾಗಿದೆ. ಈ ಕಿರಣ ಗುಚ್ಛವನ್ನು ನಿಕ್ಕಲ್ ಸ್ಫಟಿಕದ ಮೇಲೆ ಬೀಳುವಂತೆ ಮಾಡಲಾಗಿದೆ. ಈ ಎಲೆಕ್ಟ್ರಾನ್‌ಗಳು ಸ್ಫಟಿಕದ ಪರಮಾಣುಗಳಿಂದ ಎಲ್ಲಾ ದಿಕ್ಕಿನಲ್ಲೂ ಚದುರಿವೆ.

ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಚದುರಿದ ಎಲೆಕ್ಟ್ರಾನ್ ಕಿರಣ ಗುಚ್ಛದ ತೀವ್ರತೆಯನ್ನು ಎಲೆಕ್ಟ್ರಾನ್ ಶೋಧಕ (ಸಂಗ್ರಾಹಕ)ದ ಮೂಲಕ ಅಳೆಯಲಾಗುತ್ತದೆ. ಶೋಧಕವನ್ನು ವೃತ್ತಾಕಾರದ ಮಾಪಕ ಪಟ್ಟಿಯ ಮೂಲಕ ಸರಿಸುವಂತೆ ಮಾಡಿ ಅದನ್ನು ಸೂಕ್ಷ್ಮವಾದ ಗ್ಯಾಲ್ವನೋ ಮಾಪಕಕ್ಕೆ ಸಂಪರ್ಕಿಸಲಾಗಿದೆ ಅದು ವಿದ್ಯುತ್ ಪ್ರವಾಹವನ್ನು ಪ್ರವೇಶಿಸುವ ಎಲೆಕ್ಟ್ರಾನ್ ಕಿರಣ ಗುಚ್ಛದ ತೀವ್ರತೆಗೆ ನೇರ ಅನುಪಾತದಲ್ಲಿರುತ್ತದೆ. ಈ ಉಪಕರಣವನ್ನು ಒಂದು ನಿರ್ವಾತ ಕೊಠಡಿಯಲ್ಲಿ ಅಳವಡಿಸಲಾಗಿದೆ. ಶೋಧಕವನ್ನು ವೃತ್ತಾಕಾರದ ಮಾಪಕ ಪಟ್ಟಿಯ ವಿವಿಧ ಸ್ಥಾನಗಳಲ್ಲಿ ಚಲಿಸುವಂತೆ ಮಾಡುವ ಮೂಲಕ ಚದುರುವಿಕೆಯ ಕೋನ 'θ' ಚದುರಿದ ಎಲೆ ಕಿರಣಗುಚ್ಛದ ತೀವ್ರತೆಯನ್ನು ಅಳೆಯಲಾಗಿದೆ ('θ' ಪತನಗೊಂಡ ಹಾಗೂ ಚದುರಿದ ಎಲೆಕ್ಟ್ರಾನ್ ಕಿರಣಗುಚ್ಛದ ನಡುವಿನ ಕೋನ) ವಿವಿಧ ವೇಗವರ್ಧಕ ವಿಭವಕ್ಕೆ ಚದುರುವಿಕೆಯ ಕೋನ 'θ' ಹೊಂದಿರುವ ಚದುರಿದ ಎಲೆಕ್ಟ್ರಾನ್‌ಗಳ ತೀವ್ರತೆಯ (I) ಬದಲಾವಣೆಯನ್ನು ಪಡೆಯಬಹುದಾಗಿದೆ.

ವೇಗ ವರ್ಧಕ ವಿಭವವನ್ನು 44V ನಿಂದ 68V ಗೆ ಬದಲಾಯಿಸಿ ಪ್ರಯೋಗವನ್ನು ನಡೆಸಲಾಯಿತು. ಚದುರುವಿಕೆಯ ಕೋನ 'θ' $= 50^0$ ಯಲ್ಲಿ 54Vನ ವಿಭವದಲ್ಲಿ ಚದುರಿದ ಎಲೆಕ್ಟ್ರಾನ್‌ಗಳ ತೀವ್ರತೆಗೆ (I) ಪ್ರಬಲವಾದ ಶೃಂಗವು ಕಾಣಿಸಿಕೊಂಡಿರುವುದನ್ನು ಗಮನಿಸಲಾಯಿತು. ಬಿಂದು ನಿರ್ದಿಷ್ಟ ದಿಕ್ಕಿನಲ್ಲಿ ಶೃಂಗದ ತೋರಿಕೆಯು ಸ್ಫಟಿಕ ಒಂದರ ವಿವಿಧ ಪದರಗಳಲ್ಲಿ ಕ್ರಮವಾಗಿ ಜೋಡಿಸಿದ ಪರಮಾಣುಗಳಿಂದ ಚದುರಿದ ಎಲೆಕ್ಟ್ರಾನ್‌ಗಳ ರಚನಾತ್ಮಕ ವ್ಯತೀಕರಣದ ಕಾರಣದಿಂದಾಗಿರುತ್ತದೆ. ಎಲೆಕ್ಟ್ರಾನ್ ವಿವರ್ತನೆಯಾಗುವುದರಿಂದ ದ್ರವ್ಯ ತರಂಗದ ತರಂಗಾತರವು 0.165 nm ಎಂದು ಕಂಡುಬಂದಿದೆ.

52) ಅಲ್ಫಾ-ಕಣದ ಚದರುವಿಕೆ ಮತ್ತು ರುದರ್‌ಫೋರ್ಡ್ ಪರಮಾಣುವಿನ ನ್ಯೂಕ್ಲಿಯಸ್ ಮಾದರಿ ಬಗ್ಗೆ ಬರೆಯಿರಿ.

ಉತ್ತರ:-1911ರಲ್ಲಿ ಅರ್ನೆಸ್ಟ್ ರುದರ್‌ಫೋರ್ಡ್ ಅವರ ಸಲಹೆಯ ಮೇರೆಗೆ ಎಚ್. ಗೀಗರ್ ಮತ್ತು E. ಮರ್ಸಡನ್ ಕೆಲವು ಪ್ರಯೋಗಗಳನ್ನು ಮಾಡಿದರು, ಅವರು ಮಾಡಿದ ಪ್ರಯೋಗಗಳೊಂದರಲ್ಲಿ, ಚಿತ್ರ 1ರಲ್ಲಿ ತೋರಿಸಿರುವಂತೆ $^{214}_{83}Bi$ ವಿಕಿರಣಶೀಲ ಆಕರದಿಂದ ಉತ್ಸರ್ಜಿತ 5.5 MeV ಶಕ್ತಿ ಹೊಂದಿರುವ $\propto$ ಕಣಗಳ ಕಿರಣವನ್ನು ಚಿನ್ನದ ಲೋಹದ ತೆಳು ಹಾಳೆಯ ಕಡೆಗೆ ಹಾಯಿಸಿದರು. ಚಿತ್ರ.2ರಲ್ಲಿ ಈ ಪ್ರಯೋಗದ ಸ್ಥೂಲ ರೂಪರೇಖೆಯನ್ನು ತೋರಿಸಿದೆ. $^{214}_{83}Bi$ ವಿಕಿರಣಪಟುತ್ವ ಆಕರದಿಂದ ಹೊರಸೂಸಲ್ಪಟ್ಟ $\propto$-ಕಣಗಳನ್ನು, ಸೀಸದ ಇಟ್ಟಿಗೆಯ ಮುಖಾಂತರ ಸಾಗಿಸಲ್ಪಡುವುದರಿಂದ, ಅವು ಸಮಾಂತರಣಿಸಿ, ಕಡಿಮೆ ಅಗಲದಲ್ಲಿ ಹೊರಸೂಸಲ್ಪಡುತ್ತವೆ. ಈ ಕಿರಣವನ್ನು 2.1 × 10–7 mದಷ್ಟು ತೆಳುವಾದ ಬಂಗಾರದ ಹಾಳೆಯ



ಚಿತ್ರ-1



ಚಿತ್ರ-2

ಮೇಲೆ ಬೀಳುವಂತೆ ಮಾಡಲಾಗುತ್ತದೆ. ಚದರಲ್ಪಟ್ಟ ಕಣಗಳನ್ನು, ತಿರುಗಿಸಬಲ್ಲ ಸತುವಿನ ಸಲ್ಫೈಡ್ ಪರದೆಯನ್ನು ಹೊಂದಿರುವ ಸೂಕ್ಷ್ಮದರ್ಶಕ ಶೋಧಕದಿಂದ ವೀಕ್ಷಿಸಲಾಗುತ್ತದೆ. ಚದರಲ್ಪಟ್ಟ ಆ ಕಣಗಳು ಪರದೆಯನ್ನು ತಾಕಿದಾಗ ಕ್ಷಣ ಹೊತ್ತು ಬೆಳಕನ್ನು ಉತ್ಪತ್ತಿಸುತ್ತವೆ ಅಥವಾ ಸ್ಫುರಣಗೊಳಿಸುತ್ತವೆ. ಆ ಕ್ಷಣ ಹೊತ್ತಿನ ಬೆಳಕನ್ನು ಸೂಕ್ಷ್ಮದರ್ಶಕ ದ ಮುಖಾಂತರ ವೀಕ್ಷಿಸಬಹುದು ಮತ್ತು ಚದರಲ್ಪಟ್ಟ ಕಣಗಳ ವಿತರಣೆಯ ಸಂಖ್ಯೆಯನ್ನು ಕೋನೀಯ ಚದರುವಿಕೆಯ ಫಲನವಾಗಿ ಅಭ್ಯಸಿಸಲು ಸಾಧ್ಯ.

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್‌ಕೋಡ್ ಸ್ಕ್ಯಾನ್ ಮಾಡಿ

CMR UNIVERSITY
Private University Established in Karnataka State by Act No. 45 of 2013
BENGALURU
Recognised by UGC

CELEBRATING 30 YEARS
CMRIT
CMR INSTITUTE OF TECHNOLOGY, BENGALURU.

MBA (2 years Full time Programme)
MBA PGCET CODE
HRBR Campus - B150
Bagalur Campus - B395
OMBR Campus - B149

Dual Specialization :
Finance, Marketing, HR, Digital Marketing, Supply Chain Management, and Business Analytics

CMRU EDGE
» Ranked 21st among Emerging B-Schools of India by The Week
» Experiential Learning enabled through industry partnership
» Multiple Centres of Excellence mentored by industry leaders
» Industry integrated contemporary curriculum
» 100% placement assistance



admissions@cmr.edu.in www.cmr.edu.in

CMR INSTITUTE OF TECHNOLOGY
Approved by AICTE | Accredited A++ By NAAC | Permanent affiliation by VTU | Recognized by Govt. of Karnataka

MBA (2 years Full time Programme)
Dual Specialization : Marketing & Finance
Marketing & HR | Finance & HR
» Acquire Sufficient theoretical knowledge and ability to apply these to solve practical problems in business & other organizations/institutions of importance.
» Expert Talks, Industry Visits, Student Clubs, & Certification courses
» Experience overall growth and development through initiatives such as MOOCs, Mentoring, TYL, Mini Projects and 3D Skilling.
» Internships with reputed companies.

Accredited A++ by NAAC
MBA PGCET CODE B151
www.cmrit.ac.in admission@cmrit.ac.in
ADMISSIONS HELPLINE 9342900666

ಸುಭಾಷಿತ

ಬದುಕಿ, ಇತರರನ್ನು ಬದುಕಲು ಬಿಡಿ ಎಂಬುದೇ ನಮ್ಮ ಜೀವನದ ಮಂತ್ರವಾಗಬೇಕು.

-ಮಹಾತ್ಮ ಗಾಂಧಿ

ಅದಾನಿ ಸಮೂಹದ ಮೇಲೆ ಆರೋಪ ಸೂಕ್ತ ತನಿಖೆ ಅನಿವಾರ್ಯ

ಅಮೆರಿಕದ ನ್ಯೂಯಾರ್ಕ್‌ನ ಸಂಶೋಧನಾ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್' ವರದಿಯೊಂದನ್ನು ಬಿಡುಗಡೆ ಮಾಡಿದ ನಂತರದಲ್ಲಿ ಭಾರತದ ಷೇರುಪೇಟೆಗಳಲ್ಲಿ ಬುಧವಾರ ಹಾಗೂ ಶುಕ್ರವಾರ ಕಂಡುಬಂದ ಕುಸಿತವು ಹಣಕಾಸು ಮಾರುಕಟ್ಟೆ ವ್ಯವಸ್ಥೆಯಲ್ಲಿನ ಅಪಾಯಗಳನ್ನು ಹಾಗೂ ಅವು ಬಾಹ್ಯ ಪ್ರಭಾವಗಳಿಗೆ ಹೇಗೆ ಬಾಗಬಲ್ಲವು ಎಂಬುದನ್ನು ತೋರಿಸಿದೆ. ಹಿಂಡನ್‌ಬರ್ಗ್ ರಿಸರ್ಚ್ ಪ್ರಕಟಿಸಿರುವ ವರದಿಯು ಅದಾನಿ ಸಮೂಹಕ್ಕೆ ಸೇರಿದ ಕಂಪನಿಗಳ ಬಗ್ಗೆ ಟೀಕೆಗಳನ್ನು, ಆರೋಪಗಳನ್ನು ಮಾಡಿದೆ. ಆದರೆ, ಈ ವರದಿ ಬಹಿರಂಗವಾದ ನಂತರದಲ್ಲಿ ಅದಾನಿ ಸಮೂಹಕ್ಕೆ ಸೇರಿದ ಕಂಪನಿಗಳ ಷೇರುಮೌಲ್ಯ ಮಾತ್ರವಲ್ಲದೆ, ದೇಶದ ಷೇರುಪೇಟೆಗಳಲ್ಲಿ ನೋಂದಾಯಿತವಾಗಿರುವ ಇತರ ಕೆಲವು ಕಂಪನಿಗಳ ಷೇರುಮೌಲ್ಯ ಕೂಡ ಕುಸಿದಿದೆ. ಎರಡು ದಿನಗಳ ವಹಿವಾಟಿನಲ್ಲಿ ಷೇರುಪೇಟೆಯು ಶೇಕಡ 3ರಷ್ಟು ಕುಸಿಯಿತು. ಷೇರುಪೇಟೆ ಸೂಚ್ಯಂಕಗಳು ಇಷ್ಟು ಕುಸಿದಿದ್ದಕ್ಕೆ ಒಂದು ಮುಖ್ಯ ಕಾರಣ ಈ ವರದಿ ಎಂಬುದು ಸ್ಪಷ್ಟ. ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯ ಭಾರಿ ಕುಸಿತ ಕಂಡಿತು. ಅಲ್ಲದೆ, ಅದಾನಿ ಸಮೂಹಕ್ಕೆ ಸಾಲ ನೀಡಿರುವ, ಸಮೂಹದಲ್ಲಿ ಹೂಡಿಕೆ ಮಾಡಿರುವ ಎಸ್‌ಬಿಐ ಹಾಗೂ ಎಲ್‌ಐಸಿಯಂತಹ ಕಂಪನಿಗಳ ಷೇರುಮೌಲ್ಯ ಕೂಡ ಗಮನಾರ್ಹ ಪ್ರಮಾಣದಲ್ಲಿ ಕುಸಿದಿದೆ.



ವಾಣಿಜ್ಯ ವಹಿವಾಟಿನ ಸಂದರ್ಭದಲ್ಲಿ ಪಾಲನೆ ಆಗುವ ನೀತಿ-ನಿಯಮಗಳು, ಕಾರ್ಪೊರೇಟ್ ಆಡಳಿತಕ್ಕೆ ಸಂಬಂಧಿಸಿದ ಪ್ರಶ್ನೆಯೂ ಈ ಪ್ರಕರಣದಲ್ಲಿದೆ

ವರದಿಯ ಪರಿಣಾಮವು ದೇಶದ ಷೇರುಪೇಟೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಬದಲಿಗೆ, ಅದಾನಿ ಸಮೂಹದ ಕಂಪನಿಗಳು ಸಕ್ರಿಯವಾಗಿರುವ ಇತರ ಹಲವು ವಲಯಗಳ ಮೇಲೆಯೂ ಇದು ಪರಿಣಾಮ ಉಂಟುಮಾಡಬಹುದು.

ಅದಾನಿ ಸಮೂಹವು 'ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರಬಲ್ಲ ಕೃತ್ಯಗಳಲ್ಲಿ ಲಜ್ಜೆಯಿಲ್ಲದೆ ತೊಡಗಿಸಿಕೊಂಡಿದೆ ಹಾಗೂ ಲೆಕ್ಕಪತ್ರ ವಂಚನೆ ಎಸಗಿದೆ' ಎಂದು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಆರೋಪ ಮಾಡಿದೆ. ಸಮೂಹವು ಶೆಲ್ ಕಂಪನಿಗಳ ಮೂಲಕ, ತೆರಿಗೆ ವಂಚಕರ ಪಾಲಿಗೆ ಸ್ವರ್ಗವೆಂದು ಕರೆಸಿಕೊಂಡಿರುವ ಸಾಗರದಾಚೆಯ ನಾಡುಗಳನ್ನು 'ಸರಿಯಲ್ಲದ ರೀತಿಯಲ್ಲಿ' ಬಳಸಿಕೊಂಡಿದೆ ಎಂದು ಕೂಡ ಅದು ಆರೋಪಿಸಿದೆ. ಅದಾನಿ ಸಮೂಹಕ್ಕೆ ಸೇರಿದ, ಷೇರುಪೇಟೆ ನೋಂದಾಯಿತ ಕಂಪನಿಗಳ ಸಾಲದ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಇದೆ. ಇದರಿಂದಾಗಿ ಇಡೀ ಸಮೂಹದ ಹಣಕಾಸಿನ ಸ್ಥಿತಿ ಅಪಾಯದಲ್ಲಿದೆ ಎಂದು ಕೂಡ ವರದಿಯಲ್ಲಿ ಹೇಳಲಾಗಿದೆ. 'ತಪ್ಪು ಮಾಹಿತಿ, ಆಧಾರವಿಲ್ಲದ ಹಾಗೂ ವಿಶ್ವಾಸಾರ್ಹವಲ್ಲದ ಮಾಹಿತಿಯನ್ನು ಕೆಟ್ಟ ಉದ್ದೇಶದಿಂದ ಒಗ್ಗೂಡಿಸಿ ಈ ವರದಿ ಸಿದ್ಧಪಡಿಸಲಾಗಿದೆ' ಎಂದು ಈ ವರದಿಯ ಬಗ್ಗೆ ಅದಾನಿ ಸಮೂಹ ಪ್ರತಿಕ್ರಿಯಿಸಿದೆ. ಸಮೂಹದ ಪ್ರಮುಖ ಕಂಪನಿಯಾಗಿರುವ ಅದಾನಿ ಎಂಟರ್‌ಪ್ರೈಸಸ್‌ನ ಷೇರು ಮಾರಾಟ ಪ್ರಕ್ರಿಯೆಯ (ಎಫ್‌ಪಿಒ) ಸಂದರ್ಭದಲ್ಲಿ ಬಿಡುಗಡೆ ಆಗಿರುವ ವರದಿಯು 'ಕೆಡುಕು ಉಂಟುಮಾಡುವ ಉದ್ದೇಶ ಹೊಂದಿದೆ' ಎಂದು ಕೂಡ ಸಮೂಹ ಹೇಳಿದೆ. ವರದಿ ಬಿಡುಗಡೆ ಆಗಿರುವ ಸಂದರ್ಭವು ಎಫ್‌ಪಿಒ ಪ್ರಕ್ರಿಯೆಗೆ ತೊಂದರೆ ಉಂಟುಮಾಡಬಹುದು. ಆದರೆ ಇದನ್ನೇ ಆಧಾರವಾಗಿ ಇರಿಸಿಕೊಂಡು ವರದಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗದು. ಅದಾನಿ ಸಮೂಹದ ಕುರಿತು ಕಳವಳಗಳು ವ್ಯಕ್ತವಾಗಿರುವುದು ಇದೇ ಮೊದಲೇನೂ ಅಲ್ಲ. ಹಣಕಾಸು ವಲಯದಲ್ಲಿ ಹೆಸರು ಸಂಪಾದಿಸಿರುವ ಕ್ರೆಡಿಟ್‌ಸೈಟ್ಸ್ ಸಂಸ್ಥೆಯು ಕೆಲವು ತಿಂಗಳ ಹಿಂದೆ, 'ಸಮೂಹದ ಸಾಲ ಹೆಚ್ಚಿನ ಮಟ್ಟದಲ್ಲಿದೆ' ಎಂದು ಹೇಳಿತ್ತು. ಖಾಸಗಿ ಮ್ಯೂಚುವಲ್ ಫಂಡ್ ಕಂಪನಿಗಳು ಅದಾನಿ ಸಮೂಹದ ಕಂಪನಿಗಳಲ್ಲಿ ಹೂಡಿಕೆ ಮಾಡಿಲ್ಲ. ಆದರೆ, ಸರ್ಕಾರದ ಪ್ರಭಾವಕ್ಕೆ ಒಳಪಟ್ಟಿರುವ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್‌ನ ಅಂಗಸಂಸ್ಥೆಗಳು ಅದಾನಿ ಸಮೂಹದ ಕಂಪನಿಗಳಲ್ಲಿ ದೊಡ್ಡ ಮಟ್ಟದಲ್ಲಿ ಹೂಡಿಕೆ ಮಾಡಿವೆ. ಸಮೂಹದ ಕಂಪನಿಗಳ ಷೇರುಮೌಲ್ಯ ಕುಸಿಯುತ್ತಿದ್ದ ಹೊತ್ತಿನಲ್ಲಿಯೂ ಎಲ್‌ಐಸಿ, ಸಮೂಹದ ಕಂಪನಿಯಲ್ಲಿ ಹೂಡಿಕೆ ಹೆಚ್ಚಿಸಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ಮಾಡಿರುವ ಆರೋಪಗಳ ಕುರಿತು ಗಂಭೀರ ತನಿಖೆ ಆಗಬೇಕು. ಆರೋಪಗಳಲ್ಲಿ ಹುರುಳಿದೆಯೇ ಎಂಬ ಬಗ್ಗೆ ಸ್ವತಂತ್ರವಾಗಿ ತನಿಖೆ ನಡೆಯಬೇಕು. ಅದಾನಿ ಸಮೂಹದ ಪ್ರವರ್ತಕರ ಕುಟುಂಬವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹತ್ತಿರವಾಗಿದೆ ಎಂಬ ವರದಿಗಳು ಇವೆ. ಸಮೂಹವು ಈಚಿನ ಕೆಲವು ವರ್ಷಗಳಲ್ಲಿ ಅಸಾಧಾರಣ ಬೆಳವಣಿಗೆ ಕಂಡಿರುವುದಕ್ಕೂ, ಈ ಸಂಬಂಧಕ್ಕೂ ನಂಟು ಇದೆ ಎಂಬ ಮಾತು ಕೂಡ ಇದೆ. ಆದರೆ ಇವೆಲ್ಲ ತನಿಖೆಯ ಮೇಲೆ ಪ್ರಭಾವ ಬೀರಬಾರದು. ಇದು ಹೂಡಿಕೆದಾರರ ಹಣ ಹಾಗೂ ಎಲ್‌ಐಸಿ ಮತ್ತು ಎಸ್‌ಬಿಐನಂತಹ ಕಂಪನಿಗಳಲ್ಲಿ ಇರುವ ಸಾರ್ವಜನಿಕರ ಹಣಕ್ಕೆ ಸಂಬಂಧಿಸಿದ ವಿಚಾರ. ಅದಾನಿ ಸಮೂಹಕ್ಕೆ ನೆರವು ಒದಗಿಸಲು ಈ ಸಂಸ್ಥೆಗಳನ್ನು ಬಳಸಿಕೊಳ್ಳಬಾರದು. ವಾಣಿಜ್ಯ ವಹಿವಾಟಿನ ಸಂದರ್ಭದಲ್ಲಿ ಪಾಲನೆಯಾಗುವ ನೀತಿ-ನಿಯಮಗಳು, ಕಾರ್ಪೊರೇಟ್ ನಿಯಮಗಳು ಹಾಗೂ ಕಾರ್ಪೊರೇಟ್ ಆಡಳಿತಕ್ಕೆ ಸಂಬಂಧಿಸಿದ ಪ್ರಶ್ನೆ ಕೂಡ ಈ ಪ್ರಕರಣದಲ್ಲಿದೆ. ಸರ್ಕಾರ ಮತ್ತು ತನಿಖಾ ಸಂಸ್ಥೆಗಳು ಈ ಪ್ರಕರಣದಲ್ಲಿ ಹೇಗೆ ನಡೆದುಕೊಳ್ಳುತ್ತವೆ ಎಂಬುದು ದೇಶದ ಪ್ರತಿಷ್ಠೆಯ ಮೇಲೆಯೂ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರಲಿದೆ.

ದಿನದ ಟ್ವೀಟ್

ಎರಡು ದಿನಗಳಲ್ಲಿ ಉತ್ತರ ಸಿಗಲಿದೆ

ಎಫ್‌ಪಿಒ ಬೆಲೆಗಿಂತ ಮಾರುಕಟ್ಟೆಯಲ್ಲಿ ಷೇರು ಬೆಲೆ ಕಡಿಮೆ ಇದ್ದರೂ, 'ಅದಾನಿ' ಎಫ್‌ಪಿಒ ಪ್ರಕ್ರಿಯೆಯನ್ನು ಮೊದಲಿನ ವೇಳಾಪಟ್ಟಿಯಂತೆ ನಡೆಸಲು ಬಯಸಿದ್ದಾರೆ. ನಮಗೆ ಗೊತ್ತಿರದ ಬೇರೇನೋ ಒಂದು ಸಂಗತಿ ಅವರಿಗೆ ತಿಳಿದಿದೆ ಅಥವಾ ಅವರು ತೀರಾ ಅತಿಯಾದ ವಿಶ್ವಾಸ ಹೊಂದಿದ್ದಾರೆ. ಮುಂದಿನ ಎರಡು ದಿನಗಳಲ್ಲಿ ಇದಕ್ಕೆ ಉತ್ತರ ಸಿಗಲಿದೆ.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ಮೊಘಲ್ ಗಾರ್ಡನ್‌ನ ಹೆಸರನ್ನು ಅಮೃತ ಉದ್ಯಾನವೆಂದು ಬದಲಾಯಿಸಿದರೆ ಹಣದುಬ್ಬರ, ಬಡತನ ಮತ್ತು ನಿರುದ್ಯೋಗ ಸಮಸ್ಯೆಯಿಂದ ದೇಶದ ಜನರಿಗೆ ಮುಕ್ತಿ ದೊರೆಯುತ್ತದೆಯೇ?

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

25 ವರ್ಷಗಳ ಹಿಂದೆ

ಶುಕ್ರವಾರ, 30-1-1998

• ತಾರಾದೇವಿ ನಿರ್ಲಕ್ಷ್ಯ: ಮೊಯಿಲಿಗೆ ಲಾಭ

ಬೆಂಗಳೂರು, ಜ. 29- ಪಕ್ಷದಿಂದ 'ಬಿ' ಫಾರಂ ಪಡೆದುಕೊಳ್ಳಲು ವಿಳಂಬ ಮಾಡಿದ ತಪ್ಪಿಗಾಗಿ ಚಿಕ್ಕಮಗಳೂರಿನ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗುವ ಅವಕಾಶದಿಂದ ಡಿ.ಕೆ. ತಾರಾದೇವಿ ಸಿದ್ಧಾರ್ಥ ಅವರು ವಂಚಿತರಾಗಬೇಕಾಯಿತು. ಇದರಿಂದಾಗಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಕಡೇ ಗಳಿಗೆಯಲ್ಲಿ ಟಿಕೆಟ್ ಪಡೆಯಲು ಸಫಲರಾದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಈ ಕ್ಷೇತ್ರಕ್ಕೆ ಮೊದಲು ಟಿಕೆಟ್ ಪಡೆದಿದ್ದ ತಾರಾದೇವಿ ಅವರು ಜ. 27ರಂದು ತಾವೇ ಖುದ್ದಾಗಿ ಬೆಂಗಳೂರಿಗೆ ಬಂದು ಕೆಪಿಸಿಸಿ ಅಧ್ಯಕ್ಷರಿಂದ 'ಬಿ' ಫಾರಂ ತೆಗೆದುಕೊಂಡು ಹೋಗುವ ಬದಲು ತಮ್ಮ ಆಪ್ತರೊಬ್ಬರನ್ನು ಕಳುಹಿಸಿದ ತಪ್ಪಿಗಾಗಿ ಭಾರಿ ದಂಡ ತೆರಬೇಕಾಯಿತು.

• ಕ್ವಾಟ್ರೋಚಿ ಪಾತ್ರ ತಿಳಿಸಲು ಸೋನಿಯಾಗೆ ಒತ್ತಾಯ

ನವದೆಹಲಿ, ಜ. 29 (ಪಿಟಿಐ, ಯುಎನ್‌ಐ)- ವಿವಾದಾತ್ಮಕ ಬೊಫೋರ್ಸ್ ಫಿರಂಗಿ ಖರೀದಿ ಪ್ರಕರಣವನ್ನು ಸೋನಿಯಾ ಗಾಂಧಿ ಅವರು ಪ್ರಸ್ತಾಪಿಸಿರುವುದನ್ನು ಸಮತಾ ಪಕ್ಷದ ಅಧ್ಯಕ್ಷ ಜಾರ್ಜ್ ಫರ್ನಾಂಡಿಸ್ ಅವರು ಆಕ್ಷೇಪಿಸಿದ್ದು, ಈ ಪ್ರಕರಣದಲ್ಲಿ ಇಟಲಿ ಉದ್ಯಮಿ ಒಟ್ಟಾವಿಯೋ ಕ್ವಾಟ್ರೋಚಿ ಅವರು ಆಸಕ್ತಿ ತೋರಿದ ಬಗ್ಗೆ ರಾಷ್ಟ್ರಕ್ಕೆ ಸೋನಿಯಾ ಗಾಂಧಿ ಅವರು ತಿಳಿಸಬೇಕೆಂದು ಆಗ್ರಹಪಡಿಸಿದ್ದಾರೆ.

ಪತ್ರಕರ್ತರ ಜೊತೆ ಇಂದು ಮಾತನಾಡುತ್ತಿದ್ದ ಅವರು, ಬೊಫೋರ್ಸ್ ಪ್ರಕರಣದಲ್ಲಿ ನಡೆದ ಹಣದ ಹಸ್ತಾಂತರದ ಬಗ್ಗೆ, ಹಣ ಎಲ್ಲಿಂದ ಬಂದು ಎಲ್ಲಿಗೆ ಹೋಯಿತು ಎಂಬುದನ್ನು ಹಾಗೂ ಇದರಲ್ಲಿ ಕ್ವಾಟ್ರೋಚಿ ಅವರ ಪಾತ್ರವೇನು ಎಂಬುದನ್ನು ಸೋನಿಯಾ ತಿಳಿಸಬೇಕಾಗಿದೆ ಎಂದು ಹೇಳಿದರು.

50 ವರ್ಷಗಳ ಹಿಂದೆ

ಮಂಗಳವಾರ, 30-1-1973

• ಕರ್ನಾಟಕ ಪೊಲೀಸರ ಹೊಸ ಉಡುಪು

ಬೆಂಗಳೂರು, ಜ. 29- ಮೈಸೂರಿನ ಹೆಸರು ಬದಲಾಗಿ ಕರ್ನಾಟಕ ಎಂದು ನಾಮಕರಣ ಆಗುವ ದಿನದಿಂದ ರಾಜ್ಯದ ಪೊಲೀಸರ ಸಾಂಪ್ರದಾಯಿಕ ಉಡುಪುಗಳೂ ಬದಲಾಗಲಿವೆ. ಪೊಲೀಸರ ಮಾಮೂಲಿ ಪೇಟ ಇನ್ನುಮುಂದೆ ಕಾಣಬರದು. ಅದರ ಬದಲು ಸಶಸ್ತ್ರ ಪೊಲೀಸರು ಸಾಮಾನ್ಯವಾಗಿ ಧರಿಸುವ (ಉಕ್ಕಿನ ಶಿರಸ್ತ್ರಾಣವಲ್ಲ) ಒಂದೆಡೆ ಮೇಲೆ ಬಾಗಿದ ಹ್ಯಾಟ್, ಪೇದೆಗಳು ಧರಿಸುವ ಖಾಕಿ ನಿಕ್ಕರ್ ಬದಲು ಪ್ರತಿಯೊಬ್ಬರೂ ಖಾಕಿ ಪ್ಯಾಂಟ್‌ಗಳಲ್ಲಿ ಶೋಭಿಸುವರು.

ಸಾಮಾನ್ಯ ಪೊಲೀಸರಿಗೆ ಈವರೆಗೆ ನೀಡುತ್ತಿದ್ದ ಭಾರವಾದ ಲೇಸ್‌ಬೂಟ್ ಬದಲಿಗೆ ಹಗುರವಾದ ಬಕಲ್‌ಸಮೇತ ಬೂಟ್‌ಗಳಿರುವುವು.

ಷರಾಯಿ ಒದಗಿಸಲಿರುವುದರಿಂದ ಉದ್ದನೆಯ ಕಾಲುಚೀಲ ಮೊದಲಾದವು ಮಾಯವಾಗಲಿವೆ. ಹಾವಿನ ಪಟ್ಟಿ ರೀತಿಯ ಬೆಲ್ಟ್ ಜಾಗದಲ್ಲಿ ಚರ್ಮದ ಬೆಲ್ಟ್. ಅದರ ಮೇಲೆ ಕರ್ನಾಟಕ ಪೊಲೀಸ್ ಎಂಬ ಆಲಂಕಾರಿಕ ಬಕಲ್, ಓಪನ್ ಕಾಲರ್ ಮೊದಲಾದವು ನೂತನ ಸಮವಸ್ತ್ರದ ಅಂಗಗಳು.

ಸಾರ್ವಭೌಮರೆಂದುಕೊಂಡವರ ನೆತ್ತಿಯ ಕುಕ್ಕಲು ಇದು ಸಕಾಲ

ಭ್ರಷ್ಟ ಕುದುರೆ ಓಡುತಿದೆ ನೋಡಿದಿರಾ?

ಅನುಸಂಧಾನ

ರವೀಂದ್ರ ಭಟ್ಟ

ರಾಜ್ಯದಲ್ಲಿ ಈಗ ವಿಧಾನಸಭೆ ಚುನಾವಣೆ ಕಾವು ಏರುತ್ತಿದೆ. ಎಲ್ಲ ರಾಜಕೀಯ ಪಕ್ಷಗಳ ಮುಖಂಡರೂ ಪರಸ್ಪರ ಆರೋಪ ಪ್ರತ್ಯಾರೋಪ ಮಾಡುತ್ತಿದ್ದಾರೆ. ಇದರಲ್ಲಿ ಭ್ರಷ್ಟಾಚಾರದ ಆರೋಪದ ಪ್ರಮಾಣವೇ ಹೆಚ್ಚು. ಈ ಬಾರಿ ಚುನಾವಣೆಯಲ್ಲಿ ಭ್ರಷ್ಟಾಚಾರವೇ ಪ್ರಮುಖ ವಿಷಯ. ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಶೇ 40ರಷ್ಟು ಕಮಿಷನ್ ಆರೋಪವನ್ನು ಕಾಂಗ್ರೆಸ್ ಪಕ್ಷ ಮಾಡಿದೆ. ಇದಕ್ಕೆ ತಿರುಗೇಟು ನೀಡಿರುವ ಬಿಜೆಪಿ, 'ಕಾಂಗ್ರೆಸ್ ಪಕ್ಷವೇ ಭ್ರಷ್ಟಾಚಾರದ ಗಂಗೋತ್ರಿ' ಎಂದು ಹೇಳಿದೆ.

ಬಿಜೆಪಿ ಭ್ರಷ್ಟಾಚಾರದಿಂದ ವಿಧಾನಸೌಧ ಮಲಿನವಾಗಿದ್ದು ಅದನ್ನು ಗಂಜಲದಿಂದ ಶುದ್ಧ ಮಾಡುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಶಿವಕುಮಾರ್ ಅವರು ಭ್ರಷ್ಟಾಚಾರದ ಬಗ್ಗೆ ಮಾತನಾಡುವುದೇ ಹಾಸ್ಯಾಸ್ಪದ ಎಂದು ಬಿಜೆಪಿ ಹೇಳಿದೆ. ಈ ನಡುವೆ ಜಾತ್ಯತೀತ ಜನತಾದಳ ನಾಯಕರೂ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ವಿರುದ್ಧವೂ ಇಂತಹ ಆರೋಪಗಳು ಕೇಳಿಬಂದಿವೆ. ಒಟ್ಟಾರೆಯಾಗಿ ಎಲ್ಲ ಕಡೆಯಿಂದಲೂ ಭ್ರಷ್ಟ ಕುದುರೆಯನ್ನೇ ಓಟಕ್ಕೆ ಬಿಡಲಾಗಿದೆ. ಈಗ ಈ ಕುದುರೆಯನ್ನು ಕಟ್ಟಿಹಾಕುವ ಕೆಲಸ ಮತದಾರರದ್ದು. ಭ್ರಷ್ಟ ಕುದುರೆಗಳನ್ನು ಲಗಾಮು ಹಾಕಿ ಹಿಡಿಯಬೇಕು ಮತ್ತು ಕಸದಬುಟ್ಟಿಗೆ ಎಸೆಯಬೇಕಾಗಿದೆ.

ಭ್ರಷ್ಟಾಚಾರ ಮಾಮೂಲಾಗಿದೆ ಎಂದು ಅದನ್ನು ಒಪ್ಪಿಕೊಂಡು ಸುಮ್ಮನಿರಲಾಗದು. ಮತದಾರರಂತೂ ಸುಮ್ಮನಿರಲೇಬಾರದು. ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದ ಮಹಡಿಯವರೆಗೂ ಭ್ರಷ್ಟಾಚಾರ ಎಗ್ಗಿಲ್ಲದೆ ನಡೆಯುತ್ತಿದೆ. ಅದನ್ನು ತಡೆಯಲಿಕ್ಕಾಗದು ಎಂದು ನಮಗೆ ನಾವೇ ನಿರ್ಧರಿಸಿಕೊಂಡು ಭ್ರಷ್ಟರನ್ನೇ ಆಯ್ಕೆ ಮಾಡಿದರೆ, ನಮ್ಮ ಮಕ್ಕಳು, ಮೊಮ್ಮಕ್ಕಳ ಬದುಕು ದುರ್ಭರವಾಗುತ್ತದೆ. ಅವರ ಸಂಕಷ್ಟಗಳಿಗೆ ನಾವೇ ಸಾಮಗ್ರಿ ಒದಗಿಸಿದಂತಾಗುತ್ತದೆ. ಹೌದು, ಮತದಾರರೂ ಭ್ರಷ್ಟರಾಗಿದ್ದಾರೆ. ಈಗ ಮತದಾರರು ತಮ್ಮ ತನುವ ಸಂತೈಸಿಕೊಳ್ಳಬೇಕು. ಮನವ ಸಂತೈಸಿಕೊಳ್ಳಬೇಕು. ಮತದಾರರನ್ನು ಭ್ರಷ್ಟರನ್ನಾಗಿ ಮಾಡಿದ್ದು ರಾಜಕಾರಣಿಗಳೇ ಆದರೂ ಆ ಕೊಳೆಯನ್ನು ತೊಳೆಯುವ ಕೆಲಸವನ್ನು ಮತದಾರರೇ ಮಾಡಬೇಕು.

ಸರ್ಕಾರ ಎನ್ನುವುದು ಒಂದು ಡಕೋಟ ಬಸ್ಸು ಇದ್ದಂತೆ. ಆ ಬಸ್ಸಿನ ಯಾವ ಭಾಗವೂ ಸರಿ ಇಲ್ಲ. ಸರ್ಕಾರ ಬದಲಾಗುವುದು ಎಂದರೆ ಚಾಲಕ ಬದಲಾಗುತ್ತಾನೆ ಅಷ್ಟೆ. ಚಾಲಕ ಬದಲಾದ ತಕ್ಷಣ ಬಸ್ಸು ಬದಲಾಗುವುದಿಲ್ಲ. ಅದರ ಗೇರ್ ಬಾಕ್ಸ್, ಕ್ಲಚ್, ಎಂಜಿನ್ ಎಲ್ಲಾ ಹಾಗೆಯೇ ಇರುತ್ತವೆ. ಬದಲಾದ ಚಾಲಕ ಕೇವಲ ಸ್ಟೀರಿಂಗ್ ವ್ಹೀಲ್ ಹಿಡಿದುಕೊಂಡು ಅತ್ತ ಇತ್ತ ತಿರುಗಿಸುತ್ತಾನೆ ಅಷ್ಟೆ. ಬಸ್ ಇದ್ದಲ್ಲೇ ಇರುತ್ತದೆ. ಮುಂದೆ ಸಾಗುವುದಿಲ್ಲ. ಯಾರೋ ಅಲ್ಲೊಬ್ಬ ಇಲ್ಲೊಬ್ಬ ಕಸುಬುದಾರ ಚಾಲಕ ಮಾತ್ರ ಕೊಂಚ ಮೆಕ್ಯಾನಿಕ್ ಆಗಿದ್ದು, ಗೇರ್ ಸರಿ ಮಾಡಿಕೊಂಡು ಬಸ್ಸನ್ನು ಸ್ವಲ್ಪ ಮುಂದೆ ಓಡಿಸುತ್ತಾನೆ ಅಷ್ಟೆ. ಈಗೆಲ್ಲ ನಿಂತ ಬಸ್ಸಿನ ಸ್ಟೀರಿಂಗ್ ವ್ಹೀಲ್ ಹಿಡಿದ ಚಾಲಕ ಭರವಸೆಗಳ ಮಳೆ ಸುರಿಸುತ್ತಾನೆ. ಈಡೇರದ ಕನಸುಗಳನ್ನು ಬಿತ್ತುತ್ತಾನೆ. ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುತ್ತಾನೆ. ಡಕೋಟ ಬಸ್ಸಿಗೆ ಬಣ್ಣದ ಬೆಳಕು ತುಂಬಿ ಭ್ರಮೆ ಹುಟ್ಟಿಸುತ್ತಾನೆ. ಆಮೇಲೆ ಬಸ್ಸಿನ ಒಂದೊಂದೇ ಭಾಗವನ್ನು ಮಾರಾಟ ಮಾಡಲು ಶುರು ಮಾಡುತ್ತಾನೆ.

ಭ್ರಷ್ಟಾಚಾರದ ವಿಷಯಕ್ಕೆ ಬಂದರೆ, ಹಲವಾರು ದಶಕಗಳಿಂದ ಕರ್ನಾಟಕ ರಾಜ್ಯದ ಸ್ಥಿತಿ ಹಾಗೆಯೇ ಇದೆ. ದಶಕದಿಂದ ದಶಕಕ್ಕೆ ಭ್ರಷ್ಟಾಚಾರದ ಪ್ರಮಾಣ ಏರುತ್ತಿದೆಯೇ ವಿನಾ ಇಳಿಯುತ್ತಿಲ್ಲ. ಮಾರುಕಟ್ಟೆಯಲ್ಲಿ ದಿನನಿತ್ಯದ ವಸ್ತುಗಳ ಬೆಲೆ ಏರಿದಂತೆಯೇ ಸರ್ಕಾರಿ ಕಚೇರಿಗಳಲ್ಲಿಯೂ ಲಂಚದ ಪ್ರಮಾಣ ಏರುತ್ತಲೇ ಇದೆ. ಅದು ತಹಶೀಲ್ದಾರರ ಕಚೇರಿಯಾದರೂ ಸೈ, ನೋಂದಣಿ ಇಲಾಖೆಯಾದರೂ ಸೈ, ವಿಧಾನಸೌಧವಾದರೂ ಅಷ್ಟೆ.

'ಡಿ.ಕೆ.ಶಿವಕುಮಾರ್ ರಾಜಕೀಯ ಪ್ರವೇಶ ಮಾಡಿದಾಗ ಅವರ ಆಸ್ತಿ ಎಷ್ಟಿತ್ತು, ಈಗ ಎಷ್ಟಾಗಿದೆ?' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರಶ್ನೆ ಮಾಡಿದ್ದಾರೆ. ಇಂತಹ ಪ್ರಶ್ನೆಯನ್ನು ಅವರೂ ಕೇಳಿಕೊಳ್ಳಬೇಕಲ್ಲವೇ? ಸದ್ಯ ರಾಜಕೀಯದಲ್ಲಿ ಇರುವ ಯಾವ ರಾಜಕಾರಣಿಯ ಆಸ್ತಿಯೂ ಅವರು ರಾಜಕೀಯಕ್ಕೆ ಪ್ರವೇಶ ಮಾಡಿದ ಕಾಲದಲ್ಲಿ ಇದ್ದ ಹಾಗೆ ಇಲ್ಲ. ಇದು ವಾಸ್ತವ ಸತ್ಯ. ಇದನ್ನು ಮತದಾರರು ಅರ್ಥ ಮಾಡಿಕೊಳ್ಳದೇ ಹೋದರೆ ಅಪಾಯ ಕಟ್ಟಿಟ್ಟ ಬುತ್ತಿ.

ಈಗ ಚರ್ಚೆಯಾಗುತ್ತಿರುವುದು ಶಾಸಕಾಂಗದ ಭ್ರಷ್ಟಾಚಾರದ ವಿಷಯ. ಶಾಸಕಾಂಗದ ಭ್ರಷ್ಟಾಚಾರದ ಜೊತೆಗೇ ಕಾರ್ಯಾಂಗದ ಭ್ರಷ್ಟಾಚಾರವನ್ನೂ ನಿಯಂತ್ರಿಸಬೇಕಾಗಿದೆ. ಶಾಸಕಾಂಗದಲ್ಲಿ ಇರುವವರು ಐದು ವರ್ಷಕ್ಕೆ ಒಮ್ಮೆ ಬದಲಾಗುತ್ತಾರೆ. ಚುನಾವಣೆ ಸಂದರ್ಭದಲ್ಲಿಯಾದರೂ ಜನರಿಗೆ ಒಂದಿಷ್ಟು ಹಂಚುತ್ತಾರೆ. ಆದರೆ ಕಾರ್ಯಾಂಗದಲ್ಲಿ ಇರುವವರು ಅಲ್ಲಿ 30-35 ವರ್ಷ ಇರುತ್ತಾರೆ. ಯಾವುದೇ ಪಕ್ಷದ ಸರ್ಕಾರ ಬಂದರೂ ಕೆಲಸ ಮಾಡಬೇಕಾದವರು ಇವರೆ. ಭ್ರಷ್ಟ ಶಾಸಕಾಂಗದಿಂದ ಕಾರ್ಯಾಂಗದ ಭ್ರಷ್ಟಾಚಾರವನ್ನು ತೊಲಗಿಸಲು ಸಾಧ್ಯವಿಲ್ಲ. ಅದಕ್ಕಾಗಿ ಶಾಸಕಾಂಗದ ಭ್ರಷ್ಟಾಚಾರವೂ ಹೋಗಬೇಕು, ಕಾರ್ಯಾಂಗದ ಭ್ರಷ್ಟಾಚಾರವೂ ಹೋಗಬೇಕು. ಇದೊಂದು ತರಹ ಮೊಟ್ಟೆ ಮೊದಲೋ ಕೋಳಿ ಮೊದಲೋ ಎನ್ನುವಂತಾಗಿದೆ. ಶಾಸಕಾಂಗದಿಂದ ಕಾರ್ಯಾಂಗ ಭ್ರಷ್ಟವಾಯಿತೋ ಅಥವಾ ಕಾರ್ಯಾಂಗದಿಂದ ಶಾಸಕಾಂಗ ಭ್ರಷ್ಟವಾಯಿತೋ ತಿಳಿಯದು. ಆದರೆ ಎರಡೂ ಅಂಗಗಳು ಭ್ರಷ್ಟವಾಗಿವೆ. ನಾಲ್ಕನೇ ಅಂಗ ಎಂದು ಕರೆಸಿಕೊಳ್ಳುವ ಮಾಧ್ಯಮ ರಂಗ ಕೂಡ ಇದಕ್ಕೆ ಹೊರತಾಗಿಲ್ಲ. ನ್ಯಾಯಾಂಗ ಕೂಡ ಆರೋಪಗಳಿಂದ ಮುಕ್ತವಾಗಿಲ್ಲ.

ಎಲ್ಲ ಕಸವನ್ನೂ ಬದಿಗೆ ಒತ್ತುವ ತಾಕತ್ತು ಇರುವುದು ಮತದಾರರಿಗೆ ಮಾತ್ರ. ಇನ್ನಾದರೂ ತಾಕತ್ತು ಪ್ರದರ್ಶಿಸಬೇಕು. ಪಕ್ಷದ ಹಂಗು ಬಿಟ್ಟು, ಜಾತಿಯ ಗುಂಗು ತೊರೆದು, ಹಣದ ರಂಗಿಗೆ ಮರುಳಾಗದೆ, ಮಾತಿನ ಚಪ್ಪರಕ್ಕೆ ಮೈಮರೆಯದೆ ಮತ ಚಲಾಯಿಸದಿದ್ದರೆ ಮುಳುಗುವುದು ಗ್ಯಾರಂಟಿ. ದಮ್ಮಿದ್ರೆ, ತಾಕತ್ತು ಇದ್ರೆ ಎಂದು ಒಬ್ಬರಿಗೊಬ್ಬರು ಸವಾಲು ಹಾಕುವ ರಾಜಕಾರಣಿಗಳಿಗೆ ಮತದಾರರು ನಿಜವಾದ ತಾಕತ್ತು ತೋರಬೇಕು.

ಇತ್ತೀಚೆಗೆ ಒಂದು ಕತೆ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿತ್ತು. ಅಭ್ಯರ್ಥಿಯೊಬ್ಬ ಮತದಾರನೊಬ್ಬನಿಗೆ ಒಂದು ಸಾವಿರ ರೂಪಾಯಿ ನೀಡಿ, ತನಗೇ ಮತ ಚಲಾಯಿಸುವಂತೆ ಕೇಳಿಕೊಂಡ. ಅದಕ್ಕೆ ಮತದಾರ ತನಗೆ ಹಣ ಬೇಡ, ಒಂದು ಕತ್ತೆ ತಂದುಕೊಡು ಎಂದು ಮನವಿ ಮಾಡಿದ. ಅದಕ್ಕೆ ಒಪ್ಪಿದ ಅಭ್ಯರ್ಥಿ ಸಂತೆಯಲ್ಲೆಲ್ಲಾ ಕತ್ತೆಗಾಗಿ ಹುಡುಕಾಡಿದ. ಎಲ್ಲಿಯೂ ಆತನಿಗೆ ₹ 20 ಸಾವಿರಕ್ಕಿಂತ ಕಡಿಮೆ ದರದ ಕತ್ತೆ ಸಿಗಲಿಲ್ಲ. ಅದಕ್ಕೆ ಮತ್ತೆ ಮತದಾರನ ಬಳಿ ಬಂದ ಆತ 'ಕಡಿಮೆ ದರದಲ್ಲಿ ಕತ್ತೆ ಸಿಗುವುದಿಲ್ಲ. ಕನಿಷ್ಠ 20 ಸಾವಿರ ರೂಪಾಯಿ ನೀಡಬೇಕು. ಅದಕ್ಕಾಗಿ ನಿನಗೆ ಕತ್ತೆ ಕೊಡಲು ಆಗಲ್ಲ, ಬೇಕಾದರೆ ಎರಡು ಸಾವಿರ ರೂಪಾಯಿ ನೀಡುತ್ತೇನೆ' ಎಂದ. ಅದಕ್ಕೆ ಮತದಾರ 'ಕತ್ತೆಗೇ 20 ಸಾವಿರ ರೂಪಾಯಿ ಆದರೆ ನಾನು ಕತ್ತೆಗಿಂತ ಕಡೆನಾ' ಎಂದು ಪ್ರಶ್ನೆ ಮಾಡಿದನಂತೆ. ಪ್ರತೀ ಮತದಾರನಿಗೆ 6 ಸಾವಿರ ರೂಪಾಯಿ ನೀಡಲು ಮುಂದಾಗಿರುವ ರಾಜಕೀಯ ಮುಖಂಡರಿಗೆ ಈಗ ಮತದಾರರು ಕತ್ತೆಯ ಕತೆಯನ್ನು ಹೇಳಬೇಕಾಗಿದೆ.

ದ.ರಾ.ಬೇಂದ್ರೆ ಅವರು 'ಹಕ್ಕಿ ಹಾರುತಿದೆ ನೋಡಿದಿರಾ' ಕವನದಲ್ಲಿ 'ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ, ಮಂಡಲ-ಗಿಂಡಲಗಳ ಗಡ ಮುಕ್ಕಿ, ತೇಲಿಸಿ ಮುಳುಗಿಸಿ ಖಂಡ-ಖಂಡಗಳ, ಸಾರ್ವಭೌಮರಾ ನೆತ್ತಿಯ ಕುಕ್ಕಿ, ಹಕ್ಕಿ ಹಾರುತಿದೆ ನೋಡಿದಿರಾ?' ಎಂದು ಹೇಳುತ್ತಾರೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ದೊರೆಗಳನ್ನು ಟೀಕಿಸಿ ಅವರು ಹೀಗೆ ಬರೆದಿದ್ದರು. ಈಗಲೂ ವಿವಿಧ ರಾಜಕೀಯ ಪಕ್ಷಗಳು ಓಟಕ್ಕೆ ಬಿಟ್ಟಿರುವ ಭ್ರಷ್ಟ ಕುದುರೆಗಳ ನೆತ್ತಿಯನ್ನು ಮತದಾರರು ಕುಕ್ಕದೇ ಇದ್ದರೆ ಕಾಲಪಕ್ಷಿ ಮತದಾರರನ್ನೇ ಕುಕ್ಕುತ್ತದೆ.

ಬೇಂದ್ರೆಯವರ ಕ್ಷಮೆ ಕೋರಿ ಅವರ ಕವಿತೆಯ ಕೊನೆಯ ಸಾಲುಗಳನ್ನು ಹೀಗೆ ಬದಲಾಯಿಸಿಕೊಳ್ಳಬಹುದೇನೋ? 'ಲಂಚ ಮುಟ್ಟಿದೆ ದಿಗ್ಮಂಡಲಗಳ ಅಂಚ, ಆಚೆಗೆ ಚಾಚಿದೆ ತನ್ನಯ ಚುಂಚ, ಬ್ರಹ್ಮಾಂಡಗಳನು ದಾಟಿದೆ ಲಂಚದ ಹೊಂಚು, ಭ್ರಷ್ಟ ಕುದುರೆ ಓಡುತಿದೆ ನೋಡಿದಿರಾ?'

ಚುರುಮುರಿ

ಕಲ್ಯಾಣ ಡ್ಯಾಶ್‌ಬೋರ್ಡ್

• ಸುಮಂಗಲಾ

ಬೆಕ್ಕಣ್ಣನಿಗೆ ಕಳೆದ ವಾರ 'ಬಾರಲೇ ಚುರುಮುರಿ ಮಾಡೂಣು' ಎಂದರೆ 'ಚುರುಮುರಿ ಗಿರುಮುರಿಗೆಲ್ಲ ನನಗ ಟೈಮಿಲ್ಲ' ಎಂದು ಮುಖ ತಿರುವಿತ್ತು. ವಾರವಿಡೀ ಲ್ಯಾಪ್‌ಟಾಪಿನಲ್ಲಿ ತಲೆ ಹುದುಗಿಸಿ ಏನೋ ಕೆಲಸ ಮಾಡುತ್ತಲೇ ಇತ್ತು. ನಾನು ಕುತೂಹಲ ತಡೆಯದೇ ಇಣುಕಿದೆ.

'ಚುನಾವಣೆ ಹತ್ತಿರ ಬರಾಕೆ ಹತ್ತೈತಿ. ಕುಮಾರಣ್ಣನ ಮನಿಯವರು ಟಿಕೀಟು ನನಗ, ನಿನಗ ಅಂತ ಕಿತ್ತಾಟದಾಗೆ ಮುಳುಗ್ಯಾರೆ. ಕೈಪಕ್ಷದೋರು ಕೆಸರು ಎರಚಾಟದಲ್ಲಿ ತಾವೇನು ಮಾಡಬಕು ಅನ್ನೂದೇ ಮರತಾರ. ಆದರ ನಮ್ ಕಮಲಕ್ಕನ ಮನಿಯೋರು ಈಗಾಗ್ಲೇ ಐಟಿ ಮಂದಿ ಪಡೆ ಸಿದ್ಧ ಮಾಡ್ಯಾರ. ಆ ಪಟ್ಟಿವಳಗ ನಂದೂ ಹೆಸರೈತಿ' ಎಂದು ಹೆಮ್ಮೆಯಿಂದ ಬೀಗಿತು. ನಾನು ತಲೆ ಕೆರೆದುಕೊಂಡೆ.

'ಕಲ್ಯಾಣ ಕರ್ನಾಟಕಕ್ಕೆ 5,700 ಕೋಟಿ, ಮತ್ತೆ ಹೆಚ್ಚುವರಿ 1,500 ಕೋಟಿ, ನೇಕಾರರ ಕಲ್ಯಾಣಕ್ಕೆ 51.49 ಕೋಟಿ ಪ್ಲಸ್ 23.41 ಕೋಟಿ, ಎಸ್‌ಸಿ- ಎಸ್‌ಟಿ ಕಲ್ಯಾಣಕ್ಕೆ 990 ಕೋಟಿ... ಎಲ್ಲಾನೂ ಕೂಡಿಸಿ ಎಷ್ಟ್ ಕೋಟಿ ರೂಪಾಯಿ ಅಂತ ಹೇಳು ನೋಡೂಣು'. ನಾನು ಎಣಿಸಲಿಕ್ಕೆ ಕ್ಯಾಲ್ಕ್ಯುಲೇಟರ್ ಹುಡುಕಿದೆ.

'ನಮ್ಮ ಬೊಮ್ಮಾಯಿ ಅಂಕಲ್ಲು ಮತ್ತವರ ಮಂತ್ರಿಮಂಡಲದೋರು ಸೇರಿ, ಬ್ಯಾರೆಬ್ಯಾರೆ ಕಲ್ಯಾಣ ಕಾರ್ಯಕ್ರಮಕ್ಕೆ ಕೋಟಿಗಟ್ಟಲೆ ರೊಕ್ಕ ಕೊಟ್ಟಾರಲ್ಲ... ಅವನ್ನೆಲ್ಲ ಫಟಾಫಟ್ ಲೆಕ್ಕ ಮಾಡಿ ಹೇಳಾಕೆ ಒಂದು ಕಲ್ಯಾಣ ಡ್ಯಾಶ್‌ಬೋರ್ಡ್ ತಯಾರು ಮಾಡೀನಿ. ಹಿಂಗ ಒಂದು ಕಲ್ಯಾಣ ಕಾರ್ಯಕ್ರಮದ ಹೆಸರಿನ ಮ್ಯಾಗೆ ಕ್ಲಿಕ್ ಮಾಡಿದ್ರ ಸಾಕು, ಅದನ್ನ ನಮ್ ಬೊಮ್ಮಾಯಿ ಅಂಕಲ್ಲು ಯಾವಾಗ ಶುರು ಮಾಡಿರು, ಎಷ್ಟ್ ಮಂದಿಗೆ ಎಷ್ಟ್ ರೊಕ್ಕ ಕೊಟ್ಟಾರೆ ಇತ್ಯಾದಿ ವಿವರ ತೋರಿಸೂ ಡ್ಯಾಶ್‌ಬೋರ್ಡ್ ಇದು' ಬೆಕ್ಕಣ್ಣ ವಿವರಿಸಿತು.

'ಅಂದ್ರ ಇಲ್ಲಿ ನಿನ್ನ ಡ್ಯಾಶ್‌ಬೋರ್ಡ್ ಕ್ಲಿಕ್ ಮಾಡಿದ್ರ ಸಾಕು, ಅಲ್ಲಿ ಕೆಲಸ ಆಗಿ, ಪ್ರಗತಿನೂ ಆಗಿಬಿಡತೈತೇನು'.

'ಕೆಲಸದ ಪ್ರಗತಿ ಯಾರಿಗೆ ಬೇಕಾಗೈತಿ? ಡ್ಯಾಶ್‌ಬೋರ್ಡ್ ಅಂಕಿಸಂಖ್ಯೆನೇ ನಮ್ಮ ಪ್ರಗತಿ' ಎನ್ನುತ್ತ ಮೀಸೆ ತಿರುವಿತು!

ಸಂಗತ

ಹಿಂಸೆ, ಸ್ವಹಿಂಸೆ, ಅಹಿಂಸೆ

ವ್ಯಕ್ತಿ ಪರಿಶುದ್ಧಿಯಿಂದಲೇ ರಾಷ್ಟ್ರಶುದ್ಧಿ ಎನ್ನುವುದು ಗಾಂಧಿಯವರ ಅಚಲ ನಂಬಿಕೆ. ವ್ಯಕ್ತಿಯ ಸದ್ಗುಣ ರಾಜಕೀಯದ ಅಡಿಗಲ್ಲಾಗಬೇಕಿದೆ

• ಯೋಗಾನಂದ

1948ರ ಜನವರಿ 30ರಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹತ್ಯೆಗೊಳಗಾದರು. ಅಹಿಂಸೆಯಿಂದಲೇ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾನ್ ಸಂತ ಹಿಂಸೆಗೆ ಗುರಿಯಾಗಿದ್ದು ಜಗತ್ತಿನ ಇತಿಹಾಸದ ಕಪ್ಪು ಚುಕ್ಕೆ.

'ಓ ತಾಯೆ, ಓ ತಾಯೆ ಮುಳುಗುತಿದೆ ನೌಕೆ, ಈ ಜಗದ ಕತ್ತಲೆಯ ತೆರೆಕಡಲ ತಳಕೆ' ಎಂದು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ತಮ್ಮ ಅತೀವ ದುಃಖವನ್ನು ಅಭಿವ್ಯಕ್ತಿಸಿದ್ದರು. ಭಾರತದಲ್ಲಿ ಪ್ರತಿವರ್ಷ ಜನವರಿ 30ರಂದು 'ಹುತಾತ್ಮರ ದಿನ' ಆಚರಿಸಲಾಗುತ್ತದೆ. ಪ್ರಾಚೀನ ನಾಗರಿಕತೆಗಳಲ್ಲಿ ಹುತಾತ್ಮರ ದಿನದ ಪರಿಕಲ್ಪನೆ ಕಂಡುಬರುತ್ತದೆ. ದೇಶಕ್ಕಾಗಿ, ತಾವು ನಂಬಿದ ಸಿದ್ಧಾಂತಗಳಿಗಾಗಿ ಹೋರಾಡಿ ಬಲಿದಾನಗೈದವರಿಗೆ ಕೃತಜ್ಞತೆ ಸಲ್ಲಿಸುವ ದಿನವಿದು. ಗತವನ್ನು ಗೌರವಿಸುವುದರ ಜೊತೆಗೆ ಭವಿತವ್ಯವನ್ನೂ ದೃಷ್ಟಿಯಲ್ಲಿ ಇರಿಸಿಕೊಂಡು, ಸಂದ ಮಹನೀಯರ ಆದರ್ಶಗಳ ಪಥದಲ್ಲಿ ಸಾಗಲು ಸಂಕಲ್ಪಿಸುವ ಸಂದರ್ಭವಿದು.

ಗಾಂಧೀಜಿ ಪಾಲಿಗೆ ಅಹಿಂಸೆ ಒಂದು ಕಾರ್ಯತಂತ್ರವಾಗಿರಲಿಲ್ಲ. ಅದು ಅವರ ಜೀವನಶೈಲಿಯೇ ಆಗಿತ್ತು. ಅಹಿಂಸೆಯು ಆತ್ಮದ ವಿಶೇಷ ಗುಣವೆಂದು ಗಾಂಧೀಜಿ ಪರಿಗಣಿಸಿದ್ದರು. ಗುರಿಯೂ ಅದನ್ನು ತಲುಪುವ ಮಾರ್ಗವೂ ಪರಿಶುದ್ಧವಾಗಿರಬೇಕೆಂದು ಅವರು ಬಯಸಿದರು, ಅದರಂತೆ ಚಾಚೂ ತಪ್ಪದೆ ನಡೆದುಕೊಂಡರು. 'ನಾನು ಹಿಂಸೆಯನ್ನು ವಿರೋಧಿಸುತ್ತೇನೆ. ಏಕೆಂದರೆ ಹಿಂಸೆ ಒಳಿತು ಮಾಡುವಂತೆ ತೋರುವುದು. ಆದರೆ ಆ ಒಳಿತು ತಾತ್ಕಾಲಿಕ, ಹಿಂಸೆಯಿಂದ ಹಾನಿಯೇ ಹೆಚ್ಚು' ಎನ್ನುವುದು ಗಾಂಧೀಜಿ ಸ್ಪಷ್ಟ ನುಡಿ.

ಅಹಿಂಸೆಯೆಂದರೆ ಅನಿಷ್ಟಕ್ಕೆ ಮಾರುಹೋಗುವುದಲ್ಲ, ಆ ಅನಿಷ್ಟವನ್ನು ಸಹನೆಯಿಂದ ಸಂಪೂರ್ಣವಾಗಿ ವಿರೋಧಿಸುವುದು. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಅಮೋಘವಾಗಿ ಅನುಸರಿಸಿದ ಅಹಿಂಸಾ ತತ್ವ ಇಂದಿಗೂ ಪ್ರಸ್ತುತ. ಅಹಿಂಸೆ ನಮ್ಮ ದಿನಚರಿಯಲ್ಲಿ ಮೇಳೈಸಿದರೆ ನ್ಯಾಯಾಲಯಗಳ ಮುಂದೆ ಬರುವ ಮೊಕದ್ದಮೆಗಳು ಕಡಿಮೆಯಾಗುತ್ತವೆ.

ಅಹಿಂಸೆಯೆಂದರೆ ಹಿಂಸೆ ಅಥವಾ ಅಶಾಂತಿ ಇಲ್ಲದ್ದು ಎಂದಲ್ಲ. ಅದು ಪ್ರತಿಯೊಂದು ಹಂತದಲ್ಲೂ ಪುಟಿಯುವ ಪ್ರೀತಿ, ವಾತ್ಸಲ್ಯ. ಹಿಂಸೆಯೆಂದರೆ ಥಳಿತ, ದರೋಡೆ, ಕೊಲೆಯಷ್ಟೇ ಅಲ್ಲ. ಕ್ರೌರ್ಯಕ್ಕೆ ನೋವಿಲ್ಲದೆ ಗಾಢವಾಗಿ ನಲುಗಿಸುವ ಮುಖಗಳು ಹಲವಿವೆ. ತಾರತಮ್ಯ, ಆಹಾರ ಪದಾರ್ಥಗಳ ವೃಥಾ ಪೋಲು, ಪರಿಸರ ನಿರ್ಲಕ್ಷ್ಯ, ಲಾಭಕೋರತನ, ಇಲ್ಲದವರ ಬಗ್ಗೆ ಅನಾದರ, ಇರುವವರ ಕುರಿತು ಅಸೂಯೆ, ದ್ವೇಷ- ನಾವು ತಿಳಿದೊ, ತಿಳಿಯದೆಯೊ ಎಸಗುವ ತೀವ್ರತರ ಹಿಂಸೆಜನ್ಯ ಉಪೇಕ್ಷೆಗಳಿವು. ಇಂತಹ ಹೊಣೆಗೇಡಿತನಗಳು ಅಸಮಾನತೆ, ಆವೇಶಗಳನ್ನು ಸೃಷ್ಟಿಸುತ್ತವೆ. ನಾವು ಚಲಾಯಿಸುವ ವಾಹನದ ಕರ್ಕಶ ಸದ್ದಾದರೆ ಇಲ್ಲವೆ ಸಂಭಾಷಣೆ ಏರು ಧ್ವನಿಯಲ್ಲಿದ್ದರೆ ಅದೂ ಹಿಂಸೆಯೇ. ಎಂದಮೇಲೆ ಪ್ರತ್ಯಕ್ಷಕ್ಕಿಂತ ಪರೋಕ್ಷವಾಗಿಯೇ ಹಿಂಸೆ ತಾಂಡವವಾಡಿರುತ್ತದೆ.

ಕೋವಿಡ್ ಖಂಡಾಂತರ ವ್ಯಾಧಿಯು ಗಾಂಧಿ ತತ್ವ ಪಾಲನೆಗೆ ವಿಶಿಷ್ಟವಾದ ಆಯಾಮವೊಂದನ್ನು ಕಲ್ಪಿಸಿತೆನ್ನಬಹುದು. ಒಬ್ಬರು ಮಾಸ್ಕ್ ಧರಿಸುವುದು ಎಲ್ಲರನ್ನೂ ರೋಗಮುಕ್ತಗೊಳಿಸಲು, ಅಂತೆಯೇ ಎಲ್ಲರೂ ಮಾಸ್ಕ್ ಧರಿಸುವುದು ಆ ಒಬ್ಬರನ್ನು ವ್ಯಾಧಿಯಿಂದ ಪಾರುಮಾಡಲೆಂದು. ಹಾಗಾಗಿ ಮಾಸ್ಕ್ ಧರಿಸದಿರುವುದು ಹಿಂಸೆಯ ಒಂದು ರೂಪವೇ.

ಯಾವುದೇ ನಾಗರಿಕತೆ ದೈಹಿಕ, ಮಾನಸಿಕ ಹಿಂಸೆಯನ್ನು ಸಾಮಾಜಿಕವಾಗಿ ಸಮ್ಮತಿಸದು. ನಮ್ಮ ಚಿಂತನೆಯ ಮಾರ್ಗ ಅಹಿಂಸೆಯದಾದರೆ ಅದು ಶಕ್ತಿಯುತವಾಗಿರುವುದು. ಗಾಂಧೀಜಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ ಬ್ರಿಟಿಷರನ್ನು ದ್ವೇಷಿಸಲಿಲ್ಲ. ಅವರ ದೃಷ್ಟಿಯಲ್ಲಿ ಸೇಡೆನ್ನುವುದು ಸ್ವಹಿಂಸೆ.

ಪ್ರಜಾಸತ್ತೆಯಲ್ಲಿ ನಿಸ್ಸಂದೇಹವಾಗಿ ಪ್ರಜೆಗಳಿಗೆ ಬೇಕು ಬೇಡಗಳು ಇದ್ದೇ ಇರುತ್ತವೆ. ಸರ್ಕಾರಗಳ ಮುಂದೆ ಬೇಡಿಕೆಗಳನ್ನು ಇಡಬಹುದು, ಪ್ರತಿರೋಧಿಸಬಹುದು. ಆದರೆ ಯಾವುದೇ ಪ್ರತಿಭಟನೆ ಶಾಂತಿಯುತವಾಗಿರಬೇಕೆಂದು ವ್ಯವಸ್ಥೆ ನಿರೀಕ್ಷಿಸುತ್ತದೆ. ಸಂಪು, ಮುಷ್ಕರ, ಧರಣಿ ಹೆಸರಿನಲ್ಲಿ ರಸ್ತೆ ಅಥವಾ ರೈಲು ಬಂದ್ ಮಾಡುವುದಕ್ಕೆ, ಜನಜೀವನಕ್ಕೆ ಅಡ್ಡಿಯಾಗುವುದಕ್ಕೆ ಯಾವುದೇ ಸಮರ್ಥನೆ ಇರದು. ಅಡುಗೆಯಾಗಲಿಲ್ಲ ಎಂಬ ಕಾರಣಕ್ಕೆ ಮಡಕೆಯನ್ನೇ ಒಡೆದಂತೆ ಇಂಥ ಚಟುವಟಿಕೆಗಳು.



ವ್ಯಕ್ತಿ ಪರಿಶುದ್ಧಿಯಿಂದಲೇ ರಾಷ್ಟ್ರ ಶುದ್ಧಿ ಎನ್ನುವುದು ಗಾಂಧಿಯವರ ಅಚಲ ನಂಬಿಕೆ. ವ್ಯಕ್ತಿಯ ಸದ್ಗುಣ ರಾಜಕೀಯದ ಅಡಿಗಲ್ಲಾಗಬೇಕಿದೆ. ಅಹಿಂಸಾ ಹಾದಿ ಎದುರಾಳಿಗಳಿಗೆ ಗೌರವ ಮತ್ತು ಲಕ್ಷ್ಯ ನೀಡುತ್ತದೆ. ಎಂತಹ ಕಠಿಣ ಸಂದರ್ಭಗಳಲ್ಲೂ ನಿಂದನೆ, ಶಿಷ್ಟಾಚಾರ ಮೀರಿದ ಮಾತುಗಳಿಗೆ ಬದ್ಧವಾದ ಮನಃಸ್ಥಿತಿ ರಾಜಕಾರಣಿಗಳಿಗೆ ಸಾಧ್ಯವಾಗಬೇಕಿದೆ.

ಅಹಿಂಸೆಯ ಬದುಕಿನ ಆಯ್ಕೆ ಎಂದರೆ ಉದಾತ್ತ ಮೌಲ್ಯಗಳೊಂದಿಗೆ ನೀತಿಯುತ ಬದುಕಿನ ಆಯ್ಕೆ. ಸಭೆ, ಸಮಾರಂಭಗಳಲ್ಲಿ ಎಂದೂ ದೀರ್ಘ ಭಾಷಣ ಮಾಡದ ಬಾಪು ಥಟ್ಟನೆ ನಗೆಯುಕ್ಕಿಸುವುದನ್ನಂತೂ ತಪ್ಪಿಸುತ್ತಿರಲಿಲ್ಲ. ತಮಗೆ ಅರ್ಪಣೆಯಾದ ಉಡುಗೊರೆ, ಸ್ಮರಣಿಕೆಗಳನ್ನು ಹರಾಜಿಗೆ ಹಾಕಿ, ಬಂದ ಹಣವನ್ನು ಬಡವರಿಗೆ ನೀಡಲು ಅವರು ಆಯೋಜಕರಿಗೆ ಸೂಚಿಸುತ್ತಿದ್ದರು. ಒಮ್ಮೆ ಅವರ ಚಿತ್ರಪಟಗಳನ್ನು ಹರಾಜಿಗಿಡಲಾಗಿತ್ತು. ಒಂದು ಪಟಕ್ಕೆ ₹ 100ರಿಂದ ಕೂಗು ಆರಂಭವಾಗಿ ₹ 125ಕ್ಕೆ ನಿಂತಿತು. 'ಏನು? ಈ ಮುದುಕನ ಚಿತ್ರಪಟಕ್ಕೆ ₹ 125 ಮಾತ್ರವೆ? ಬೇಡಿ ಅದನ್ನು ಬದಿಗಿಡಿ' ಎಂದರಂತೆ ಅವರು. ಪೂರ್ಣಪುರುಷ ವಿನೋದ ಪಟುವಾಗಬಲ್ಲ ಎನ್ನಲು ಇದಕ್ಕೂ ನಿದರ್ಶನ ಬೇಕೆ?

ವಾಚಕರ ವಾಣಿ

ಪಿಂಚಣಿಯಲ್ಲಿ ಅಕ್ರಮ: ಬೇಕು ನಿಗಾ

ಬಹಳಷ್ಟು ವೃದ್ಧರು, ವಿಧವೆಯರು, ಅಂಗವಿಕಲರು ಸರ್ಕಾರ ನೀಡುವ ಪಿಂಚಣಿ ಹಣದಲ್ಲಿ ಜೀವನ ನಡೆಸುತ್ತಿದ್ದಾರೆ. ಆದರೆ ಈಗ ಈ ಪಿಂಚಣಿ ಸೌಲಭ್ಯವನ್ನು ದುರುಪಯೋಗಪಡಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಅದರಲ್ಲಿಯೂ ಹಳ್ಳಿಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. 60 ವರ್ಷದ ಒಳಗಿನವರೂ ಅಕ್ರಮವಾಗಿ ಪಿಂಚಣಿ ಪಡೆಯುತ್ತಿರುವ ನಿದರ್ಶನಗಳಿವೆ. ಚಿಕ್ಕೋಡಿ ತಾಲ್ಲೂಕಿನಲ್ಲಿ ಇಂತಹ ನಿದರ್ಶನಗಳು ಹೇರಳವಾಗಿ ಸಿಗುತ್ತವೆ.

ಅಕ್ರಮವಾಗಿ ಹೀಗೆ ಪಿಂಚಣಿ ಮಾಡಿಕೊಡಲು ಏಜೆಂಟರು ಹುಟ್ಟಿಕೊಂಡಿದ್ದಾರೆ. ಒಂದು ಪಿಂಚಣಿ ಆದೇಶ ಬರುವಂತೆ ಮಾಡಲು ಇವರಿಗೆ ₹ 5,000 ಕೊಡಬೇಕು. ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಹಲವಾರು ಅಧಿಕಾರಿಗಳಿಂದ ಪಿಂಚಣಿ ಅರ್ಜಿಗಳ ಹಂತಹಂತದ ಪರಿಶೀಲನೆಯ ನಂತರವೂ ಇಂತಹ ಅಕ್ರಮ ನಡೆಯುತ್ತಿರುವುದರಿಂದ ಅಧಿಕಾರಿಗಳು ಸಹ ಇದರಲ್ಲಿ ಭಾಗಿಯಾಗಿರಬಹುದು. ಆದಕಾರಣ ಪ್ರತಿಯೊಂದು ಹಳ್ಳಿಯಲ್ಲೂ ಜಾರಿಯಾಗಿರುವ ಪಿಂಚಣಿ ಆದೇಶಗಳ ಮರುಪರಿಶೀಲನೆ ಮಾಡಬೇಕು. ಅವರ ಆಧಾರ್ ಕಾರ್ಡ್ ಮೂಲ ಪ್ರತಿ ಪರಿಶೀಲಿಸಿ, ಅರ್ಹರಿಗೆ ಮಾತ್ರ ಈ ಸೌಲಭ್ಯ ದೊರೆಯುವಂತೆ ಆಗಬೇಕು.

ಪ್ರದೀಪ ಬಿಸಲನಾಯಿಕ, ಚಿಕ್ಕೋಡಿ

ಆಲಿವರ್‌ಗಾದ ಗತಿ ಬಂತೇ?!

ಚಾರ್ಲ್ಸ್ ಡಿಕನ್ಸ್ 19ನೇ ಶತಮಾನದ ಪ್ರಸಿದ್ಧ ಸಾಹಿತಿ. ಸಾಮಾಜಿಕ ಪಿಡುಗುಗಳಾದ ಹಸಿವು, ಬಡತನ, ಕಾರ್ಮಿಕ ಶೋಷಣೆಯಂತಹವು ಆತನ ಕಾದಂಬರಿಗಳ ವಿಷಯ. ಅಂಥ ಕಾದಂಬರಿಗಳಲ್ಲಿ 'ಆಲಿವರ್ ಟ್ವಿಸ್ಟ್' ಕೂಡ ಒಂದು. ಅದರಲ್ಲಿ ಬರುವ ಆಲಿವರ್ ಎಂಬ ಹುಡುಗ ಒಬ್ಬ ಅನಾಥನಾಗಿದ್ದು 'ಪೂರ್ ಹೌಸ್' ಎಂಬ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದ. ಒಂದು ದಿನ ತನಗೆ ಇನ್ನೂ ಸ್ವಲ್ಪ ಊಟ ಕೊಡಿ ಎಂದು ಮಾಸ್ಟರ್ ಅವರನ್ನು ಕೇಳಿದ. ಆತ ಕೂಡಲೇ ಅವನಿಗೆ ಗುದ್ದು ಕೊಟ್ಟು, ನಂತರ ಹಾಸ್ಟೆಲ್‌ನ ಅಧಿಕಾರಿಯಾದ ಬಂಬಲ್‌ನನ್ನು ಕರೆಸಿ, ಆಲಿವರ್‌ನನ್ನು ಹಾಸ್ಟೆಲ್‌ನಿಂದ ಹೊರದಬ್ಬುವಂತೆ ಮಾಡುತ್ತಾನೆ. ಇದೇ ರೀತಿ, ನಮ್ಮ ರಾಜ್ಯದ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯದಲ್ಲಿ ಕಳಪೆ ಊಟದ ವಿರುದ್ಧ ದನಿ ಎತ್ತಿದ 25 ವಿದ್ಯಾರ್ಥಿಗಳು ಆಲಿವರ್‌ನಂತೆ ಹೊರದಬ್ಬಲ್ಪಟ್ಟಿದ್ದಾರೆ.

ಕಲಿಯುವ ವಿದ್ಯಾರ್ಥಿಗಳಿಗೆ ಅಗತ್ಯ ಪೌಷ್ಟಿಕ ಆಹಾರ ಸಿಗುವುದಿಲ್ಲವೆಂದರೆ ಹೇಗೆ? ಸರ್ಕಾರ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಆದರೆ ಅವುಗಳ ಅನುಷ್ಠಾನ ಸರಿಯಾಗಿ ಆಗುತ್ತಿಲ್ಲ ಎಂಬುದು ಈ ಘಟನೆಯಿಂದ ಸ್ಪಷ್ಟವಾಗುತ್ತಿದೆ.

ರಘು ಗಂಕಾರನಹಳ್ಳಿ, ಪುರವರ, ಮಧುಗಿರಿ

ಪರೀಕ್ಷಾ ಕೇಂದ್ರಗಳನ್ನು ಹೆಚ್ಚಿಸಿ

ಹಿಂದಿನ ಎರಡು ತಿಂಗಳುಗಳಲ್ಲಿ ಪೊಲೀಸ್ ನೇಮಕಾತಿ ಪರೀಕ್ಷೆ ಮೂರನೇ ಬಾರಿ ಭಾನುವಾರ ಬೆಂಗಳೂರಿನಲ್ಲಿ ನಡೆಯಿತು. ಒಮ್ಮೆ ಹುಬ್ಬಳ್ಳಿಯಂತಹ ಊರಿನಿಂದ ಬೆಂಗಳೂರಿಗೆ ಬಂದು ಹೋಗಲು ಸಾವಿರ ರೂಪಾಯಿಗಿಂತ ಜಾಸ್ತಿ ಖರ್ಚು ಬರುತ್ತದೆ. ಇದು, ಆರ್ಥಿಕವಾಗಿ ಶಕ್ತರಲ್ಲದ ಕುಟುಂಬದ ಅಭ್ಯರ್ಥಿಗಳಿಗೆ ಹೊರೆ ಎನಿಸುತ್ತದೆ. ಮುಂಬರುವ ಪರೀಕ್ಷೆಗಳನ್ನು ರಾಜ್ಯದಾದ್ಯಂತ ನಡೆಸಲು ಆಗದಿದ್ದರೂ ಬೆಂಗಳೂರಿನ ಜೊತೆಗೆ ಇತರ ಮೂರು-ನಾಲ್ಕು ಪ್ರಮುಖ ನಗರಗಳಲ್ಲಾದರೂ ನಡೆಯುವಂತೆ ಮಾಡಿದರೆ ಪರೀಕ್ಷಾರ್ಥಿಗಳಿಗೆ ಅನುಕೂಲವಾಗುತ್ತದೆ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಕುಟುಂಬ ರಾಜಕೀಯದ ವಿಜೃಂಭಣೆ

ಒಂದು ಕಾಲಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯ ಶಕ್ತಿಯಾಗಿ ಬೆಳೆದ ಜನತಾ ಪರಿವಾರವು ರಾಮಕೃಷ್ಣ ಹೆಗಡೆ, ಎಚ್.ಡಿ.ದೇವೇಗೌಡ, ಜೆ.ಎಚ್.ಪಟೇಲ್, ಎಸ್.ಆರ್. ಬೊಮ್ಮಾಯಿ, ಎಚ್.ಡಿ.ಕುಮಾರಸ್ವಾಮಿ ಅವರಂಥವರನ್ನು ಮುಖ್ಯಮಂತ್ರಿಗಳನ್ನಾಗಿ ರಾಜ್ಯಕ್ಕೆ ಕೊಟ್ಟಿದೆ. ದೇವೇಗೌಡರು ಪ್ರಧಾನಿಯೂ ಆಗಿದ್ದರು. ಅದೇ ಪಕ್ಷವು ಕೆಲವರ ಸ್ವಾರ್ಥ ಕುಟುಂಬ ರಾಜಕೀಯಕ್ಕೆ ಬಲಿಯಾಗಿ 'ವಚನಭ್ರಷ್ಟತೆ'ಗೆ ತುತ್ತಾಗಿ ತನ್ನ ರೆಂಬೆ ಕೊಂಬೆಗಳನ್ನೆಲ್ಲ ಕತ್ತರಿಸಿಕೊಂಡು ಬೊಡ್ಡೆಯನ್ನು ಮಾತ್ರ ಉಳಿಸಿಕೊಂಡಿದೆ.

ಆ ಪಕ್ಷದಲ್ಲಿ ನಡೆಯುತ್ತಿರುವ ಕುಟುಂಬ ರಾಜಕೀಯ ಅಸಹ್ಯ ಹುಟ್ಟಿಸುವಂತಿದೆ. ಒಳ್ಳೆಯ ನೀತಿ, ಸಿದ್ಧಾಂತಗಳನ್ನು ಹೊಂದಿದ್ದ ಈ ಪಕ್ಷವನ್ನು ಸ್ವಾರ್ಥಿಗಳಿಂದ ಬಿಡುಗಡೆಗೊಳಿಸಿ ಮತ್ತೆ ಅದಕ್ಕೆ ಶಕ್ತಿ ತುಂಬಬಲ್ಲ ಧೀರ ನಾಯಕರು ಹುಟ್ಟಿಕೊಳ್ಳಲಿ.

ಶಿವಕುಮಾರ ಬಂಡೋಳಿ, ಹುಣಸಗಿ

ನಮ್ಮವರಿಗೂ ಸಿಗಲಿ ಉತ್ತಮ ಆರೋಗ್ಯ ಯೋಜನೆ

ರಾಜ್ಯದ ಆರೋಗ್ಯ ಯೋಜನೆಯ ವೈಫಲ್ಯವನ್ನು ಪತ್ರಿಕೆಯು ಬಯಲಿಗೆ ಎಳೆದಿರುವುದಕ್ಕೆ (ಪ್ರ.ವಾ., ಜ. 29) ಧನ್ಯವಾದಗಳು. ನಮ್ಮ ರಾಜ್ಯದ ರೋಗಿಗಳು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಪರದಾಡುತ್ತಿದ್ದರೆ, ನೆರೆಯ ಆಂಧ್ರಪ್ರದೇಶದ ರೋಗಿಗಳು ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಗಳನ್ನು ಸಲೀಸಾಗಿ ಪಡೆಯುತ್ತಿದ್ದಾರೆ. ವೈ.ಎಸ್.ಆರ್. ಆರೋಗ್ಯಶ್ರೀ ಯೋಜನೆ ಅನ್ವಯ ಎಚ್.ಸಿ.ಜಿ ಕ್ಯಾನ್ಸರ್ ಆಸ್ಪತ್ರೆ, ಎಂ.ಎಸ್. ರಾಮಯ್ಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸೇರಿದಂತೆ ಬೆಂಗಳೂರಿನ ಏಳು ದೊಡ್ಡ ಖಾಸಗಿ ಆಸ್ಪತ್ರೆಗಳಲ್ಲಿ ಆಂಧ್ರ ಸರ್ಕಾರ ಹೆಲ್ಪ್ ಡೆಸ್ಕುಗಳನ್ನು ಸ್ಥಾಪಿಸಿದೆ. ಅಲ್ಲಿ ಆಂಧ್ರ ಆರೋಗ್ಯ ಇಲಾಖೆಯ ಕಿರಿಯ ಅಧಿಕಾರಿಗಳನ್ನು ನೇಮಿಸಲಾಗಿದೆ. ಅವರು ತಮ್ಮ ರಾಜ್ಯದಿಂದ ಬರುವ ರೋಗಿಗಳಿಗೆ ಅಗತ್ಯ ಕಾಗದ ಪತ್ರ ಮತ್ತು ದಾಖಲೆಗಳನ್ನು ಸಿದ್ಧಪಡಿಸಿ ಚಿಕಿತ್ಸೆಗೆ ಸೂಕ್ತ ವ್ಯವಸ್ಥೆ ಮಾಡುತ್ತಾರೆ.

ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಆಂಧ್ರ ಮುಖ್ಯಮಂತ್ರಿ ವೈ.ಎಸ್.ಜಗನ್ಮೋಹನ ರೆಡ್ಡಿ ನಿಯಮಿತವಾಗಿ ವರದಿಗಳನ್ನು ತರಿಸಿಕೊಳ್ಳುತ್ತಾರಂತೆ. ಆಸ್ಪತ್ರೆಯೊಂದರಲ್ಲಿ ನಾನು 'ಕರ್ನಾಟಕದ ಆರೋಗ್ಯ ಕಾರ್ಡ್ ಹೊಂದಿರುವವರಿಗೂ ಇದೇ ರೀತಿ ಸೇವೆ ನೀಡುವಿರಾ?' ಎಂದು ವಿಚಾರಿಸಿದೆ. 'ಕರ್ನಾಟಕ ಆರೋಗ್ಯ ಯೋಜನೆ ಜಾರಿ ಬಗ್ಗೆ ಇಲ್ಲಿನ ಸರ್ಕಾರದವರು ನಮ್ಮನ್ನು ಸಂಪರ್ಕಿಸಿಲ್ಲ' ಎಂದು ಆಸ್ಪತ್ರೆಯ ಅಧಿಕಾರಿಗಳು ಸ್ಪಷ್ಟಪಡಿಸಿದರು. ನಮ್ಮ ಮಂತ್ರಿಗಳು ಮತ್ತು ಅಧಿಕಾರಿಗಳು ಈ ವಿಷಯದಲ್ಲಿ ನೆರೆಯ ರಾಜ್ಯಗಳನ್ನಾದರೂ ನೋಡಿ ಕಲಿಯಲಿ

ಸಿ.ರುದ್ರಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಿಳೆಯೇ ಮನೆಯೊಡತಿ

ಮನೆ ಮತ್ತು ಜಮೀನಿನ ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ–5. ಈ ಮಾಲೀಕತ್ವವು ಪ್ರತ್ಯೇಕ ಮಾಲೀಕತ್ವವೂ ಹೌದು, ಕುಟುಂಬದ ಇತರ ಸದಸ್ಯರೊಂದಿಗಿನ ಜಂಟಿ ಮಾಲೀಕತ್ವವೂ ಹೌದು. ಮಹಿಳೆಯರಿಗೆ ಮನೆ ಮತ್ತು ಜಮೀನಿನ ಮಾಲೀಕತ್ವ ನೀಡುವ ಹಾಗೂ ಮಹಿಳೆಯರೊಂದಿಗೆ ಜಂಟಿ ಮಾಲೀಕತ್ವ ಹಂಚಿಕೊಳ್ಳುವ ಪರಿಪಾಟ ಗ್ರಾಮೀಣ ಪ್ರದೇಶ ಹಾಗೂ ಕೂಡು ಕುಟುಂಬಗಳಲ್ಲಿ ಹೆಚ್ಚು

ನಗರ ಪ್ರದೇಶದಲ್ಲಿ ಕಡಿಮೆ

62.8% ಮನೆ ಮಾಲೀಕತ್ವ ಹೊಂದಿರುವ ನಗರ ಪ್ರದೇಶದ ಮಹಿಳೆಯರ ಪ್ರಮಾಣ

48% ಜಮೀನಿನ ಮಾಲೀಕತ್ವ ಹೊಂದಿರುವ ನಗರ ಪ್ರದೇಶದ ಮಹಿಳೆಯರ ಪ್ರಮಾಣ

68.5% ಮನೆ ಮಾಲೀಕತ್ವ ಹೊಂದಿರುವ ಗ್ರಾಮೀಣ ಪ್ರದೇಶದ ಮಹಿಳೆಯರ ಪ್ರಮಾಣ

57.6% ಜಮೀನಿನ ಮಾಲೀಕತ್ವ ಹೊಂದಿರುವ ಗ್ರಾಮೀಣ ಪ್ರದೇಶದ ಮಹಿಳೆಯರ ಪ್ರಮಾಣ

- ನಗರ ಪ್ರದೇಶದ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಮನೆಯ ಮಾಲೀಕತ್ವ ಹೊಂದಿರುವವರ ಪ್ರಮಾಣ 5.7 ಶೇಕಡಾವಾರು ಅಂಶಗಳಷ್ಟು ಹೆಚ್ಚು
- ನಗರದ ಮಹಿಳೆಯರಿಗೆ ಹೋಲಿಸಿದರೆ, ಮನೆ ಹಾಗೂ ಜಮೀನಿನ ಮಾಲೀಕತ್ವ ಹೊಂದಿರುವ ಗ್ರಾಮೀಣ ಪ್ರದೇಶದ ಮಹಿಳೆಯರ ಪ್ರಮಾಣವೇ ಹೆಚ್ಚು

ಕೂಡು ಕುಟುಂಬಗಳಲ್ಲಿ ಮಹಿಳೆಯರಿಗೆ ಹೆಚ್ಚು ಪ್ರಾಶಸ್ತ್ಯ

64.1% ಮನೆ ಮಾಲೀಕತ್ವ ಹೊಂದಿರುವ ಸಣ್ಣ ಕುಟುಂಬಗಳ ಮಹಿಳೆಯರ ಪ್ರಮಾಣ

51.4% ಜಮೀನಿನ ಮಾಲೀಕತ್ವ ಹೊಂದಿರುವ ಸಣ್ಣ ಕುಟುಂಬಗಳ ಮಹಿಳೆಯರ ಪ್ರಮಾಣ

68.1% ಮನೆ ಮಾಲೀಕತ್ವ ಹೊಂದಿರುವ ಕೂಡು ಕುಟುಂಬಗಳ ಮಹಿಳೆಯರ ಪ್ರಮಾಣ

55.8% ಜಮೀನಿನ ಮಾಲೀಕತ್ವ ಹೊಂದಿರುವ ಕೂಡು ಕುಟುಂಬಗಳ ಮಹಿಳೆಯರ ಪ್ರಮಾಣ

ಕ್ರೈಸ್ತರಲ್ಲಿ ಹೆಚ್ಚು

ರಾಜ್ಯದ ಒಟ್ಟು ಹಿಂದೂ ಮಹಿಳೆಯರಲ್ಲಿ ಮನೆ ಮಾಲೀಕತ್ವ ಹೊಂದಿರುವವರ ಪ್ರಮಾಣ ಶೇ 67ರಷ್ಟು. ಹಿಂದೂಗಳಿಗೆ ಹೋಲಿಸಿದರೆ, ಮನೆಯ ಮಾಲೀಕತ್ವ ಹೊಂದಿರುವ ಮುಸ್ಲಿಂ ಮಹಿಳೆಯರ ಪ್ರಮಾಣ ಸ್ವಲ್ಪ ಕಡಿಮೆ ಇದೆ. ಆದರೆ ಹಿಂದೂ ಮತ್ತು ಮುಸ್ಲಿಂ ಮಹಿಳೆಯರಿಗೆ ಹೋಲಿಸಿದರೆ, ಮನೆ ಮಾಲೀಕತ್ವ ಹೊಂದಿರುವ ಕ್ರೈಸ್ತ ಧರ್ಮದ ಮಹಿಳೆಯರ ಪ್ರಮಾಣ ಹೆಚ್ಚು.

67% ಮನೆ ಮಾಲೀಕತ್ವ ಹೊಂದಿರುವ ಹಿಂದೂ ಮಹಿಳೆಯರ ಪ್ರಮಾಣ

61.7% ಮನೆ ಮಾಲೀಕತ್ವ ಹೊಂದಿರುವ ಮುಸ್ಲಿಂ ಮಹಿಳೆಯರ ಪ್ರಮಾಣ

70.2% ಮನೆ ಮಾಲೀಕತ್ವ ಹೊಂದಿರುವ ಕ್ರೈಸ್ತ ಮಹಿಳೆಯರ ಪ್ರಮಾಣ

ಮೂರನೇ ಒಂದರಷ್ಟು ಮಂದಿಗೆ ಸ್ವಂತ ಮನೆ ಇಲ್ಲ

ಈ ವರದಿಯ ದತ್ತಾಂಶಗಳ ಪ್ರಕಾರ ರಾಜ್ಯದ ಒಟ್ಟು ಮಹಿಳೆಯರಲ್ಲಿ ಮನೆಯ ಮಾಲೀಕತ್ವ ಇಲ್ಲದೇ ಇರುವ ಮಹಿಳೆಯರ ಪ್ರಮಾಣ ಶೇ 33.8ರಷ್ಟಿದೆ. ಅದೇ ರೀತಿ ಮನೆಯ ಮಾಲೀಕತ್ವ ಇಲ್ಲದ ಪುರುಷರ ಪ್ರಮಾಣವು ಶೇ 32.1ರಷ್ಟಿದೆ. ಒಟ್ಟಾರೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಮನೆಯ ಮಾಲೀಕತ್ವ ಇಲ್ಲದೇ ಇರುವ ಜನರ ಪ್ರಮಾಣ ಶೇ 33ರಷ್ಟಿದೆ. ಅಂದರೆ ರಾಜ್ಯದ ಮೂರನೇ ಒಂದರಷ್ಟು ಜನರು ಸ್ವಂತ ಮನೆ ಹೊಂದಿಲ್ಲ ಎಂಬುದರ ಮೇಲೆ ಈ ದತ್ತಾಂಶಗಳು ಬೆಳಕು ಚೆಲ್ಲುತ್ತವೆ.

2014–15ನೇ ಸಾಲಿಗೆ ಹೋಲಿಸಿದರೆ, ಮನೆ ಮಾಲೀಕತ್ವದ ವಿಚಾರದಲ್ಲಿ ರಾಜ್ಯವು 2019–21ರ ವೇಳೆಗೆ ಗಮನಾರ್ಹ ಪ್ರಗತಿ ಸಾಧಿಸಿದೆ. 2014–15ರ ಸಾಲಿನಲ್ಲಿ ಮನೆ ಮಾಲೀಕತ್ವ ಇಲ್ಲದ ಜನರ ಪ್ರಮಾಣ ಶೇ 57.5ರಷ್ಟು ಇತ್ತು. 2019–21ರ ವೇಳೆಗೆ ಇದು ಶೇ 33ರಷ್ಟಕ್ಕೆ ಇಳಿಕೆಯಾಗಿದೆ.

ಜಮೀನಿನ ಮಾಲೀಕತ್ವದ ವಿಚಾರದಲ್ಲಿ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಜಮೀನಿನ ಮಾಲೀಕತ್ವ ಹೊಂದಿರುವವರ ಪ್ರಮಾಣ ಶೇ 52.4ರಷ್ಟಿದೆ. ಉಳಿದ ಶೇ 47.6ರಷ್ಟು ಮಂದಿ ಯಾವುದೇ ರೀತಿಯ ಜಮೀನಿನ ಮಾಲೀಕತ್ವ ಹೊಂದಿಲ್ಲ. 2014–15ರಲ್ಲಿ ಜಮೀನಿನ ಮಾಲೀಕತ್ವ ಇಲ್ಲದ ಜನರ ಪ್ರಮಾಣ ಶೇ 54.15ರಷ್ಟಿತ್ತು. ಈಗ ಈ ಪ್ರಮಾಣವು ಶೇ 47.6ಕ್ಕೆ ಇಳಿಕೆಯಾಗಿದೆ.

ಲಡಾಖ್, ಅರುಣಾಚಲ ಪ್ರದೇಶ ಮುಂದೆ; ತ್ರಿಪುರಾ ಹಿಂದೆ

ಸ್ವತಂತ್ರವಾಗಿ ಅಥವಾ ಜಂಟಿಯಾಗಿ ಮನೆ ಮತ್ತು ಜಮೀನಿನ ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣವು ದೇಶದ ವಿವಿಧ ರಾಜ್ಯಗಳಲ್ಲಿ ಒಂದೇ ತೆರನಾಗಿಲ್ಲ. ಈ ಎರಡೂ ರೀತಿಯ ಸೊತ್ತುಗಳ ಮಾಲೀಕತ್ವ ಹೊಂದಿರುವ ಮಹಿಳೆಯರ ಸರಾಸರಿ ಪ್ರಮಾಣವು ಶೇ 17.2ರಿಂದ ಶೇ 72.2ರ ನಡುವೆ ಹಂಚಿಕೆಯಾಗಿದೆ. ಅರುಣಾಚಲ ಪ್ರದೇಶ ಮತ್ತು ಲಡಾಖ್ ಮುಂಚೂಣಿಯಲ್ಲಿದ್ದರೆ, ತ್ರಿಪುರಾ ಕೊನೆಯ ಸ್ಥಾನದಲ್ಲಿದೆ.

ರಾಜ್ಯಗಳ ಪೈಕಿ, ಮನೆ ಹಾಗೂ ಜಮೀನು ಹಕ್ಕುಪತ್ರ ಹೊಂದಿರುವ ಮಹಿಳೆಯರ ಪ್ರಮಾಣ ಅರುಣಾಚಲ ಪ್ರದೇಶದಲ್ಲಿ (ಶೇ 70.2) ಹೆಚ್ಚಿದೆ. ನಂತರದ ಸ್ಥಾನದಲ್ಲಿ ಕರ್ನಾಟಕ, ತೆಲಂಗಾಣ, ಮೇಘಾಲಯ, ಜಾರ್ಖಂಡ್, ಹಾಗೂ ಪಂಜಾಬ್ ರಾಜ್ಯಗಳಿವೆ. ಈ ರಾಜ್ಯಗಳಲ್ಲಿ ಶೇ 60ಕ್ಕಿಂತಲೂ ಹೆಚ್ಚು ಮಹಿಳೆಯರ ಕೈಯಲ್ಲಿ ಆಸ್ತಿಯ ಒಡೆತನವಿದೆ.

ಕೇಂದ್ರಾಡಳಿತ ಪ್ರದೇಶಗಳ ಪೈಕಿ ಲಡಾಖ್ ಮೊದಲ ಸ್ಥಾನದಲ್ಲಿದೆ. ಇಲ್ಲಿನ ಶೇ 72.2ರಷ್ಟು ಮಹಿಳೆಯರು ಆಸ್ತಿಗಳ ಮಾಲೀಕರಾಗಿದ್ದಾರೆ. ಪಕ್ಕದ ಜಮ್ಮು ಕಾಶ್ಮೀರದಲ್ಲಿ ಈ ಪ್ರಮಾಣ ಶೇ 57.3ರಷ್ಟಿದೆ. ಕೇಂದ್ರಾಡಳಿತ ಪ್ರದೇಶ ದೆಹಲಿಯಲ್ಲಿ ಶೇ 22.7ರಷ್ಟು ಮಹಿಳೆಯರು ಮಾತ್ರ ಆಸ್ತಿ ಒಡೆತನ ಹೊಂದಿದ್ದು, ಕೊನೆಯಲ್ಲಿ ಗುರುತಿಸಿಕೊಂಡಿದೆ.

ಈಶಾನ್ಯ ರಾಜ್ಯಗಳ ಪೈಕಿ ಅರುಣಾಚಲ ಪ್ರದೇಶ, ಮೇಘಾಲಯ ಹಾಗೂ ಸಿಕ್ಕಿಂ ಗಮನಾರ್ಹ ಸ್ಥಿತಿಯಲ್ಲಿದ್ದರೆ, ಉಳಿದ ನಾಲ್ಕು ರಾಜ್ಯಗಳು ಹಿಂದೆ ಬಿದ್ದಿವೆ. ವಿಸ್ತೀರ್ಣದಲ್ಲಿ ದೊಡ್ಡವು ಎಂದು ಗುರುತಿಸಲಾಗಿರುವ ರಾಜಸ್ಥಾನ, ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶ ರಾಜ್ಯಗಳ ಪೈಕಿ ಉತ್ತರ ಪ್ರದೇಶದ ಶೇ 50ಕ್ಕೂ ಹೆಚ್ಚು ಮಹಿಳೆಯರು ಮಾತ್ರ ಮನೆ, ಜಮೀನಿನ ಒಡೆತನ ಹೊಂದಿದ್ದಾರೆ. ಉಳಿದ ಮೂರು ರಾಜ್ಯಗಳಿಗೆ ಶೇ 40ರ ಸರಾಸರಿಯನ್ನೂ ದಾಟಲು ಸಾಧ್ಯವಾಗಿಲ್ಲ.

ದಕ್ಷಿಣ ಭಾರತದಲ್ಲಿ ಕರ್ನಾಟಕ (ಶೇ 67.6), ತೆಲಂಗಾಣ (ಶೇ 66.6) ಮುಂಚೂಣಿಯಲ್ಲಿವೆ. ತಮಿಳುನಾಡು ಹಾಗೂ ಆಂಧ್ರ ಪ್ರದೇಶ ಬಹುತೇಕ ಸಮಾನ ಪಾಲು ಹೊಂದಿದ್ದರೂ, ಶೇ 50ರ ಗಡಿಯನ್ನು ಮೀರಲು ಸಾಧ್ಯವಾಗಿಲ್ಲ. ಕೇರಳದ ಶೇ 27ರಷ್ಟು ಮಹಿಳೆಯರು ಮಾತ್ರ ಆಸ್ತಿಯ ಮಾಲೀಕರಾಗಿದ್ದಾರೆ. ಪುಟ್ಟ ರಾಜ್ಯ ಗೋವಾದ ಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ ಎಂದು ದತ್ತಾಂಶಗಳು ಹೇಳುತ್ತವೆ.

ವಿವಿಧ ರಾಜ್ಯಗಳಲ್ಲಿ ಮಹಿಳೆಯರ ಮನೆ–ಜಮೀನು ಮಾಲೀಕತ್ವ

(ಶೇಕಡಾವಾರು ಪ್ರಮಾಣದಲ್ಲಿ)



ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ–4 ಮತ್ತು 5
ಪ್ರಜಾವಾಣಿ ಗ್ರಾಫಿಕ್ಸ್

ಸಿನಿ ಬಿಟ್ಸ್

‘ರೆಡ್‌ರಮ್’ನಲ್ಲಿ ಮಧುರಾ

ಕನ್ನಡ ಚಿತ್ರರಂಗಕ್ಕೆ ಬಂದಿದ್ದಾರೆ ಮಲೆನಾಡಿನ ಮತ್ತೊಬ್ಬ ಕುವರಿ. ಕುಶಾಲನಗರದ ಮಧುರಾಗೌಡ ಈಗ ಬೆಳ್ಳಿತೆರೆ ಮೇಲೆ ಮಿಂಚಲು ಸಜ್ಜಾಗಿದ್ದಾರೆ.



ಮಧುರಾಗೌಡ

ರೆಡ್‌ರಮ್ ಅವರು ನಟಿಸುತ್ತಿರುವ ಚಿತ್ರ. ಹೊಸ ಸುದ್ದಿ ಏನೆಂದರೆ ಮಧುರಾ ಅವರಿಗೆ ಬಹುತಾರಾಗಣದ ಚಿತ್ರವೊಂದರಲ್ಲಿಯೂ ಅವಕಾಶ ಬಂದಿದೆಯಂತೆ. ಚಿತ್ರಕ್ಕೆ ಇನ್ನೂ ಹೆಸರಿಡಬೇಕಿದೆ. ಜೊತೆಗೆ ಹೊಸ ಚಿತ್ರಗಳ ಕಥೆಗಳನ್ನೂ ಕೇಳುತ್ತಿದ್ದಾರೆ ಅವರು.

ಮಧುರಾ ಅವರಿಗೆ ಗ್ಲಾಮರ್ ಲೋಕ ಹೊಸದಲ್ಲ. ಮಾಡೆಲಿಂಗ್ ಹಾಗೂ ಅಭಿನಯ ಕ್ಷೇತ್ರದಲ್ಲಿ ತರಬೇತಿ ಪಡೆದಿದ್ದಾರೆ. ಕೌಟಿಲ್ಯ ಸಿನಿಮಾಸ್ ಹಾಗೂ ಹನಿ ಚೌಧರಿ ಫಿಲಂಸ್ ಲಾಂಛನದ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ರೆಡ್‌ರಮ್ ಚಿತ್ರ ಅವರ ನಟನಾ ಸಾಮರ್ಥ್ಯ ತೋರಿಸಲು ವೇದಿಕೆ ಕೊಟ್ಟಿದೆ.

‘ರೂಪಾಯಿ’ಗೆ ಖಾರಾಬಾತ್

ಕೃಷಿ ತಾಪಂಡ ವಿಜಯ್ ಜಗದಾಲೆ

‘ಖಾರಾಬಾತ್...’ ಈ ಸಾಲನ್ನೊಳಗೊಂಡ ಹಾಡು ‘ರೂಪಾಯಿ’ ಚಿತ್ರ ಸೇರಿದೆ. ಈಗ ‘ರೂಪಾಯಿ’ಗೆ ಖಾರಾಬಾತ್ ಅನ್ನುವುದು ಸಿನಿಮಂದಿಯ ಮಾತು. ಚಿತ್ರದ ನಿರ್ದೇಶಕ, ನಾಯಕ ವಿಜಯ್ ಜಗದಾಲೆ ಬರೆದ ಹಾಡಿಗೆ ಸುಪ್ರಿಯಾ ರಾಮ್ ದನಿಯಾಗಿದ್ದಾರೆ. ಆನಂದ್ ವಿಕ್ರಮ್‌ರಾಜ್ ಸಂಗೀತ ನೀಡಿದ್ದಾರೆ. ಆನಂದ್ ಆಡಿಯೋದ ಯುಟ್ಯೂಬ್ ಚಾನೆಲ್‌ನಲ್ಲಿ ಈ ಹಾಡು ಬಿಡುಗಡೆಯಾಗಿದೆ.

ಕೃಷಿ ತಾಪಂಡ, ಚಂದನಾ ರಾಘವೇಂದ್ರ, ಮೈತ್ರಿ ಜಗದೀಶ್, ರಾಮ್ ಚಂದನ್, ಪ್ರಮೋದ್ ಶೆಟ್ಟಿ, ಅನಿಲ್ ಕುಮಾರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ಚಿತ್ರದ ಮೋಷನ್ ಪೋಸ್ಟರನ್ನು ಡಾಲಿ ಧನಂಜಯ ಬಿಡುಗಡೆ ಮಾಡಿದ್ದರು.

ಚಿತ್ರದಲ್ಲೇನಿರಬಹುದು?: ‘ರೂಪಾಯಿ’ ಮಹತ್ವ ಸಾರುವ ಈ ಚಿತ್ರದಲ್ಲಿ, ಕಾಮಿಡಿ, ಸೆಂಟಿಮೆಂಟ್... ಹೀಗೆ ಎಲ್ಲಾ ಅಂಶಗಳು ಇವೆ. ಫೆ. 1ರಂದು ಟ್ರೇಲರ್ ಬಿಡುಗಡೆ ಆಗಲಿದೆ. ಫೆಬ್ರವರಿ 10ರಂದು ಚಿತ್ರ ತೆರೆಗೆ ಬರಲಿದೆ ಎಂಬುದು ಚಿತ್ರತಂಡದ ಮಾಹಿತಿ.

ವಿವಿಧ್ ಸಿನಿಮಾಸ್ ಲಾಂಛನದಲ್ಲಿ ಮಂಜುನಾಥ್ ಎಂ., ಹರೀಶ್ ಬಿ.ಕೆ. ಮತ್ತು ವಿನೋದ್ ಎನ್. ಈ ಚಿತ್ರವನ್ನು ನಿರ್ಮಿಸಿದ್ದಾರೆ. ಆರ್.ಡಿ. ನಾಗಾರ್ಜುನ ಛಾಯಾಗ್ರಹಣ ಹಾಗೂ ಶಿವರಾಜ್ ಮೇಹು ಸಂಕಲನವಿರುವ ಈ ಚಿತ್ರದ ಕಾರ್ಯಕಾರಿ ನಿರ್ಮಾಪಕರು ಸುನಿವಿನಿ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ನಡೆದಿದ್ದ ಗೋಧ್ರಾ ಹಾಗೂ ಗೋಧ್ರೋತ್ತರ ಹತ್ಯಾಕಾಂಡದ ವಿಷಯವನ್ನು ಒಳಗೊಂಡಿರುವ ಸಾಕ್ಷ್ಯಚಿತ್ರವನ್ನು ನಿರ್ಮಿಸಿರುವ ಬಿಬಿಸಿ ವಾಹಿನಿ ವಿರುದ್ಧ ದೇಶದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಲಂಡನ್‌ನಲ್ಲಿಯೂ ಇಂತಹ ಪ್ರತಿಭಟನೆ ನಡೆದಿದೆ ಎಂದು ಹೇಳಲಾಗುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ‘ಭಾರತ ಹಾಗೂ ಮೋದಿ ಅವರ ವಿರುದ್ಧ ದುರುದ್ದೇಶದ ಸಂಗತಿ ಹರಡುತ್ತಿರುವ ಸಾಕ್ಷ್ಯಚಿತ್ರದ ವಿರುದ್ಧ ಲಂಡನ್‌ನಲ್ಲಿ ಪ್ರತಿಭಟನೆ ಆರಂಭವಾಗಿದೆ. ಭಾರತೀಯರೇ ಎಲ್ಲಿದ್ದೀರಾ?’ ಎಂದು ‘ದೇಶ್‌ಭಕ್ತ್’ ಎಂಬ ಹೆಸರಿನ ಟ್ವಿಟರ್ ಖಾತೆಯಲ್ಲಿ ಪ್ರಶ್ನಿಸಲಾಗಿದೆ. ಆದರೆ ಇದು ದಾರಿ ತಪ್ಪಿಸುವ ಮಾಹಿತಿ.

ಇದೇ ಜನವರಿ 21ರಂದು ಲಂಡನ್‌ನ ಬಿಬಿಸಿ ಕೇಂದ್ರ ಕಚೇರಿ ಎದುರು ಪ್ರತಿಭಟನೆ ನಡೆದಿದೆ. ಆದರೆ, ಅದು ಮೋದಿ ಅವರನ್ನು ಕುರಿತ ಸಾಕ್ಷ್ಯಚಿತ್ರದ ವಿರುದ್ಧ ಅಲ್ಲ ಎಂದು ‘ಇಂಡಿಯಾ ಟುಡೇ’ ವರದಿ ಮಾಡಿದೆ. ಕೋವಿಡ್ ತಡೆ ಲಸಿಕೆಗಳಿಂದ ಸಾವು ಹಾಗೂ ತೊಂದರೆ ಉಂಟಾಗಿದ್ದರೂ, ಈ ಬಗ್ಗೆ ಮಾಧ್ಯಮಗಳು ತನಿಖೆಗೆ ಮುಂದಾಗುತ್ತಿಲ್ಲ ಎಂದು ಆರೋಪಿಸಿ, ಬಿಬಿಸಿ ಸೇರಿದಂತೆ ವಿವಿಧ ಸುದ್ದಿ ಮಾಧ್ಯಮಗಳ ನಡೆಯನ್ನು ಖಂಡಿಸಿ ಜನರು ಪ್ರತಿಭಟನೆ ನಡೆಸಿದ್ದರು. ಈ ಪ್ರತಿಭಟನೆಯ ವಿಡಿಯೊವನ್ನೇ, ಮೋದಿ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರದ ವಿರುದ್ಧ ನಡೆದ ಪ್ರತಿಭಟನೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ‘ಇಂಡಿಯಾ ಟುಡೇ’ ಸ್ಪಷ್ಟಪಡಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮತಿಯ ಪರಿಪಕ್ವತೆ

ಬರಿಭಕ್ತಿ ಬರಿಕರ್ಮ ಬರಿತರ್ಕ ದೊರಕಿಸದು |
ಪರಮಾತ್ಮದರ್ಶನವ; ಬೇಕದಕೆ ತಪಸು ||
ಪರಿಪೂರ್ಣ ಜೀವನಾನುಭವತಾಪದಿ ಮತಿಯು |
ಪರಿಪಕ್ವವಾಗಲದು – ಮಂಕುತಿಮ್ಮ || 810 ||

ಪದ-ಅರ್ಥ: ಜೀವನಾನುಭವತಾಪದಿ = ಜೀವನ + ಅನುಭವ + ತಾಪದಿ, ಮತಿಯು = ಬುದ್ಧಿಯು, ಪರಿಪಕ್ವವಾಗಲದು = ಪರಿಪಕ್ವವು + ಆಗಲು + ಅದು.

ವಾಚ್ಯಾರ್ಥ: ಬರಿಭಕ್ತಿ, ಬರಿ ಕರ್ಮ ಅಥವಾ ಬರಿಯ ತರ್ಕದಿಂದ ಪರಮಾತ್ಮದರ್ಶನ ದೊರಕಲಾರದು. ಅದಕ್ಕೆ ತಪಸ್ಸು ಬೇಕು. ಪರಿಪೂರ್ಣ ಜೀವನದ ಅನುಭವದ ಬೆಂಕಿಯಲ್ಲಿ ಬೆಂದಾಗ ಬುದ್ಧಿ ಪರಿಪಕ್ವವಾಗುತ್ತದೆ.

ವಿವರಣೆ: ಹಿಂದೂ ಚಿಂತನೆಯಲ್ಲಿ, ಪರಸತ್ವದ ಸಾಕ್ಷಾತ್ಕಾರಕ್ಕೆ, ಮೋಕ್ಷಕ್ಕೆ, ಮೂರು ಮಾರ್ಗಗಳು. ಭಕ್ತಿಯೋಗ, ಕರ್ಮಯೋಗ ಮತ್ತು ಜ್ಞಾನಯೋಗ ಇವೇ ಮೂರು ದಾರಿಗಳು. ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಒಂದು ಮಾತಿದೆ –

ಯೋ ಬುದ್ಧೇ ಪರತಸ್ತು ಸ: ||

ಹೀಗೆಂದರೆ, ಪರವಸ್ತುವು ಬುದ್ಧಿಗಿಂತ ಮೇಲ್ಮಟ್ಟಕ್ಕಿರುವುದು, ಅದು ಬುದ್ಧಿಯಿಂದ ಅತೀತವಾದದ್ದು. ಹಾಗಾದರೆ ಪರವಸ್ತು ನಮ್ಮ ಬುದ್ಧಿಗೆ ನಿಲುಕದೆ ಹೋದರೆ ಅದು ನಮ್ಮ ಅನುಭವಕ್ಕೆ ಹೇಗೆ ದಕ್ಕೀತು? ಪರತತ್ವ ಚಿಂತನೆ ಅನುಭವ ಪ್ರಧಾನವಾದದ್ದು. ಅದಕ್ಕೆ ಬುದ್ಧಿ ಬೇಕೇ ಬೇಕು. ಆದರೆ ಅದರ ಜೊತೆಗೆ ಭಕ್ತಿಯೂ ಬೇಕು ಮತ್ತು ಕರ್ಮಸಾಧನೆಯೂ ಬೇಕು. ಯಾವುದೇ ಒಂದರಿಂದ ಸಂಪೂರ್ಣ ದರ್ಶನ ಸಾಧ್ಯವಿಲ್ಲ. ಬೆಟ್ಟದ ಮೇಲಿರುವ ದೇವಸ್ಥಾನದ ವಿಗ್ರಹ ದರ್ಶನದ ಉದಾಹರಣೆ ತೆಗೆದುಕೊಳ್ಳೋಣ. ಮೊದಲು, ದೇವಸ್ಥಾನ ಎಷ್ಟು ದೂರ, ಅದನ್ನು ಹತ್ತಲು ನನ್ನಿಂದಾದೀತೇ? ಅದಕ್ಕೆ ಸಮಯ ಎಷ್ಟು ಬೇಕಾದೀತು? ದಾರಿಯಲ್ಲಿ ಊಟ, ತಿಂಡಿ, ವಿಶ್ರಾಂತಿಗಳಿಗೆ ಅವಕಾಶವಿದೆಯೆ? ಹೀಗೆ ಮೊದಲು ಬುದ್ಧಿ ತರ್ಕಮಾಡಿ ವಿಷಯ ಸಂಗ್ರಹಿಸುತ್ತದೆ. ಕೇವಲ ಅದರಿಂದ ದೇವತಾದರ್ಶನ ಸಾಧ್ಯವಿಲ್ಲ. ಮುಂದಿನ ಹೆಜ್ಜೆ, ಬೆಟ್ಟ ಹತ್ತಬೇಕು. ಅದು ದೈಹಿಕವಾದ ಕರ್ಮ. ಆ ಕರ್ಮವಿಲ್ಲದೆ ದೇವಸ್ಥಾನ ತಲುಪುವುದು ಅಸಾಧ್ಯ. ಆದರೆ ಈ ಬೆಟ್ಟ ಹತ್ತುವ ಚಿಂತನೆಯ ಹಿಂದಿರುವುದು, ದೇವದರ್ಶನದ ಬಯಕೆ- ಭಕ್ತಿ. ಈ ಭಾವುಕತೆಯೇ ಬಹಳ ಮಟ್ಟಿಗೆ ನಮ್ಮ ಬದುಕನ್ನು ಮುನ್ನಡೆಸುವ ಇಂಧನ, ವಿವೇಚನೆಯಲ್ಲಿ. ಹೀಗೆ ಭಕ್ತಿ, ಕರ್ಮ, ಜ್ಞಾನಗಳೆಂಬ ಸಾಧನೆಗಳಿಂದ ತಪಸ್ಸು ಮಾಡಿದಾಗ ಪರಸತ್ವದರ್ಶನವಾದೀತು. ಜೀವನದ ಅನುಭವಗಳ ಬೆಂಕಿಯಲ್ಲಿ ಬೆಂದಾಗ ಬುದ್ಧಿ ಪಕ್ವವಾಗುತ್ತದೆ. ಇದನ್ನು ಮುದ್ದುರಾಮ ಸುಂದರವಾಗಿ ಹೇಳುತ್ತಾನೆ. ಬಿತ್ತಿ ಭಕ್ತಿಯ ಬೀಜ, ಶ್ರದ್ಧೆ ನೇಗಿಲ ಬಳಸಿ ಉಳುಮೆ ನೀ ಮಾಡುತಿರು ದುಡಿಮೆ ಎತ್ತಿಂದ ತೋರು ಸರಿ ಆಸಕ್ತಿ ಮುಕ್ತಿಫಲ ಬೆಳೆಸಿನಲಿ ಯೋಗಿ ಪುಂಗವನಾಗು – ಮುದ್ದುರಾಮ ಭಕ್ತಿಯ ಬೀಜ, ಶ್ರದ್ಧೆಯ ಕರ್ಮ, ಸರಿಯಾದ ಆಸಕ್ತಿಯಿಂದ ಮುಕ್ತಿಫಲ. ಅದನ್ನು ಪಡೆಯುವುದೊಂದು ತಪಸ್ಸು. ಆ ತಪಸ್ಸೇ ಬದುಕನ್ನು ಮತ್ತು ಬುದ್ಧಿಯನ್ನು ಪಕ್ವಮಾಡುವುದು. ಅದೇ ಪರಮಾತ್ಮದರ್ಶನಕ್ಕೆ ರಹದಾರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 30, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ನವಮಿ ಗಂ. 10-12 ನಕ್ಷತ್ರ: ಕೃತ್ತಿಕಾ ಗಂ. 22-15 ಯೋಗ: ಶುಕ್ಲ ಗಂ. 10-48, ಕರಣ: ಕೌಲವ ಗಂ. 10-12, ಮಕರ ಮಾಸದ 16 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30 –09-00, ಸೂರ್ಯೋದಯ : 07-01 ಸೂರ್ಯಾಸ್ತ : 06-27
ಮುಸ್ಲಿಂ ದಿನಾಂಕ : 07 ರಜಬ್
ದಿನ ವಿಶೇಷ : ಮಧ್ವ ನವಮಿ, ಹುತಾತ್ಮರ ದಿನ (ಮಹಾತ್ಮ ಗಾಂಧೀಜಿಯವರ ಸ್ಮರಣದಿನ)
ಅದೃಷ್ಟ ಸಂಖ್ಯೆ : 8, 9

ಮೇಷ: ವ್ಯವಹಾರದಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಉತ್ತಮ ಆದಾಯ ಪ್ರಾಪ್ತಿಯಾಗುವುದು. ಮಾತಿನ ಕೌಶಲತೆ, ಚತುರತೆಯಿಂದ ನಡೆಯಬಹುದಾದಂತಹ ವೃತ್ತಿ ವೈಷಮ್ಯದ ಕಲಹಗಳು ದೂರಾಗಲಿವೆ.

ವೃಷಭ: ಕಬ್ಬಿಣ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವ. ಹಿರಿಯ ಅಧಿಕಾರಿಗಳಿಂದ ಪ್ರಶಂಸೆಯ ಮಾತುಗಳು ಬರಲಿದೆ. ಹಿತಶತ್ರುಗಳು ಹೆಸರನ್ನು ಹಾಳು ಮಾಡುವ ಪ್ರಯತ್ನ ಮಾಡಬಹುದು. ಜಾಗ್ರತರಾಗಿರಿ.

ಮಿಥುನ: ನೂತನವಾಗಿ ಭೂಮಿ ಖರೀದಿಗೆ ಸಂಬಂಧಿಸಿದಂತೆ ಈ ಹಿಂದೆ ತೆಗೆದುಕೊಂಡ ನಿಲುವನ್ನು ಕೆಲವು ಕಾರಣಗಳಿಂದ ಬದಲಾಯಿಸಬೇಕಾಗಬಹುದು. ಬಾಲ್ಯದ ಸ್ನೇಹಿತರ ಭೇಟಿಯು ಹಳೆಯ ನೆನಪುಗಳನ್ನು ಮರುಕಳಿಸಲಿದೆ.

ಕರ್ಕಾಟಕ: ಕೇವಲ ಮಾತಿನಲ್ಲದೇ ವ್ಯವಹಾರದಲ್ಲಿಯೂ ಚಾಣಾಕ್ಷತನ ತೋರುವುದು ನಿಮ್ಮ ಏಳಿಗೆಗೆ ಕಾರಣವಾಗಲಿದೆ. ಕೃಷಿ ಅಥವಾ ಕೃಷಿ ಕೈಗಾರಿಕೆಯಲ್ಲಿನ ವ್ಯವಹಾರಗಳು ಸಮಾಧಾನಕರವಾದ ಆದಾಯವನ್ನು ತರಲಿವೆ.

ಸಿಂಹ: ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ಪ್ರಾಪ್ತಿಯಾಗಲಿದೆ. ಕುಡಿಯುವ ನೀರಿನಿಂದ ಅನಾರೋಗ್ಯ ಉಂಟಾಗಬಹುದು. ಗಮನವಿರಲಿ. ಶ್ರೀ ಮಹಾಲಕ್ಷ್ಮಿಯನ್ನು ಪೂಜಿಸಿ ಹೆಚ್ಚಿನ ಏಳಿಗೆಯನ್ನು ಹೊಂದುವಿರಿ.

ಕನ್ಯಾ: ಇಂದು ಹೊಸ ಉದ್ಯೋಗಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಧಾರಗಳನ್ನು ಕೈಗೊಳ್ಳುವುದು ಸರಿಯಲ್ಲ. ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಹಣ ಕೈ ಸೇರಲಿದೆ. ಷೇರು ವ್ಯವಹಾರಗಳಿಂದ ಲಾಭ ಪಡೆಯಬಹುದು.

ತುಲಾ: ಕೆಲವು ಪ್ರಭಾವಿತ ವ್ಯಕ್ತಿಗಳನ್ನು ಸಂಧಿಸಬೇಕಾಗಬಹುದು ಹಾಗೂ ಅವರಿಂದ ಹೆಚ್ಚಿನ ಮಾಹಿತಿಗಳನ್ನು ಪಡೆಯುವಿರಿ. ಇಂದಿನ ದಿನದ ಪ್ರಾರಂಭದಲ್ಲಿ ಉಂಟಾಗುವ ವಿಫಲತೆಯ ಬಗ್ಗೆ ನೀವು ನಿರಾಶೆಗೊಳ್ಳಬಾರದು.

ವೃಶ್ಚಿಕ: ಇಷ್ಟು ದಿನಗಳ ಕಠಿಣ ಕಾರ್ಯಗಾರದಿಂದ ಇಂದು ಬಿಡುಗಡೆ ಬೇಕೆನಿಸಿದೆ. ಇಂದು ನೀವು ಬೇರೆ ಯಾರಿಗೂ ನಿಮ್ಮ ಯೋಜನೆಯ ಸುಳಿವು ನೀಡಬಾರದು. ಕೌಟುಂಬಿಕ ವಿಚಾರಗಳಲ್ಲಿ ಗೌಪ್ಯತೆ ಕಾಪಾಡಿಕೊಳ್ಳಿರಿ.

ಧನು: ಸಾಮರ್ಥ್ಯದ ಅರಿವು ನಿಮಗಿರಲಿ. ಯಾವುದೇ ವಿಷಯದಲ್ಲಾದರೂ ಜಯ ಇರಲಿದೆ. ವ್ಯಾವಹಾರಿಕ ಒಪ್ಪಂದವೊಂದು ಮುರಿದು ಬೀಳದಂತೆ ಎಚ್ಚರವಹಿಸಿ. ಮಗಳ ವಿವಾಹಕ್ಕಾಗಿ ಪ್ರಯತ್ನ ನಡೆಸಬಹುದು.

ಮಕರ: ನಿರಂತರವಾದ ಕೆಲಸ ಕಾರ್ಯಗಳಿಂದ ಹೊರ ಬರಲು, ವಿಶ್ರಾಂತಿ ಪಡೆಯಲು ಪ್ರಯತ್ನಿಸಿ. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶವನ್ನು ಪಡೆದುಕೊಳ್ಳುವಿರಿ. ಮಾತೃವರ್ಗದವರಲ್ಲಿ ಮಂಗಳ ಕಾರ್ಯಗಳು ಜರುಗಲಿದೆ.

ಕುಂಭ: ಈ ದಿನದ ಕಾರ್ಯಕ್ಕೆ ನಿಮ್ಮ ಆರ್ಥಿಕ ಬಲ ಮತ್ತು ಪ್ರಯತ್ನಬಲವೆಷ್ಟಿದ್ದರೂ, ಸಹೋದರರ ಅಥವಾ ಸಂಬಂಧಿಕರ ಸಹಾಯ ಕೇಳುವುದು ಅನಿವಾರ್ಯವಾಗುವುದು. ಹೋಟೆಲ್ ಉದ್ದಿಮೆಯವರಿಗೆ ಕ್ಲೇಶ ಕಂಡುಬರಲಿದೆ.

ಮೀನ: ಇಂದು ನಿಮ್ಮೊಳಗಿನ ಧನಾತ್ಮಕ ಮನೋಭಾವವು ನಿಮ್ಮ ವ್ಯಾಪಾರ ವ್ಯವಹಾರವನ್ನು ಜೊತೆಯಲ್ಲಿ ಸಂಬಂಧವನ್ನು ಹಾಳುಮಾಡಲಿದೆ. ಜೀವನದಲ್ಲಿ ಹಣಕ್ಕಿಂತ ಸ್ನೇಹಸಂಬಂಧಗಳು ಮುಖ್ಯವೆಂಬುವುದು ತಿಳಿಯುವುದು.

ಪದಬಂಧ 5215

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೂರದ ವಸ್ತುಗಳನ್ನು ನೋಡುವ ದುರ್ಬೀನು (5)
4.ಏಳು ದಿನಗಳ ಕಾಲ ನಡೆಯುವ ಉತ್ಸವ (3)
5.ಮಾತು ಕೇಳುತ್ತಿರುವ ಸೋದರ ಮಾವ (3)
6.ಗರ ಬಡಿದಂತಿರುವ ಗಾವಿಲ (3)
8.ತಗ್ಗು ಧ್ವನಿಯಿದು (2)
9.ತಿಮಿರದಲ್ಲೇ ತಿರುಗಿದಾಗ ಎಲ್ಲೆ ಕಾಣಿಸೀತೇ? (2)
11.ಕಮರುತ್ತಿರುವಾಗ ಮೂಡಿದ ದಯೆ (3)
14.ಪೋಲಕ ಧರಿಸಿದವಳ ಕೆನ್ನೆ (3)
15.ಮಾವನಲ್ಲಿರುವ ಕೋಮಲತೆ ಗೊತ್ತಾಯಿತೇ? (3)
16.ವ್ಯಾಯಾಮ ಶಾಲೆಯಿದು (5)

ಮೇಲಿಂದ ಕೆಳಕ್ಕೆ
1.ರಾಯಭಾರಿಗಳ ವಾಸಸ್ಥಾನ (4)
2.ಈತ ಕಡುಬಡವ (5)
3.ಅರ್ಧ ಚಂದ್ರಾಕೃತಿಯ ರಚನೆಯಿದು (3)
4.ಆನೆಗಳ ನಾಯಕ (3)
7.ಮಾತಿನಲ್ಲೇ ಕಾಣಿಸಿದ ಹನುಮಂತ (3)
8.ಜೊಂಪು ಹೀಗೆ ಆವರಿಸಿದೆ (3)
9.ಮಿಡಿಯಲ್ಲಿರುವ ಒಯ್ಯಾರಿ (5)
10.ನೆರೆಮನೆಯವ ಸೇರಿರುವ ಜೈಲು (4)
12.ಪೆದ್ದ ಇಲ್ಲಿದ್ದಾನೆ (3)
13.ರಾಜನ ಆಸ್ಥಾನ ಬಳಿ ಕೇಳಿಸುತ್ತಿರುವ ನಾದಸ್ವರ (3)



5214ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿಯಾಮಕ 3.ಮಹಜರು
5.ನವೀನ 6.ಹೂಬಿಸಿಲು
8.ವಿಷಯ 10.ಸುಶ್ರಾವ್ಯ
12.ಪಾದರಸ 15.ಸತ್ಕುಲ
16.ಸ್ವಾಭಿಮಾನ 17.ಕನ್ನಡಕ

ಮೇಲಿಂದ ಕೆಳಕ್ಕೆ:
1.ನಿದಾಹೂ 2.ಕನಲು
3.ಮನವಿ 4.ಋಜು
7.ಬಿಸಿಮುಟ್ಟಿಸು 9.ಯಮಕಿಂಕರ
11.ವ್ಯಸನ 12.ಪಾಲಕ
13.ಸರೀಕ 14.ಹ್ರಸ್ವಾ

ಸುಡೊಕು 5601

		4		9		1		8
	1			3			6	
		7	4		1	3		9
2	9				4	6		
1	4							
							9	4
3		9			5		7	
	8			1		9		3
4		1	3		9		8	

5600 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಐಐಎಸ್‌ಸಿಗೆ ಮೋದಿ ಶ್ಲಾಘನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) 2022ರಲ್ಲಿ 145 ಹಕ್ಕುಸ್ವಾಮ್ಯಗಳನ್ನು ಪಡೆದಿದೆ. ಇದು ಅಪರೂಪದ ದಾಖಲೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಡೆಸಿಕೊಟ್ಟ ವರ್ಷದ ಮೊದಲ 'ಮನದ ಮಾತು' (ಮನ್ ಕೀ ಬಾತ್) ಕಾರ್ಯಕ್ರಮದಲ್ಲಿ ಬಣ್ಣಿಸಿದರು.

ಇದೇ ವೇಳೆ, ಎಲೆಕ್ಟ್ರಾನಿಕ್ ತ್ಯಾಜ್ಯಗಳನ್ನು ಸಂಸ್ಕರಿಸುವ ನಿಟ್ಟಿನಲ್ಲಿ ಸ್ಥಾಪಿಸಲಾಗಿರುವ ಬೆಂಗಳೂರು ಮೂಲದ 'ಇ-ಪರಿಸರ' ಸಂಸ್ಥೆಯ ಕುರಿತೂ ಮೆಚ್ಚುಗೆ ವ್ಯಕ್ತಪಡಿಸಿದರು ಅವರು, 'ಮುದ್ರಿತ ಸರ್ಕಿಟ್ ಬೋರ್ಡ್‌ಗಳಿಂದ ಅಮೂಲ್ಯವಾದ ಲೋಹಗಳನ್ನು ಸಂಸ್ಕರಿಸಲು ಈ ಸಂಸ್ಥೆಯು ದೇಶೀಯವಾಗಿ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ' ಎಂದಿದರು.

ಟೆಕೇಡ್ ಕನಸು ಸಕಾರ: ಭಾರತದ ಟೆಕೇಡ್ (ತಂತ್ರಜ್ಞಾನ ಕೇಂದ್ರಿತ ದಶಕ) ಕನಸು ಇಲ್ಲಿಯ ಸಂಶೋಧಕರ ಸಾಮರ್ಥ್ಯದಿಂದ ಸಾಕಾರಗೊಳ್ಳಲಿದೆ ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ವಿದೇಶಗಳಲ್ಲಿ ನೋಂದಣಿಯಾಗುತ್ತಿರುವ ಭಾರತದ ಹಕ್ಕುಸ್ವಾಮ್ಯಗಳಿಗಿಂತ ಹೆಚ್ಚು ಹಕ್ಕುಸ್ವಾಮ್ಯ ನೋಂದಣಿಗಳು ಈಗ ಭಾರತದೊಳಗೇ ಆಗುತ್ತಿವೆ. ಇದು ವೈಜ್ಞಾನಿಕ ಕ್ಷೇತ್ರದಲ್ಲಿ ದೇಶದ ಸಾಮರ್ಥ್ಯ ಹೆಚ್ಚುತ್ತಿರುವುದಕ್ಕೆ ಸಾಕ್ಷಿ ಎಂದರು.

'ಜಾಗತಿಕ ಹಕ್ಕುಸ್ವಾಮ್ಯ ನೋಂದಣಿಯಲ್ಲಿ ಭಾರತ 7ನೇ ಸ್ಥಾನ ಪಡೆದಿದೆ. ಟ್ರೇಡ್‌ಮಾರ್ಕ್ ನೋಂದಣಿಯಲ್ಲಿ ಐದನೇ ಸ್ಥಾನ ಪಡೆದಿದೆ. ಕಳೆದ ಐದು ವರ್ಷಗಳಲ್ಲಿ ಭಾರತದ ಹಕ್ಕುಸ್ವಾಮ್ಯ ನೋಂದಣಿಯು ಶೇ 50 ಹೆಚ್ಚಳವಾಗಿದೆ. ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲೂ ಭಾರತ ಉತ್ತಮ ಸಾಧನೆ ಮಾಡಿದ್ದು, 2015ರಲ್ಲಿ 80ಕ್ಕಿಂತ ಕಡಿಮೆ ಇದ್ದ ಸೂಚ್ಯಂಕ ಈಗ 40ಕ್ಕೆ ಏರಿದೆ. ಸಂಶೋಧಕರು ಮತ್ತು ಅವರ ಹಕ್ಕುಸ್ವಾಮ್ಯಗಳಿಂದ ಭಾರತದ ಟೆಕೇಡ್ ಕನಸು ನನಸಾಗುತ್ತದೆ ಎಂಬ ವಿಶ್ವಾಸ ನನಗಿದೆ' ಎಂದರು.

ದೇಶದಲ್ಲಿ ರಾಮ್‌ಸಾರ್ ಪ್ರದೇಶಗಳ (ಅಂತರರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಜೌಗು ಪ್ರದೇಶಗಳು) ಸಂಖ್ಯೆಯು 75ಕ್ಕೆ ಏರಿಕೆಯಾಗಿವೆ. 2014ರಲ್ಲಿ ಈ ಪ್ರದೇಶಗಳ ಸಂಖ್ಯೆ 26 ಇತ್ತು ಎಂದು ಮೋದಿ ಅವರು ತಿಳಿಸಿದರು. ಯೋಗ ಮತ್ತು ಸಿರಿಧಾನ್ಯದ ಬಳಕೆಯನ್ನು ಜಗತ್ತು ಸ್ವೀಕರಿಸಿರುವ ಕುರಿತು ಹರ್ಷ ವ್ಯಕ್ತಪಡಿಸಿದ ಅವರು, ಭಾರತದ ಪ್ರಸ್ತಾವನೆ ಅನುಸಾರ 2023ನ್ನು 'ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ' ಎಂದು ವಿಶ್ವಸಂಸ್ಥೆ ಘೋಷಿಸಿದೆ ಎಂದರು.

ಈ ಸಾಲಿನ ಪದ್ಮ ಪ್ರಶಸ್ತಿಗಳನ್ನು 'ಜನರ ಪದ್ಮ' ಎಂದು ಕರೆದಿರುವ ಅವರು, ಪ್ರಶಸ್ತಿ ಪುರಸ್ಕೃತರ ಯಶೋಗಾಥೆಗಳನ್ನು ಓದುವಂತೆ ಜನರಿಗೆ ಕರೆ ನೀಡಿದ್ದಾರೆ ಮತ್ತು ಅವರ ಜೀವನಗಾಥೆಗಳು ಯುವಜನರಗೆ ಸ್ಫೂರ್ತಿದಾಯಕವಾಗಿವೆ ಎಂದಿದ್ದಾರೆ.

ಎಸ್‌ಪಿ: ಪ್ರಧಾನ ಕಾರ್ಯದರ್ಶಿಗಳ ಪಟ್ಟಿಯಲ್ಲಿ ಶಿವಪಾಲ್ ಯಾದವ್

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ (ಎಸ್‌ಪಿ) 62 ರಾಷ್ಟ್ರೀಯ ಕಾರ್ಯಕಾರಿ ಸದಸ್ಯರ ಪಟ್ಟಿಯು ಭಾನುವಾರ ಘೋಷಣೆಯಾಗಿದ್ದು, ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಚಿಕ್ಕಪ್ಪ ಶಿವಪಾಲ್ ಯಾದವ್ ಅವರ ಹೆಸರು ಕೂಡಾ ಸದಸ್ಯರ ಪಟ್ಟಿಯಲ್ಲಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನದಲ್ಲಿ ಅಖಿಲೇಶ್ ಯಾದವ್ ಅವರೇ ಮುಂದುವರೆದಿದ್ದಾರೆ.

ಒಟ್ಟು ಸದಸ್ಯರಲ್ಲಿ 14 ಸದಸ್ಯರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಲಾಗಿದೆ. ಶಿವಪಾಲ್ ಯಾದವ್, ಇತ್ತೀಚೆಗಷ್ಟೇ ರಾಮಚರಿತಮಾನಸ ಕುರಿತು ವಿವಾದಾತ್ಮಕ ಹೇಳಿಕೆ ನೀಡಿ ಸುದ್ದಿಯಾಗಿದ್ದ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ಹಿರಿಯ ನಾಯಕ ಆಜಂ ಖಾನ್ ಅವರ ಹೆಸರೂ ಈ 14 ಸದಸ್ಯರ ಪಟ್ಟಿಯಲ್ಲಿ ಇವೆ.

2016ರಲ್ಲಿ ಶಿವಪಾಲ್ ಅವರನ್ನು ಅಖಿಲೇಶ್ ಅವರು ಪಕ್ಷದಿಂದ ಉಚ್ಚಾಟಿಸಿದ್ದರು. 2018ರಲ್ಲಿ ಶಿವಪಾಲ್, ಪ್ರಗತಿಶೀಲ ಸಮಾಜವಾದಿ ಪಕ್ಷ (ಲೋಹಿಯಾ) ಸ್ಥಾಪಿಸಿದ್ದರು. ಸಮಾಜವಾದಿ ಪಕ್ಷದ ಸಂಸ್ಥಾಪಕ ಮಲಾಯಂ ಸಿಂಗ್ ಅವರು ಮೃತಪಟ್ಟ ಬಳಿಕ 2022ರಲ್ಲಿ ನಡೆದ ಮೈನ್‌ಪುರಿ ಲೋಕಸಭೆ ಚುನಾವಣೆ ವೇಳೆ ಅಖಿಲೇಶ್ ಮತ್ತು ಶಿವಪಾಲ್ ಮತ್ತೆ ಒಂದಾದರು.

ತೆರಿಗೆ ಉಳಿಸುವ ಈ ಸೆಕ್ಷನ್‌ಗಳು ಗೊತ್ತೇ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ವೈಯಕ್ತಿಕ ಹಣಕಾಸು ನಿರ್ವಹಣೆಯ ಪ್ರಮುಖ ಅಂಶಗಳಲ್ಲಿ ತೆರಿಗೆ ನಿರ್ವಹಣೆ ಕೂಡ ಒಂದು. ಯಾರು ಕಾನೂನಿನ ಮಿತಿಯಲ್ಲಿ ನ್ಯಾಯಯುತವಾಗಿ ತೆರಿಗೆ ಉಳಿಸಲು ಕಾರ್ಯಪ್ರವೃತ್ತರಾಗುತ್ತಾರೋ ಅವರ ನಿವ್ವಳ ಆದಾಯ ಹೆಚ್ಚಾಗುತ್ತದೆ. ತೆರಿಗೆ ಉಳಿಸಬೇಕು ಅಂದರೆ ಆದಾಯ ತೆರಿಗೆ ಕಾಯ್ದೆಯ ಯಾವೆಲ್ಲಾ ಸೆಕ್ಷನ್‌ಗಳ ಅಡಿ ಉಳಿತಾಯಕ್ಕೆ ಅವಕಾಶವಿದೆ ಎನ್ನುವುದರ ಮಾಹಿತಿ ಇರಬೇಕು. ಅಂತಹ ಸೆಕ್ಷನ್‌ಗಳ ಬಗ್ಗೆ ಒಮ್ಮೆ ಗಮನ ಹರಿಸೋಣ.

ಸೆಕ್ಷನ್ 80 ಸಿ: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಸಿ ಅಡಿಯಲ್ಲಿ ₹ 1.5 ಲಕ್ಷದವರೆಗೆ ತೆರಿಗೆ ವಿನಾಯಿತಿ ಲಭ್ಯವಿದೆ. ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್), ಸುಕನ್ಯಾ ಸಮೃದ್ಧಿ ಯೋಜನೆ (ಎಸ್‌ಎಸ್‌ವೈ), ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ಜೀವ ವಿಮೆ ಪ್ರೀಮಿಯಂ, ಯುಲಿಪ್ ಪ್ಲಾನ್, ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ), 5 ವರ್ಷದ ಅವಧಿ ಠೇವಣಿ (ಎಫ್.ಡಿ), ಹಿರಿಯ ನಾಗರಿಕರ ಉಳಿತಾಯ ಯೋಜನೆ, ಮಕ್ಕಳ ಶಾಲೆಯ ಬೋಧನಾ ಶುಲ್ಕ, ಮನೆ ಸಾಲದ ಮೇಲಿನ ಅಸಲು ಪಾವತಿ ಮೊತ್ತಕ್ಕೆ ಈ ವಿನಾಯಿತಿ ಪಡೆಯಬಹುದು.

ಸೆಕ್ಷನ್ 80 ಡಿ: ಈ ಸೆಕ್ಷನ್ ಅಡಿಯಲ್ಲಿ ಕುಟುಂಬಕ್ಕೆ (ಸ್ವಂತಕ್ಕೆ, ಪತ್ನಿ, ಮಕ್ಕಳಿಗೆ) ಪಡೆಯುವ ಆರೋಗ್ಯ ವಿಮೆಗೆ ₹ 25 ಸಾವಿರದವರೆಗೆ ತೆರಿಗೆ ವಿನಾಯಿತಿ ಇದೆ. 60 ವರ್ಷ ಮೇಲ್ಪಟ್ಟ ಪೋಷಕರಿಗೆ ವಿಮೆ ಮಾಡಿಸಿದ್ದರೆ ₹ 50 ಸಾವಿರದವರೆಗೆ ತೆರಿಗೆ ಅನುಕೂಲವಿದೆ.

ಸೆಕ್ಷನ್ 80 ಜಿಜಿ: ಬಾಡಿಗೆಗೆ ಪಡೆದಿರುವ ಮನೆಗೆ ವಾರ್ಷಿಕ ₹ 60 ಸಾವಿರದವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಈ ವಿನಾಯಿತಿಯು ಸ್ವಂತ ಮನೆಯಲ್ಲಿ ವಾಸ ಮಾಡುತ್ತಿರುವವರಿಗೆ ಅನ್ವಯ ಆಗುವುದಿಲ್ಲ.

ಸೆಕ್ಷನ್ 80 ಇ: ಸ್ವಂತಕ್ಕೆ, ಪತ್ನಿ, ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸಾಲ ಪಡೆದಿದ್ದರೆ ನಿಗದಿತ ಆರ್ಥಿಕ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೇಲೆ ವಿನಾಯಿತಿ ಸಿಗುತ್ತದೆ.

ಸೆಕ್ಷನ್ 80 ಟಿಟಿಎ, 80 ಟಿಟಿಬಿ: ವ್ಯಕ್ತಿ ಗಳಿಸಿರುವ ₹ 10 ಸಾವಿರದವರೆಗಿನ ಬಡ್ಡಿ ಆದಾಯಕ್ಕೆ ವಿನಾಯಿತಿ ಲಭ್ಯ. ಅಂಚೆ ಕಚೇರಿ, ಉಳಿತಾಯ ಖಾತೆ ಹೂಡಿಕೆಗಳ ಮೇಲೆ ಬರುವ ಬಡ್ಡಿಗೆ ಇದು ಅನ್ವಯ. ಸೆಕ್ಷನ್ 80 ಟಿಟಿಬಿ ಅಡಿಯಲ್ಲಿ ಹಿರಿಯ ನಾಗರಿಕರಿಗೆ ಉಳಿತಾಯ ಖಾತೆ ಮತ್ತು ಅವಧಿ ಠೇವಣಿ ಮೇಲೆ ಸಿಗುವ ಬಡ್ಡಿಗೆ ₹ 50 ಸಾವಿರದತನಕ ವಿನಾಯಿತಿ ಇದೆ.

ಸೆಕ್ಷನ್ 80 ಸಿಸಿಡಿ (1), 80 ಸಿಸಿಡಿ (1ಬಿ): ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಿ ಈ ಅನುಕೂಲ ಪಡೆಯಬಹುದು. ನಿಮ್ಮ ವೇತನದ ಶೇ 10ರಷ್ಟು ಮೊತ್ತಕ್ಕೆ ತೆರಿಗೆ ವಿನಾಯಿತಿ ಪಡೆಯಲು ಅವಕಾಶವಿದೆ. ಸ್ವಂತ ಉದ್ಯೋಗಿಗಳಿಗೆ ಶೇ 20ರಷ್ಟು ವಿನಾಯಿತಿ ಸಿಗುತ್ತದೆ. 80 ಸಿಸಿಡಿ (1ಬಿ) ಅಡಿಯಲ್ಲಿ ಹೆಚ್ಚುವರಿ ₹ 50 ಸಾವಿರದ ವರೆಗಿನ ಎನ್‌ಪಿಎಸ್ ಹೂಡಿಕೆಗೆ ವಿನಾಯಿತಿ ಇದೆ.

ಸೆಕ್ಷನ್ 24(ಬಿ), ಸೆಕ್ಷನ್ 80 ಇಇ, ಸೆಕ್ಷನ್ 80 ಇಇಎ: 1999ರ ನಂತರ ಪಡೆದಿರುವ ಗೃಹ ಸಾಲಗಳ ಮೇಲಿನ ಬಡ್ಡಿ ಪಾವತಿಗೆ ಆದಾಯ ತೆರಿಗೆಯ ಸೆಕ್ಷನ್ 24(ಬಿ) ಅಡಿಯಲ್ಲಿ ₹ 2 ಲಕ್ಷದವರೆಗೆ ತೆರಿಗೆ ವಿನಾಯಿತಿ ಇದೆ. ಮೊದಲ ಬಾರಿಗೆ ಮನೆ ಖರೀದಿಸುವವರು ಸೆಕ್ಷನ್ 80 ಇಇ ಅಡಿಯಲ್ಲಿ ಹೆಚ್ಚುವರಿ ₹ 50 ಸಾವಿರದವರೆಗೆ ವಿನಾಯಿತಿ ಪಡೆಯಬಹುದು.

₹ 35 ಲಕ್ಷಕ್ಕಿಂತ ಕಡಿಮೆ ಸಾಲ ಪಡೆದಿದ್ದು ನಿಮ್ಮ ಆಸ್ತಿಯ ಮೌಲ್ಯ ₹ 50 ಲಕ್ಷ ಇದ್ದಲ್ಲಿ ಮಾತ್ರ ಈ ವಿನಾಯಿತಿ ಲಭ್ಯ. ಜತೆಗೆ 2017ನೇ ವರ್ಷದಲ್ಲಿ ಅಥವಾ ನಂತರದಲ್ಲಿ ಪಡೆದಿರುವ ಸಾಲಗಳಿಗೆ ಮಾತ್ರ ಇದು ಮಾನ್ಯ. ಸೆಕ್ಷನ್ 24 (ಬಿ) ಅಡಿಯಲ್ಲಿ ಸಾಲದ ಮೇಲಿನ ಬಡ್ಡಿ ಪಾವತಿಗೆ ₹ 2 ಲಕ್ಷದವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಇದಕ್ಕಿಂತ ಹೆಚ್ಚಿಗೆ ಬಡ್ಡಿ ಕಟ್ಟಿದ್ದರೆ ಸೆಕ್ಷನ್ 80 ಇಇಎ ಅಡಿಯಲ್ಲಿ ವಿನಾಯಿತಿ ಲಭ್ಯ. 2019ರಲ್ಲಿ ಜಾರಿಗೆ ಬಂದಿರುವ ಈ ಸೆಕ್ಷನ್ ಅಡಿಯಲ್ಲಿ ನೀವು ₹ 1.5 ಲಕ್ಷದವರೆಗೆ ಹೆಚ್ಚುವರಿಯಾಗಿ ಗೃಹ ಸಾಲದ ಮೇಲಿನ ಬಡ್ಡಿ ಪಾವತಿಗೆ ವಿನಾಯಿತಿ ಪಡೆಯಬಹುದು. ಹಣಕಾಸು ವರ್ಷ 2020ರಲ್ಲಿ ಸಾಲ ಪಡೆದಿದ್ದು, ಮನೆಯ ನೋಂದಣಿ ಮೊತ್ತ ₹ 45 ಲಕ್ಷದ ಒಳಗಿದ್ದರೆ ಮಾತ್ರ ಈ ಅನುಕೂಲ ಸಿಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಷೇರುಪೇಟೆಯಲ್ಲಿ ಅನಿಶ್ಚಿತತೆಯ ಓಟ, ಸೂಚ್ಯಂಕಗಳು ಕುಸಿತ

ಸತತ ಎರಡು ವಾರಗಳಿಂದ ಗಳಿಕೆ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಕುಸಿತದ ಹಾದಿ ತುಳಿದಿವೆ. 59,330 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2.12ರಷ್ಟು ಕುಸಿತ ಕಂಡಿದೆ. 17,604 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.34ರಷ್ಟು ತಗ್ಗಿದೆ. ಲಾಭ ಗಳಿಕೆಯ ಉದ್ದೇಶದಿಂದ ಉಂಟಾದ ಮಾರಾಟದ ಒತ್ತಡ, ಮುಂಬರುವ ಕೇಂದ್ರ ಬಜೆಟ್ ಘೋಷಣೆಗಳ ಬಗ್ಗೆ ಗಮನ, ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರ ಹೆಚ್ಚಳದ ಬಗ್ಗೆ ಯಾವ ನಿರ್ಣಯ ಕೈಗೊಳ್ಳಲಿದೆ ಎನ್ನುವ ವಿಚಾರ ಸೇರಿ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 9.6ರಷ್ಟು ಕುಸಿದಿದೆ. ನಿಫ್ಟಿ ಎನರ್ಜಿ ಸೂಚ್ಯಂಕ ಶೇ 7.5ರಷ್ಟು ತಗ್ಗಿದೆ. ತೈಲ ಮತ್ತು ಅನಿಲ ಸೂಚ್ಯಂಕ ಶೇ 7.4ರಷ್ಟು ಕುಸಿದಿದ್ದು ನಿಫ್ಟಿ ಲೋಹ ಸೂಚ್ಯಂಕ ಸಹ ಶೇ 6ರಷ್ಟು ಇಳಿಕೆಯಾಗಿದೆ. ನಿಫ್ಟಿ ವಾಹನ ಸೂಚ್ಯಂಕ ಶೇ 3ರಷ್ಟು ಹೆಚ್ಚಳ ದಾಖಲಿಸಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹ 9,352.18 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 7,210.53 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಟ್ರಾನ್ಸ್‌ಮಿಷನ್ ಶೇ 3ರಷ್ಟು, ಅಂಬುಜಾ ಸಿಮೆಂಟ್ಸ್, ಅದಾನಿ ಟೋಟಲ್ ಗ್ಯಾಸ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷನ್ ಇಕನಾಮಿಕ್ ಜೋನ್, ಅದಾನಿ ಎಂಟರ್‌ಪ್ರೈಸಸ್ ಮತ್ತು ಇಂಡಸ್ ಟವರ್ಸ್ ಶೇ 20ರಿಂದ ಶೇ 26ರವರೆಗೆ ಕುಸಿತ ಕಂಡಿವೆ.

ಬಿಎಸ್‌ಇ ಮಿಡ್ ಕ್ಯಾಪ್‌ನಲ್ಲಿ ಎಸಿಸಿ, ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಓವರ್ಸೀಸ್ ಬ್ಯಾಂಕ್, ವೋಡಾಫೋನ್ ಐಡಿಯಾ, ಅದಾನಿ ಪವರ್, ಜೆಎಸ್‌ಡಬ್ಲ್ಯು ಎನರ್ಜಿ, ಪವರ್ ಫೈನಾನ್ಸ್ ಕಾರ್ಪೊರೇಷನ್, ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ಬಿಎಚ್‌ಇಎಲ್ ಕುಸಿತ ಕಂಡಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕದಲ್ಲಿ ಕಿರಿ ಇಂಡಸ್ಟ್ರೀಸ್, ಜಿಟಿಎಲ್ ಇನ್ಫ್ರಾಸ್ಟ್ರಕ್ಚರ್, ಡಿಕ್ಸಾನ್ ಟೆಕ್ನಾಲಜೀಸ್, ಪಿಸಿ ಜ್ಯುವೆಲರ್, ಮೋನಾರ್ಕ್ ನೆಟ್‌ವರ್ತ್ ಕ್ಯಾಪಿಟಲ್, ಪವರ್ ಮೆಕ್ ಪ್ರಾಜೆಕ್ಟ್ಸ್, ಜಯಂತ್ ಅಗ್ರೋ ಆರ್ಗ್ಯಾನಿಕ್ಸ್, ಕಿಬಿಸಿ ಗ್ಲೋಬಲ್ ಶೇ 15ರಿಂದ ಶೇ 26ರಷ್ಟು ಕುಸಿದಿವೆ.

ಮುನ್ನೋಟ: ಜನವರಿ 31ಮತ್ತು ಫೆಬ್ರುವರಿ 1ರಂದು ಅಮೆರಿಕದ ಫೆಡರಲ್ ಮುಕ್ತ ಮಾರುಕಟ್ಟೆ ಸಮಿತಿ ಸಭೆ ಇದೆ. ಬಡ್ಡಿ ದರ ಮತ್ತಷ್ಟು ಹೆಚ್ಚಳವಾಗುವುದೇ ಎನ್ನುವ ಬಗ್ಗೆ ಈ ಸಭೆಯಲ್ಲಿ ಸ್ಪಷ್ಟತೆ ಸಿಗುವ ಸಾಧ್ಯತೆ ಇದೆ. ಫೆಬ್ರುವರಿ 1ರಂದು ಕೇಂದ್ರ ಬಜೆಟ್ ಇದೆ. ಫೆಬ್ರುವರಿ 6ರಿಂದ 8ರವರೆಗೆ ಆರ್‌ಬಿಐ ಹಣಕಾಸು ಸಮಿತಿ ಸಭೆ ಇದೆ. ಈ ಎಲ್ಲ ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹465
12 ಮೊಟ್ಟೆಗೆ ₹63
ಮೈಸೂರು
100 ಮೊಟ್ಟೆಗೆ ₹465

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹ 371-657
ದ್ವಿತಳಿ (ಬಿ.ವಿ)
₹325-804

ಸುಧಾ, ಮಯೂರ ಓದಿರಿ

ಎಫ್‌ಪಿಒ: ಯಶಸ್ಸಿನ ವಿಶ್ವಾಸದಲ್ಲಿ 'ಅದಾನಿ'

ನವದೆಹಲಿ (ಪಿಟಿಐ): ₹ 20 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಅದಾನಿ ಎಂಟರ್‌ಪ್ರೈಸಸ್ ಕಂಪನಿ ನಡೆಸಿರುವ ಷೇರು ಮಾರಾಟ ಪ್ರಕ್ರಿಯೆಯು (ಎಫ್‌ಪಿಒ) ಅಂದುಕೊಂಡಂತೆಯೇ ಪೂರ್ಣಗೊಳ್ಳಲಿದೆ, ಎಫ್‌ಪಿಒ ಮುಕ್ತಾಯದ ಹೊತ್ತಿಗೆ ಮಾರಾಟಕ್ಕಿರುವ ಅಷ್ಟೂ ಷೇರುಗಳಿಗೆ ಬಿಡ್ ಸಲ್ಲಿಕೆಯಾಗಿರುತ್ತದೆ ಎಂದು ಅದಾನಿ ಸಮೂಹ ಭಾನುವಾರ ವಿಶ್ವಾಸ ವ್ಯಕ್ತಪಡಿಸಿದೆ.

ಎಫ್‌ಪಿಒ ನೀಡಿಕೆ ಬೆಲೆಯಲ್ಲಿ ಹಾಗೂ ಅವಧಿಯಲ್ಲಿ ಬದಲಾವಣೆ ಇಲ್ಲ ಎಂದು ಅದಾನಿ ಸಮೂಹದ ಮುಖ್ಯ ಹಣಕಾಸು ಅಧಿಕಾರಿ ಜುಗೇಶಿಂದರ್ ಸಿಂಗ್ ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ಪ್ರಕಟಿಸಿರುವ ವರದಿಗೆ ಸಮೂಹವು ವಿಸ್ತೃತ ಪ್ರತಿಕ್ರಿಯೆಯನ್ನು ಬಿಡುಗಡೆ ಮಾಡಲಿದೆ ಎಂದು ಅವರು ತಿಳಿಸಿದ್ದಾರೆ. 'ಯಾವ ಸಂಶೋಧನೆಯನ್ನೂ ಆ ಸಂಸ್ಥೆ ನಡೆಸಿಲ್ಲ, ವಾಸ್ತವವನ್ನು ಆಧಾರರಹಿತವಾಗಿ ತಪ್ಪಾಗಿ ತೋರಿಸಲಾಗಿದೆ ಎಂಬುದನ್ನು ಪ್ರತಿಕ್ರಿಯೆಯಲ್ಲಿ ಹೇಳಲಾಗುತ್ತದೆ' ಎಂದಿದ್ದಾರೆ.

ಅದಾನಿ ಎಂಟರ್‌ಪ್ರೈಸಸ್‌ನ ಈ ಎಫ್‌ಪಿಒ ದೇಶದಲ್ಲಿ ಎರಡನೆಯ ಅತಿದೊಡ್ಡದು. ಆದರೆ ಮೊದಲ ದಿನ ಶೇ 1ರಷ್ಟು ಷೇರುಗಳಿಗೆ ಮಾತ್ರ ಬಿಡ್ ಸಲ್ಲಿಕೆಯಾಗಿದೆ. ಒಟ್ಟು 4.55 ಕೋಟಿ ಷೇರುಗಳು ಮಾರಾಟಕ್ಕೆ ಇದ್ದು, 4.7 ಲಕ್ಷ ಷೇರುಗಳಿಗೆ ಮಾತ್ರ ಬಿಡ್ ಬಂದಿದೆ ಎಂಬ ವಿವರ ಮುಂಬೈ ಷೇರುಪೇಟೆಯಲ್ಲಿ ಇದೆ.

ಸಮೂಹದ ಕಂಪನಿಗಳ ಷೇರು ಮೌಲ್ಯ ಕಡಿಮೆ ಆಗುತ್ತಿರುವುದರಿಂದ ಸಣ್ಣ ಹೂಡಿಕೆದಾರರ ಮೇಲೆ ಕೆಟ್ಟ ಪರಿಣಾಮ ಆಗಬಹುದು ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ಎಫ್‌ಪಿಒ: ಶೇ 1ರಷ್ಟು ಷೇರುಗಳಿಗೆ ಮಾತ್ರ ಬಿಡ್
- ಜ.31ಕ್ಕೆ ಎಫ್‌ಪಿಒ ಕೊನೆ

ದೇವರಿಗಾಗಿ ನಾಲಿಗೆ ಅರ್ಪಿಸಿದ ವ್ಯಕ್ತಿ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಸಮೀಪದ ಉಪ್ಪಾರ ಹೊಸಹಳ್ಳಿ ಗ್ರಾಮದ ವೀರೇಶ್ (32) ದೇವರನ್ನು ಒಲಿಸಿಕೊಳ್ಳಲು ಭಾನುವಾರ ನಾಲಿಗೆ ಕತ್ತರಿಸಿಕೊಂಡು ಕಾಣಿಕೆ ಅರ್ಪಿಸಿದ್ದಾರೆ.

ಬಲಕುಂದಿ ಗ್ರಾಮದ ಗುಡ್ಡದ ಮೇಲೆ ಇರುವ ಶಂಕರಪ್ಪ ತಾತ ದೇವಸ್ಥಾನದಲ್ಲಿ ನಿತ್ಯ ಪೂಜೆ ಮಾಡುತ್ತಿದ್ದರು. ದೇವರು ನಾಲಿಗೆ ಕೇಳಿದ ಎನ್ನುತ್ತ ನಾಲಿಗೆಯನ್ನೇ ಕತ್ತರಿಸಿ ಕೊಂಡಿದ್ದಾರೆ. ಇದನ್ನು ಸಂಜ್ಞೆ ಮಾಡಿ ಮನೆಯವರಿಗೆ ತಿಳಿಸಿದರು. ಕುಟುಂಬಸ್ಥರು ನಾಲಿಗೆ ಹುಡುಕಿ, ತೆಕ್ಕಲಕೋಟೆ ಆಸ್ಪತ್ರೆಗೆ ಧಾವಿಸಿದ್ದಾರೆ. ಚಿಕಿತ್ಸೆಗೂ ಮುಂಚೆಯೇ ಓಡಿ ಹೋಗಿದ್ದ ಅವರನ್ನು ಮನೆಯವರು ಬಳ್ಳಾರಿಯ ವಿಮ್ಸ್‌ಗೆ ದಾಖಲಿಸಿದರು.

ಅದಾನಿ: ಎಲ್‌ಐಸಿ ಹೂಡಿಕೆ ₹ 28,400 ಕೋಟಿ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಅದಾನಿ ಸಮೂಹಕ್ಕೆ ಸೇರಿರುವ ಅದಾನಿ ಎಂಟರ್‌ಪ್ರೈಸಸ್ ಕಂಪನಿಯಲ್ಲಿ ಇನ್ನಷ್ಟು ಹಣ ಹೂಡಿಕೆ ಮಾಡುತ್ತಿದೆ. ಆದರೆ, ಕಂಪನಿಯ ಷೇರುಮೌಲ್ಯ ಕುಸಿತ ಕಂಡಿದ್ದರೂ, ಎಲ್‌ಐಸಿ ಇನ್ನೂ ನಿವ್ವಳ ನಷ್ಟ ಅನುಭವಿಸಿಲ್ಲ.

ಅದಾನಿ ಎಂಟರ್‌ಪ್ರೈಸಸ್‌ನ ಹೊಸ ಷೇರು ಮಾರಾಟ ಪ್ರಕ್ರಿಯೆಯ (ಎಫ್‌ಪಿಒ) ಸಂದರ್ಭದಲ್ಲಿ ಎಲ್‌ಐಸಿ ಆರಂಭಿಕ ಹೂಡಿಕೆದಾರ ಆಗಿ ಒಟ್ಟು ₹ 300 ಕೋಟಿ ತೊಡಗಿಸಿದೆ. ಆರಂಭಿಕ ಹೂಡಿಕೆದಾರರಿಗೆ ಮೀಸಲಾಗಿ ಇರಿಸಿದ್ದ ಷೇರುಗಳಲ್ಲಿ ಶೇಕಡ 5ರಷ್ಟನ್ನು ಎಲ್‌ಐಸಿ ಖರೀದಿಸಿದೆ.

ಒಟ್ಟು ₹ 5,985 ಕೋಟಿಯನ್ನು ಅದಾನಿ ಎಂಟರ್‌ಪ್ರೈಸಸ್ ಎಫ್‌ಪಿಒ ವೇಳೆ ಹೂಡಿಕೆ ಮಾಡಿದ್ದಾರೆ. ಎಲ್‌ಐಸಿ ಈ ಕಂಪನಿಯಲ್ಲಿ ಈಗಾಗಲೇ ಶೇ 4.23ರಷ್ಟು ಷೇರುಗಳನ್ನು ಹೊಂದಿತ್ತು.

ಷೇರು ಮಾರುಕಟ್ಟೆಗಳಲ್ಲಿ ಇರುವ ಮಾಹಿತಿ ಪ್ರಕಾರ ಎಲ್‌ಐಸಿ ಕಳೆದ ಕೆಲವು ವರ್ಷಗಳಲ್ಲಿ, ಅದಾನಿ ಸಮೂಹದ ಕಂಪನಿಗಳಲ್ಲಿ ಒಟ್ಟು ₹ 28,400 ಕೋಟಿ ಹೂಡಿಕೆ ಮಾಡಿದೆ. ಹಿಂಡನ್‌ಬರ್ಗ್ ರಿಸರ್ಚ್ ವರದಿ ಬಹಿರಂಗ ಆಗುವ ಮೊದಲು ಈ ಹೂಡಿಕೆಯ ಮೌಲ್ಯವು ₹ 72,200 ಕೋಟಿ ಆಗಿತ್ತು.

ಎರಡು ದಿನಗಳ ವಹಿವಾಟಿನಲ್ಲಿ ನಡೆದ ಷೇರುಮೌಲ್ಯ ಕುಸಿತದ ನಂತರದಲ್ಲಿ ಎಲ್‌ಐಸಿ ಮಾಡಿರುವ ಹೂಡಿಕೆಯ ಮೌಲ್ಯವು ₹ 55,700 ಕೋಟಿಗೆ ಕುಸಿದಿದೆ. ಇಷ್ಟಾದ ನಂತರದಲ್ಲಿಯೂ ಎಲ್‌ಐಸಿಯ ಹೂಡಿಕೆಯು ನಿವ್ವಳ ಲಾಭದಲ್ಲಿಯೇ ಇದೆ. ಅಂದರೆ ಮೂಲ ಹೂಡಿಕೆ ಮೊತ್ತಕ್ಕೆ ಹೋಲಿಸಿದರೆ ಈಗ ಎಲ್‌ಐಸಿ ₹ 27,300 ಕೋಟಿಯಷ್ಟು ಲಾಭದಲ್ಲಿದೆ.

ಅದಾನಿ ಸಮೂಹದಲ್ಲಿ ಎಲ್‌ಐಸಿ ಪಾಲು (%)

ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್	9
ಅದಾನಿ ಟ್ರಾನ್ಸ್‌ಮಿಷನ್	3.7
ಅದಾನಿ ಗ್ರೀನ್ ಎನರ್ಜಿ	1.3
ಅದಾನಿ ಟೋಟಲ್ ಗ್ಯಾಸ್	6

ಬಲೂಚಿಸ್ತಾನದಲ್ಲಿ ಹೊತ್ತಿ ಉರಿದ ಬಸ್: 42 ಸಾವು

ಇಸ್ಲಾಮಾಬಾದ್(ಪಿಟಿಐ): ನೈರುತ್ಯ ಬಲೂಚಿಸ್ತಾನ ಪ್ರಾಂತ್ಯದ ಲಾಸ್‌ಬೆಲಾ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ ಚಾಲಕನ ನಿಯಂತ್ರಣ ತಪ್ಪಿದ ಬಸ್ಸೊಂದು ಸೇತುವೆಯ ತಡೆಗೋಡೆಗೆ ಡಿಕ್ಕಿ ಹೊಡೆದು ತೊರೆಗೆ ಉರುಳಿ ಬಿದ್ದು ಬೆಂಕಿಗೆ ಆಹುತಿಯಾಗಿದ್ದು, 42 ಮಂದಿ ಮೃತಪಟ್ಟಿದ್ದಾರೆ.

ಈ ಬಸ್ ಕ್ವೆಟ್ಟಾದಿಂದ ಕರಾಚಿಗೆ ತೆರಳುತ್ತಿತ್ತು. ಬಸ್‌ನಲ್ಲಿ 48 ಮಂದಿ ಇದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ ಒಬ್ಬ ಮಹಿಳೆ, ಮಗು ಸೇರಿ ಮೂವರನ್ನು ಮಾತ್ರ ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಲಾಗಿದೆ. 42 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಮೃತದೇಹಗಳು ಗುರುತು ಹಿಡಿಯಲಾಗದಷ್ಟು ಸುಟ್ಟು ಕರಕಲಾಗಿದ್ದು, ಮೃತರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ ನಡೆಸಲಾಗುವುದು. ಗಾಯಾಳುಗಳು ಕೂಡ ಗಂಭೀರ ಸ್ಥಿತಿಯಲ್ಲಿದ್ದು ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ಲಾಸ್‌ಬೆಲಾದ ಸಹಾಯಕ ಆಯುಕ್ತ ಹಂಜಾ ಅಂಜುಂ ತಿಳಿಸಿದ್ದಾರೆ.

ಅಪಘಾತದಲ್ಲಿ ಸುಟ್ಟ ಬಸ್ಸಿನ ಅವಶೇಷ —ಎಎಫ್‌ಪಿ ಚಿತ್ರ

ದೋಣಿ ಮಗುಚಿ 17 ಮಕ್ಕಳು ಸಾವು

ಪೇಶಾವರ (ರಾಯಿಟರ್ಸ್): ವಾಯುವ್ಯ ಪಾಕಿಸ್ತಾನದ ತಾಂಡಾ ಅಣೆಕಟ್ಟೆಯಲ್ಲಿ ಭಾನುವಾರ ಧಾರ್ಮಿಕ ಶಾಲಾ ವಿದ್ಯಾರ್ಥಿಗಳನ್ನು ಕರೆದೊಯ್ಯುತ್ತಿದ್ದ ದೋಣಿ ಮಗುಚಿ 17 ಮಕ್ಕಳು ಸಾವನ್ನಪ್ಪಿದ್ದಾರೆ. ರಕ್ಷಣಾ ಕಾರ್ಯ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದುರಂತದಲ್ಲಿ 13 ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ನತದೃಷ್ಟರು 7ರಿಂದ 12 ವರ್ಷದೊಳಗಿನವರು ಎಂದು ಕೊಹಟ್ ಜಿಲ್ಲೆಯ ಜಿಲ್ಲಾಧಿಕಾರಿ ಫರ್ಖಾನ್ ಖಾನ್ ತಿಳಿಸಿದ್ದಾರೆ.

ಪಾಕ್: ಪೆಟ್ರೋಲ್, ಡೀಸೆಲ್ ಬೆಲೆ 35 ರೂಪಾಯಿ ಹೆಚ್ಚಳ

ಇಸ್ಲಾಮಾಬಾದ್ (ಪಿಟಿಐ): ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸುವ ಪಾಕಿಸ್ತಾನ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ ತಲಾ ₹35 ರಷ್ಟು ಹೆಚ್ಚಿಸಿ ಭಾನುವಾರ ಆದೇಶ ಹೊರಡಿಸಿದೆ. ಇದರಿಂದಾಗಿ ಭಾರಿ ಹಣದುಬ್ಬರದ ಜತೆಗೆ ಬೆಲೆ ಏರಿಕೆಯ ಬಿಸಿಯೂ ಜನರಿಗೆ ತಟ್ಟುವಂತಾಗಿದೆ.

ಹಣಕಾಸು ಸಚಿವ ಇಶಾಕ್ ದಾರ್ ಟಿವಿ ಭಾಷಣದಲ್ಲಿ ದರ ಏರಿಕೆಯನ್ನು ಪ್ರಕಟಿಸಿದರು. ಸೀಮೆ ಎಣ್ಣೆ ಮತ್ತು ಲೈಟ್ ಡೀಸೆಲ್ ಆಯಿಲ್ ಬೆಲೆಯನ್ನು ಲೀಟರ್‌ಗೆ ತಲಾ 18 ರೂಪಾಯಿಯಂತೆ ಹೆಚ್ಚಿಸಲಾಗಿದೆ.

ಈ ದರ ಏರಿಕೆಯ ಬಳಿಕ ಪಾಕಿಸ್ತಾನದಲ್ಲಿ ಪೆಟ್ರೋಲ್ ದರ ಲೀಟರ್‌ಗೆ 249.80 ರೂಪಾಯಿ ಹಾಗೂ ಹೈ ಸ್ಪೀಡ್ ಡೀಸೆಲ್ ಬೆಲೆ ಲೀಟರ್‌ಗೆ 262.80 ರೂಪಾಯಿ ಆಗಿದೆ. ಸೀಮೆ ಎಣ್ಣೆಯ ದರ ಲೀಟರ್‌ಗೆ 189.83 ರೂಪಾಯಿಯಷ್ಟಾಗಿದೆ.

ಸಂಕ್ಷಿಪ್ತ ಸುದ್ದಿ

ವಿಶ್ವಸಂಸ್ಥೆ ಭದ್ರತಾ ಮಂಡಳಿ ನಿಷ್ಕ್ರಿಯ: ಕೊರೊಸಿ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ವಾಸ್ತವಗಳನ್ನು ಪ್ರತಿಬಿಂಬಿಸುವುದಿಲ್ಲ, ನಿಷ್ಕ್ರಿಯವಾಗಿದೆ. ಕಾಯಂ ಸದಸ್ಯ ರಾಷ್ಟ್ರವೊಂದು ತನ್ನ ನೆರೆಯ ದೇಶದ ಮೇಲೆ ದಾಳಿ ಮಾಡಿದಾಗ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವ ಮೂಲಭೂತ ಕಾರ್ಯ ನಿರ್ವಹಿಸಲು ಸಾಧ್ಯವಾಗಿಲ್ಲ ಎಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಧ್ಯಕ್ಷ ಕಸಬಾ ಕೊರೊಸಿ ಹೇಳಿದರು.

'ವಿಶ್ವಸಂಸ್ಥೆಯ ವೀಟೋ ಅಧಿಕಾರ ಹೊಂದಿರುವ ಕಾಯಂ ಸದಸ್ಯ ರಾಷ್ಟ್ರ ರಷ್ಯಾ 2022ರ ಫೆಬ್ರುವರಿಯಲ್ಲಿ ಉಕ್ರೇನ್ ಮೇಲೆ ದಾಳಿ ನಡೆಸಿತ್ತು. ಉಕ್ರೇನ್‌ನ ಕೆಲವು ಪ್ರದೇಶಗಳನ್ನು ತನ್ನ ಸ್ವಾಧೀನಕ್ಕೆ ಪಡೆದುಕೊಳ್ಳುವ ರಷ್ಯಾದ ನಿರ್ಧಾರವನ್ನು ಖಂಡಿಸಿ ನಿರ್ಣಯ ಕೈಗೊಂಡಾಗಲೂ ರಷ್ಯಾ ಅದನ್ನು ವಿರೋಧಿಸಿತು' ಎಂದು ಅವರು ಭಾರತಕ್ಕೆ ಭೇಟಿ ನೀಡುವ ಮೊದಲು ಸುದ್ದಿಸಂಸ್ಥೆಗೆ ತಿಳಿಸಿದರು.

ಬ್ರಿಟನ್: ಸಂಪುಟ ಸಚಿವನನ್ನು ವಜಾಗೊಳಿಸಿದ ರಿಷಿ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಭಾನುವಾರ ತಮ್ಮ ಸಂಪುಟದ ಖಾತೆ ರಹಿತ ಸಚಿವ, ಬ್ರಿಟನ್ ಆಡಳಿತಾರೂಢ ಪಕ್ಷ ಕನ್‌ಸರ್ವೇಟಿವ್ ಪಾರ್ಟಿಯ ಮುಖ್ಯಸ್ಥ ನದೀಮ್ ಝಹಾವಿ ಅವರನ್ನು ಹುದ್ದೆಯಿಂದ ವಜಾಗೊಳಿಸಿದ್ದಾರೆ.

ನದೀಮ್ ಅವರು ತೆರಿಗೆ ಪಾವತಿಯಲ್ಲಿ ಪ್ರಮಾದ ಎಸಗಿದ್ದ ಆರೋಪ ಹೊಂದಿದ್ದರು. ಹೀಗಾಗಿ ಅವರನ್ನು ಹುದ್ದೆಯಿಂದ ವಜಾಗೊಳಿಸುವಂತೆ ಇತ್ತೀಚಿನ ದಿನಗಳಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದರು.

ನದೀಮ್ ಅವರನ್ನು ಹುದ್ದೆಯಿಂದ ವಜಾಗೊಳಿಸಿ, ಅವರನ್ನು ಉದ್ದೇಶಿಸಿ ಸುನಕ್ ಬರೆದಿರುವ ಅಧಿಕೃತ ಪತ್ರವನ್ನು ಬ್ರಿಟನ್ ಪ್ರಧಾನಿ ಕಚೇರಿ (ಡೌನಿಂಗ್ ಸ್ಟ್ರೀಟ್) ಬಿಡುಗಡೆ ಮಾಡಿದೆ. 'ಕಳೆದ ವರ್ಷ ನಾನು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುವ ವೇಳೆ, ಸರ್ಕಾರವನ್ನು ಎಲ್ಲಾ ಹಂತದಲ್ಲೂ ಪ್ರಾಮಾಣಿಕತೆ, ಕರ್ತವ್ಯಪ್ರಜ್ಞೆ ಮತ್ತು ಹೊಣೆಗಾರಿಕೆಯಿಂದ ಮುನ್ನಡೆಸುವುದಾಗಿ ಶಪಥ ತೆಗೆದುಕೊಂಡಿದ್ದೆ' ಎಂದು ಸುನಕ್ ಪತ್ರದಲ್ಲಿ ಬರೆದಿದ್ದಾರೆ.

ಇರಾನ್‌ನ ರಕ್ಷಣಾ ಕಾರ್ಖಾನೆ ಮೇಲೆ ಡ್ರೋನ್ ದಾಳಿ?

ದುಬೈ (ಎಪಿ): 'ಬಾಂಬ್ ಸಾಗಿಸುವ ಡ್ರೋನ್‌ಗಳು ಇರಾನ್‌ನ ಪ್ರಮುಖ ನಗರವಾದ ಇಸ್‌ಫಹಾನ್‌ನಲ್ಲಿರುವ ರಕ್ಷಣಾ ಕಾರ್ಖಾನೆಯನ್ನು ಗುರಿಯಾಗಿಸಿ ದಾಳಿ ನಡೆಸಿವೆ' ಎಂದು ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ವೈಕುಂಠ ಸಮಾರಾಧನೆ



ಶ್ರೀ. ಜೆ.ಎನ್. ಚಂದ್ರಮೂರ್ತಿ
21.09.1964 – 20.01.2023
ಸಂಸ್ಥಾಪಕರು– ನಾರಾಯಣ ವಿದ್ಯಾಮಂದಿರ, ಜಾಲಹಳ್ಳಿ, ನಿರ್ದೇಶಕರು – ಅಖಿಲ ಕರ್ನಾಟಕ ಫೈನಾನ್ಸ್ ಅಸೋಸಿಯೇಷನ್ಸ್,
ಶ್ರೀಯುತರು, ದಿ: 20.01.2023ನೇ ಶುಕ್ರವಾರ ಮಧ್ಯರಾತ್ರಿ 1.30 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿ.30.01.2023ನೇ ಸೋಮವಾರ ಬೆಳಿಗ್ಗೆ 9.00 ರಿಂದ 10.30ಕ್ಕೆ ಪುಣ್ಯಾಹ ಹಾಗೂ ಮಧ್ಯಾಹ್ನ 12.00ರಿಂದ ವೈಕುಂಠ ಸಮಾರಾಧನೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖ ತಪ್ತರು
ಪತ್ನಿ ಶ್ರೀಮತಿ ನಾಗರತ್ನ, ಮಕ್ಕಳಾದ ಜೆ.ಸಿ. ವಿಶ್ರುತ್, ಜೆ.ಸಿ.ಅನುಷಾ ಮತ್ತು ಸಹೋದರರಾದ ಜೆ.ಎನ್.ಶ್ರೀನಿವಾಸಮೂರ್ತಿ (ಜಾನಿ), ಬಿಬಿ.ಎಂ.ಪಿ ಸದಸ್ಯರು, ಜಾಲಹಳ್ಳಿ ಹಾಗೂ ಕುಟುಂಬವರ್ಗ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಇದೆ 10,000- 15,000. 8951315839, 9880545002

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ರೋಗಿಯನ್ನು ವಯಸ್ಸಾದವರನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ: 9606523337, 9606385001

Security & Detectives

URGENT REQUIRED Security Guards, Lady Security Guards. Salary 14,500, Supervisors -18,000, ASO (Ex-Service) 25,000, SO (Ex-Service) 30,000/-.Take Home to work at Chincholi (Karnataka).7396761675, 7801063631, 7992688297 9989733611

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

★॥ಶ್ರೀಕ್ಷೇತ್ರ, ಧರ್ಮಸ್ಥಳದಿಂದ॥★ ನೇರಪರಿಹಾರ ಉಚಿತ_ಸಲಹೆ ಖಚಿತ ಪರಿಹಾರ ನಿಮ್ಮಸಮಸ್ಯೆ ಏನೇಯಿರಲಿ ಎಷ್ಟೇಕಠಿಣವಾಗಿರಲಿ 3ದಿನದಲ್ಲಿ ಪರಿಹಾರ ಶತಸಿದ್ಧ. ಸಂಪರ್ಕಿಸಿ: ಮಂಜುನಾಥ್‌ಭಟ್ 9880522577

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 26.02.2023 7ದಿನಗಳು ಕಾಶಿ ನೈಮಿಷ್ಯಾರಣ್ಯಾ,ಅಯೋಧ್ಯ ಪ್ರಯಾಗ ಗಯಾ ಬುದ್ಧಗಯಾ, ಸೀತಾಮಡು.20.02.2023 11ದಿನಗಳು ಚಂಡೀಗಡ್,ಸಿಮ್ಲಾ ಕುಲುಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ., 04.03.2023 10ದಿನಗಳು ಅಖಂಡ ನೇಪಾಳ ರಾಷ್ಟ್ರಪ್ರವಾಸ (ಮುಕ್ತಿನಾಥ ಸಹಿತ) 25.03.2023,15.04.2023 06.05.2023 21/16/13ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ ಪ್ರವಾಸ)ಅಸ್ಸಾಂ, ಅರುಣಾಚಲ, ನಾಗಲ್ಯಾಂಡ್,ಮಣಿಪುರ ತ್ರಿಪುರ ಮೇಘಾಲಯ,ಮಿಝೋರಾಂ. 8073824856, 6366322639, 9206979202

★07.02.2023 16ದಿನಗಳು★ 95ದಿವ್ಯದೇಶಂಪ್ರವಾಸ. 04.03.2023, 11.04.2023 8/13ದಿನಗಳು ಕಾಶಿ ಪ್ರವಾಸ, 20.04.2023 7ದಿನಗಳು ವೈಷ್ಣೋದೇವಿ, ಅಮೃತಸರ್ ಪ್ರವಾಸ.27.04.2023 16ದಿನಗಳು ಕಾಶಿ,ನೇಪಾಳ,ಮುಕ್ತಿನಾಥ ಜನಕಪುರ್ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವೇ ಆಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA + PRAJAVANI BENGALURU ON FRIDAY + SATURDAY + SUNDAY
@ 2400/-* FOR 15 WORDS
conditions apply*
For More Details Contact:
9731810277 | 9901641752 | 9886213331 | 9845114560
080- 45557163 | 45557164

ಭದ್ರತೆ: ಕಣಿವೆಯ ಪರಿಸ್ಥಿತಿ ಸುಧಾರಿಸಿದೆ ಎಂದ ಬಿಜೆಪಿಗೆ ರಾಹುಲ್ ಸವಾಲು

‘ಅಮಿತ್ ಶಾ ಪಾದಯಾತ್ರೆ ನಡೆಸಲಿ’

ಶ್ರೀನಗರ (ಪಿಟಿಐ): ‘ಬಿಜೆಪಿ ಹೇಳುತ್ತಿರುವಂತೆ ಜಮ್ಮು–ಕಾಶ್ಮೀರದಲ್ಲಿ ಭದ್ರತೆ ಸ್ಥಾಪನೆಯಾಗಿದ್ದಲ್ಲಿ, ಅಮಿತ್ ಶಾ ಅವರು ಜಮ್ಮುವಿನಿಂದ ಕಾಶ್ಮೀರದ ವರೆಗೆ ಯಾಕೆ ಪಾದಯಾತ್ರೆ ಕೈಗೊಳ್ಳಬಾರದು’ ಎಂದು ರಾಹುಲ್ ಗಾಂಧಿ ಭಾನುವಾರ ಪ್ರಶ್ನಿಸಿದರು.

ಭಾರತ್ ಜೋಡೊ ಯಾತ್ರೆ ಅಂಗವಾಗಿ ಲಾಲ್‌ಚೌಕ್‌ನಲ್ಲಿ ತ್ರಿವರ್ಣ ಧ್ವಜಾರೋಹಣ ನೆರವೇರಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಭದ್ರತೆಗೆ ಸಂಬಂಧಿಸಿ ಕಣಿವೆಯಲ್ಲಿನ ಪರಿಸ್ಥಿತಿ ಸುಧಾರಿಸಿದೆ ಎಂಬ ಬಿಜೆಪಿ ನಾಯಕರ ಹೇಳಿಕೆ ಕುರಿತ ಪ್ರಶ್ನೆಗೆ ಮೇಲಿನಂತೆ ಉತ್ತರಿಸಿದ ಅವರು, ‘ಹಾಗಿದ್ದಲ್ಲಿ, ಬಿಜೆಪಿಯವರು ಜಮ್ಮುವಿನಿಂದ ಲಾಲ್ ಚೌಕ್ ವರೆಗೆ ರ‍್ಯಾಲಿ ಯಾಕೆ ನಡೆಸಬಾರದು?’ ಎಂದು ಹೇಳಿದರು.

‘ಜಮ್ಮು–ಕಾಶ್ಮೀರದಲ್ಲಿ ಬಾಂಬ್ ಸ್ಫೋಟಗಳು, ವ್ಯಕ್ತಿಗಳ ಗುರಿಯಾಗಿಸಿ ಆಗುತ್ತಿರುವ ಹತ್ಯೆಗಳು ಇನ್ನೂ ನಡೆಯುತ್ತಿವೆ’ ಎಂದು ಅವರು ಹೇಳಿದರು.

‘ಕೇಂದ್ರ ಸರ್ಕಾರ ಚೀನಾದೊಂದಿಗೆ ದೃಢವಾಗಿ ವ್ಯವಹರಿಸಬೇಕು. ನಮ್ಮ ನೆಲದ ಅತಿಕ್ರಮಣವನ್ನು ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಬೇಕು’ ಎಂದು ಚೀನಾ ಕುರಿತ ಪ್ರಶ್ನೆಗೆ ಉತ್ತರಿಸಿದರು.

ಪ್ರೀತಿಯ ಸಂದೇಶ ಸಾರುವ ಭಾರತ್ ಜೋಡೊ: ಭಾರತ್ ಜೋಡೊಯಾತ್ರೆಯು ದೇಶದ ಮೂಲೆ ಮೂಲೆಯಲ್ಲಿ ಪ್ರೀತಿಯ ಸಂದೇಶವನ್ನು ಹರಡಿದೆ. ರಾಷ್ಟ್ರವನ್ನು ಮುನ್ನಡೆಸಲು ಪಕ್ಷದ ಎಲ್ಲ ಕಾರ್ಯಕರ್ತರು ಒಗ್ಗೂಡಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಟ್ವೀಟ್ ಮಾಡಿದ್ದಾರೆ.

ದೂರ ಉಳಿದ ಅಬ್ದುಲ್ಲಾ, ಮುಫ್ತಿ!

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಭಾರತ್ ಜೋಡೊ ಯಾತ್ರೆಯಲ್ಲಿ ಜಮ್ಮು–ಕಾಶ್ಮೀರ ಮಾಜಿ ಮುಖ್ಯಮಂತ್ರಿಗಳಾದ ಫಾರೂಕ್ ಅಬ್ದುಲ್ಲಾ, ಒಮರ್ ಅಬ್ದುಲ್ಲಾ ಹಾಗೂ ಮೆಹಬೂಬಾ ಮುಫ್ತಿ ಅವರು ಉತ್ಸಾಹದಿಂದಲೇ ಪಾಲ್ಗೊಂಡಿದ್ದರು.

ಆದರೆ, ಲಾಲ್‌ಚೌಕ್‌ನಲ್ಲಿ ಭಾನುವಾರ ನಡೆದ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮದಿಂದ ಈ ಮೂವರು ಮಾಜಿ ಮುಖ್ಯಮಂತ್ರಿಗಳು ದೂರ ಉಳಿದದ್ದು ಚರ್ಚೆಗೆ ಕಾರಣವಾಗಿದೆ.

ಶ್ರೀನಗರದಿಂದ ಲಖನ್‌ಪುರಕ್ಕೆ ತೆರಳಿದ್ದ ಫಾರೂಕ್ ಅಬ್ದುಲ್ಲಾ, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಅವರೊಂದಿಗೆ ಹೆಜ್ಜೆ ಹಾಕಿದ್ದರು. ಒಂದು ಹಂತದಲ್ಲಿ, ರಾಹುಲ್ ಗಾಂಧಿ ಅವರನ್ನು ಶಂಕರಾಚಾರ್ಯರಿಗೂ ಹೋಲಿಸಿ, ಹೊಗಳಿದ್ದರು.

ಬನಿಹಾಲ್‌ನಲ್ಲಿ ನಡೆದ ಯಾತ್ರೆಯಲ್ಲಿ ಒಮರ್ ಅಬ್ದುಲ್ಲಾ ಪಾಲ್ಗೊಂಡಿದ್ದರು. ಮೆಹಬೂಬಾ ಮುಫ್ತಿ ಹಾಗೂ ಅವರ ಮಗಳು ಇಲ್ತಿಜಾ ಮುಫ್ತಿ ಅವರು ಆವಂತಿಪೊರಾದಲ್ಲಿ ನಡೆದ ಪಾದಯಾತ್ರೆಯಲ್ಲಿ ರಾಹುಲ್ ಅವರಿಗೆ ಸಾಥ್ ನೀಡಿದ್ದರು.

‘ಕಾಶ್ಮೀರ ಮೂಲದ ರಾಜಕೀಯ ಪಕ್ಷಗಳ ನಾಯಕರು ರಾಹುಲ್ ಗಾಂಧಿ ಅವರೊಂದಿಗೆ ಹೆಜ್ಜೆಹಾಕಿದ್ದರು. ಭಾನುವಾರ ಲಾಲ್‌ಚೌಕ್‌ನಲ್ಲಿನಡೆದ ತ್ರಿವರ್ಣ ಧ್ವಜಾರೋಹಣ ಕಾರ್ಯಕ್ರಮಕ್ಕೆ ಗೈರು ಹಾಜರಾಗಿದ್ದರು’ ಎಂದು ಹಿರಿಯ ಪತ್ರಕರ್ತ ಅಹ್ಮದ್ ಅಲಿ ಫಯ್ಯಾಜ್ ಟ್ವೀಟ್ ಮಾಡಿದ್ದಾರೆ.

ಜಮ್ಮು–ಕಾಶ್ಮೀರ ಧ್ವಜವನ್ನು ಆರೋಹಣ ಮಾಡಲು ಅನುಮತಿ ನೀಡಿದರೆ ಮಾತ್ರ ತ್ರಿವರ್ಣ ಧ್ವಜಾರೋಹಣ ನೆರವೇರಿಸುವುದಾಗಿ ಮೆಹಬೂಬಾ ಮುಫ್ತಿ ಅವರು ಬಹಿರಂಗವಾಗಿಯೇ ಹೇಳುತ್ತಿದ್ದರು. ಈ ವಿಷಯದ ಬಗ್ಗೆ ಅಬ್ದುಲ್ಲಾ ಮಾತನಾಡಲಿಲ್ಲ.

‘ಒಂದು ವೇಳೆ, ಲಾಲ್‌ಚೌಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಫಾರೂಕ್ ಅಬ್ದುಲ್ಲಾ ಅಥವಾ ಒಮರ್ ಅಬ್ದುಲ್ಲಾ ಪಾಲ್ಗೊಂಡಿದ್ದರೆ, ಆಗ ಆ ವಿದ್ಯಮಾನವು ಮೆಹಬೂಬಾ ಮುಫ್ತಿ ಅವರಿಗೆ ರಾಜಕೀಯವಾಗಿ ಭಾರಿ ಲಾಭ ತಂದುಕೊಡುತ್ತಿತ್ತು. ಈ ಕಾರಣಕ್ಕಾಗಿಯೇ ಫಾರುಕ್ ಮತ್ತು ಒಮರ್ ಅಬ್ದುಲ್ಲಾ ಕಾರ್ಯಕ್ರಮದಿಂದ ದೂರ ಉಳಿದರು’ ಎಂದು ರಾಜಕೀಯ ವಿಶ್ಲೇಷಕ ಮಜೀದ್ ಹೈದರಿ ಅವರು ಹೇಳಿದ್ದಾರೆ.

‘ಧ್ವಜಾರೋಹಣ: ಶ್ರೇಯಸ್ಸು ಮೋದಿಗೆ ಸಲ್ಲಬೇಕು’

ಜಮ್ಮು: ‘ಶ್ರೀನಗರದ ಐತಿಹಾಸಿಕ ಲಾಲ್‌ಚೌಕ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಷ್ಟ್ರ ಧ್ವಜಾರೋಹಣ ಮಾಡಿರುವುದರ ಶ್ರೇಯಸ್ಸು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲಬೇಕು’ ಎಂದು ಜಮ್ಮು ಮತ್ತು ಕಾಶ್ಮೀರ ಬಿಜೆಪಿ ಘಟಕದ ಅಧ್ಯಕ್ಷ ರವೀಂದರ್ ರೈನಾ ಭಾನುವಾರ ಹೇಳಿದ್ದಾರೆ.

‘ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ಸಂವಿಧಾನದ 370ನೇ ವಿಧಿ ರದ್ದುಗೊಳಿಸುವ ಮೂಲಕ ಮೋದಿ ಅವರು ಅಲ್ಲಿನ ಪರಿಸ್ಥಿತಿಯನ್ನು ಸಹಜಗೊಳಿಸಿದ್ದಾರೆ’ ಎಂದೂ ಬಣ್ಣಿಸಿದ್ದಾರೆ.

ಭಾರತ್ ಜೋಡೊ ಯಾತ್ರೆ ಅಂಗವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ಇತರ ಮುಖಂಡರು ಶ್ರೀನಗರದ ಐತಿಹಾಸಿಕ ಲಾಲ್ ಚೌಕ್‌ನಲ್ಲಿ ಭಾನುವಾರ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು –ಪಿಟಿಐ ಚಿತ್ರ

ಲಾಲ್‌ಚೌಕ್: ರಾಹುಲ್ ರಾಷ್ಟ್ರಧ್ವಜಾರೋಹಣ

ಒಂದನೇ ಪುಟದಿಂದ

ನಂತರ, ಎಸ್‌.ಕೆ. ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುವ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ರಾಹುಲ್ ಗಾಂಧಿ ಮಾತನಾಡುವರು.

ಕಳೆದ ವರ್ಷ ಸೆಪ್ಟೆಂಬರ್ 7ರಂದು ಕನ್ಯಾಕುಮಾರಿಯಿಂದ ಆರಂಭಗೊಂಡ ಮಹತ್ವಾಕಾಂಕ್ಷೆಯ ಭಾರತ್ ಜೋಡೊ ಯಾತ್ರೆ, ದೇಶದ 75 ಜಿಲ್ಲೆಗಳ ಮೂಲಕ ಸಾಗಿದ್ದು 4,080 ಕಿ.ಮೀ. ಕ್ರಮಿಸಿದೆ.

ನಗರದ ಹೊರವಲಯದ ಪಂಥ ಚೌಕ್‌ದಿಂದ ಭಾನುವಾರ ಬೆಳಿಗ್ಗೆ 10.45ಕ್ಕೆ ರಾಹುಲ್ ಗಾಂಧಿ ನಡಿಗೆ ಆರಂಭಿಸಿದರು. ಎಂದಿನಂತೆಯೇ, ಬಿಳಿ ಬಣ್ಣದ ಟೀ ಶರ್ಟ್ ಧರಿಸಿದ್ದ ರಾಹುಲ್ ಅವರೊಂದಿಗೆ, ರಾಷ್ಟ್ರ ಧ್ವಜ ಹಾಗೂ ಪಕ್ಷದ ಬಾವುಟಗಳನ್ನು ಹಿಡಿದಿದ್ದ ಮಹಿಳೆಯರು ಹಾಗೂ ಬೆಂಬಲಿಗರು ಹೆಜ್ಜೆ ಹಾಕಿದರು.

10 ನಿಮಿಷಗಳ ಅವಧಿಯ ಈ ಕಾರ್ಯಕ್ರಮಕ್ಕಾಗಿ ವ್ಯಾಪಕ ಭದ್ರತೆ ಒದಗಿಸಲಾಗಿತ್ತು. ಈ ಪ್ರದೇಶದಲ್ಲಿನ ಅಂಗಡಿಗಳನ್ನು, ಮಾರುಕಟ್ಟೆಗಳನ್ನು ಮುಚ್ಚಲಾಗಿತ್ತು.

ಆಹ್ವಾನ: ಯಾತ್ರೆಯ ಸಮಾರೋಪದ ಭಾಗವಾಗಿ, ಎಸ್‌.ಕೆ. ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುವ ರ‍್ಯಾಲಿಗೆ 22 ವಿರೋಧ ಪಕ್ಷಗಳನ್ನು ಆಹ್ವಾನಿಸಲಾಗಿದೆ.

ಈ ರ‍್ಯಾಲಿಯಲ್ಲಿ 12 ವಿರೋಧ ಪಕ್ಷಗಳ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಟಿಎಂಸಿ, ಸಮಾಜವಾದಿ ಪಕ್ಷ ಹಾಗೂ ತೆಲುಗು ದೇಶಂ ಪಾರ್ಟಿ ಈ ರ‍್ಯಾಲಿಯಿಂದ ದೂರ ಉಳಿಯಲಿರುವ ಪ್ರಮುಖ ಪಕ್ಷಗಳಾಗಿವೆ ಎಂದು ಮೂಲಗಳು ಹೇಳಿವೆ.

ಯಾತ್ರೆಯು ಶುಕ್ರವಾರ ಜಮ್ಮು–ಕಾಶ್ಮೀರ ಕೇಂದ್ರಾಡಳಿತ ಪ್ರದೇಶವನ್ನು ಪ್ರವೇಶಿಸಿದ ಸಂದರ್ಭದಲ್ಲಿ, ಕಾಜಿಗುಂಡ ಬಳಿ ಭದ್ರತಾ ಲೋಪವಾಗಿತ್ತು ಎಂದು ಕಾಂಗ್ರೆಸ್‌ನ ಹಿರಿಯ ನಾಯಕರು ಆರೋಪಿಸಿದ್ದರು. ಆದರೆ, ಜಮ್ಮು–ಕಾಶ್ಮೀರ ಪೊಲೀಸರು ಈ ಆರೋಪಗಳನ್ನು ತಳ್ಳಿ ಹಾಕಿದ್ದರು.

‘ಭರವಸೆ ಈಡೇರಿಸಿದ್ದೇವೆ’: ‘ಶ್ರೀನಗರದ ಲಾಲ್‌ಚೌಕ್‌ನಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸುವ ಮೂಲಕ, ದೇಶಕ್ಕೆ ನಾವು ನೀಡಿದ್ದ ಭರವಸೆಯನ್ನು ಈ ದಿನ ಈಡೇರಿಸಿದಂತಾಗಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಧ್ವಜಾರೋಹಣ ನಂತರ ಅವರು ಈ ಬಗ್ಗೆ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

‘ದ್ವೇಷ ಸೋಲುತ್ತದೆ. ಪ್ರೀತಿಯು ಯಾವಾಗಲೂ ಗೆಲ್ಲುತ್ತದೆ. ಭಾರತವು ಭರವಸೆಗಳ ಹೊಸ ಉದಯ ಕಾಣಲಿದೆ’ ಎಂದೂ ಟ್ವೀಟ್‌ನಲ್ಲಿ ಹೇಳಿದ್ದಾರೆ.

‘ಕಾಶ್ಮೀರಿ ಪಂಡಿತರಿಗಾಗಿ ಕೇಂದ್ರ ಸರ್ಕಾರ ಏನು ಮಾಡಿದೆ?’

ನವದೆಹಲಿ: ಕಾಶ್ಮೀರಿ ಪಂಡಿತರ ಸಮಸ್ಯೆಗಳಿಗೆ ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಭಾರತ್ ಜೋಡೊ ಯಾತ್ರೆ'ಯ ವೇಳೆ ಕಾಶ್ಮೀರಿ ಪಂಡಿತರೊಂದಿಗೆ ನಡೆಸಿದ ಸಂವಾದದ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಅವರು ಕೇಂದ್ರ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ಕಾಶ್ಮೀರಿ ಪಂಡಿತ ಸಮುದಾಯವನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವುದು ಹೊರತುಪಡಿಸಿ, ಅವರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಏನು ಮಾಡಿದೆ ಎಂದು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಬಜೆಟ್: ಸರ್ವಪಕ್ಷಗಳ ಸಭೆ ಇಂದು

ನವದೆಹಲಿ (ಪಿಟಿಐ): ಬಜೆಟ್ ಅಧಿವೇಶನ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರವು ಸೋಮವಾರ ಸರ್ವ ಪಕ್ಷಗಳ ಸಭೆ ಕರೆದಿದೆ.

ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಷಿ ಅವರು ಸಂಸತ್ ಭವನದಲ್ಲಿ ಜನವರಿ 30ರ ಮಧ್ಯಾಹ್ನದ ವೇಳೆಗೆ ನಡೆಯುವ ಸಭೆಗೆ ಎಲ್ಲ ಪಕ್ಷಗಳ ಸದಸ್ಯರಿಗೆ ಆಹ್ವಾನ ನೀಡಿದ್ದಾರೆ.

ಬಜೆಟ್ ಅಧಿವೇಶನದಲ್ಲಿ ಚರ್ಚಿಸಲು ಯೋಜಿಸಿರುವ ವಿಷಯಗಳ ಕುರಿತು ವಿರೋಧ ಪಕ್ಷಗಳು ಈ ಸಭೆಯಲ್ಲೂ ಮಾತನಾಡುವ ನಿರೀಕ್ಷೆ ಇದೆ.

‘ಸಕಲ ಹಿಂದೂ ಸಮಾಜ’ ವತಿಯಿಂದ ಬಲಪಂಥೀಯ ಪಕ್ಷಗಳ ಕಾರ್ಯಕರ್ತರು ‘ಲವ್ ಜಿಹಾದ್’ ಮತ್ತು ‘ಲ್ಯಾಂಡ್ ಜಿಹಾದ್’ ವಿರುದ್ಧ ಮುಂಬೈನಲ್ಲಿ ಭಾನುವಾರ ಬೃಹತ್ ಪ್ರತಿಭಟನೆ ನಡೆಸಿದರು. ಪ್ರಬಲ ಮತಾಂತರ ವಿರೋಧಿ ಕಾನೂನು ಜಾರಿಗೆ ತರಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಬಿಆರ್‌ಟಿ: ಎರಡು ಹೊಸ ಪಕ್ಷಿ ಪತ್ತೆ

ಚಾಮರಾಜನಗರ: ಬಿಳಿಗಿರಿರಂಗನಾಥಸ್ವಾಮಿ ದೇವಾಲಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಮುಕ್ತಾಯಗೊಂಡ ಪಕ್ಷಿ ಸಮೀಕ್ಷೆಯಲ್ಲಿ ಎರಡು ಹೊಸ ಪ್ರಭೇದ ಪತ್ತೆಯಾಗಿವೆ.

ವಲಸೆ ಪಕ್ಷಿಗಳಾದ ನಾರ್ದರ್ನ್ ಶೆವೆಲರ್ (ಸಲಿಕೆ ರೀತಿಯ ಕೊಕ್ಕುಳ್ಳ ಬಾತು) ಹಾಗೂ ನಾರ್ದರ್ನ್ ಪಿನ್‌ಟೇಲ್ (ಸೂಜಿಬಾಲದ ಬಾತು) ಪಕ್ಷಿಗಳನ್ನು ಸ್ವಯಂಸೇವಕರು ಹೊಸದಾಗಿ ಗುರುತಿಸಿದ್ದಾರೆ ಎಂದು ಬಿಆರ್‌ಟಿಯ ನಿರ್ದೇಶಕಿ ಮತ್ತು ಡಿಸಿಎಫ್ ದೀಪ್ ಜೆ.ಕಾಂಟ್ರಾಕ್ಟರ್ ಹೇಳಿದ್ದಾರೆ.

‘ಹಲವು ವರ್ಷದ ನಂತರ ದಿ ಗ್ರೇಟ್ ಹಾರ್ನ್‌ಬಿಲ್ ಪಕ್ಷಿಯೂ ಬಿಆರ್‌ಟಿಯಲ್ಲಿ ಕಂಡು ಬಂದಿದೆ. 2012ರಲ್ಲಿ ವೈಜ್ಞಾನಿಕವಾಗಿ ಪಕ್ಷಿ ಗಣತಿ ಮಾಡಲಾಗಿತ್ತು. ಆಗ 272 ಪ್ರಭೇದ ಗುರುತಿಸಲಾಗಿತ್ತು. ಈ ಬಾರಿ ಸ್ವಯಂ ಸೇವಕರು 274 ಪಕ್ಷಿಗಳನ್ನು ಗುರುತಿಸಿದ್ದಾರೆ’ ಎಂದು ಹೇಳಿದ್ದಾರೆ.

ಖಾಲಿಸ್ತಾನ ಪರ ಬರಹ: ಇಬ್ಬರ ಸೆರೆ

ನವದೆಹಲಿ (ಪಿಟಿಐ): ‘ಪಶ್ಚಿಮ ದೆಹಲಿಯ ಪ್ರದೇಶಗಳಲ್ಲಿನ ಗೋಡೆಗಳ ಮೇಲೆ ‘ದೇಶ ವಿರೋಧಿ’ ಹಾಗೂ ‘ಖಾಲಿಸ್ತಾನದ ಪರ ಬರಹ’ಗಳನ್ನು ಬರೆದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳನ್ನು ದೆಹಲಿ ಪೊಲೀಸರ ವಿಶೇಷ ತಂಡ ಬಂಧಿಸಿದೆ’ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

‘ಪಶ್ಚಿಮ ದೆಹಲಿಯ ವಿಕಾಸ್‌ಪುರಿ, ಜನಕ್‌ಪುರಿ, ಪಶ್ಚಿಮ್‌ವಿಹಾರ್, ಪೀರಾಗಢಿ ಸೇರಿ ಹಲವು ಪ್ರದೇಶಗಳಲ್ಲಿ ಜ.19ರ ಬೆಳಗಿನ ಸಮಯದಲ್ಲಿ ‘ಖಾಲಿಸ್ತಾನ ಜಿಂದಾಬಾದ್’, ‘2020 ಜನಮತ ಗಣನೆ’ ಎಂಬ ಬರಹಗಳನ್ನು ಬರೆಯಲಾಗಿತ್ತು’ ಎಂದರು.

ತುರ್ತುನಿರ್ಗಮನ ಬಾಗಿಲ ಹಿಡಿಕೆ ಎಳೆಯಲು ಯತ್ನ: ಎಫ್‌ಐಆರ್

ಮುಂಬೈ (ಪಿಟಿಐ): ನಾಗ್ಪುರದಿಂದ ಮುಂಬೈಗೆ ಇಂಡಿಗೊ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರೊಬ್ಬರು ವಿಮಾನವು ಇಳಿಯುವ ವೇಳೆ ತುರ್ತು ನಿರ್ಗಮನ ಬಾಗಿಲ ಹಿಡಿಕೆ ಎಳೆಯಲು ಪ್ರಯತ್ನಿಸಿದರು ಎಂದು ವಿಮಾನಯಾನ ಸಂಸ್ಥೆ ಭಾನುವಾರ ಹೇಳಿದೆ.

‘ಹಿಡಿಕೆ ತೆರೆಯಲು ಪ್ರಯತ್ನಿಸಿದ ಪ್ರಯಾಣಿಕನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಸುರಕ್ಷತೆಯ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ’ ಎಂದು ಇಂಡಿಗೊ ಪ್ರಕಟಣೆಯಲ್ಲಿ ತಿಳಿಸಿದೆ.

‘ಪ್ರಯಾಣಿಕನ ನಡೆ ಗಮನಿಸಿದ ವಿಮಾನದ ಸಿಬ್ಬಂದಿ ಕ್ಯಾಪ್ಟನ್‌ನನ್ನು ಎಚ್ಚರಿಸಿದ್ದಾರೆ. ಈ ಕುರಿತು ಉಳಿದ ಪ್ರಯಾಣಿಕರಿಗೂ ಎಚ್ಚರಿಕೆ ನೀಡಲಾಗಿದೆ’ ಎಂದು ತಿಳಿಸಿರುವ ಇಂಡಿಗೊ, ಘಟನೆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

ಯುದ್ಧವಿಮಾನ ಪತನ: ಮಿರಾಜ್ ಬ್ಲ್ಯಾಕ್ ಬಾಕ್ಸ್ ಪತ್ತೆ

ಮೊರೆನಾ (ಪಿಟಿಐ): ಮಧ್ಯಪ್ರದೇಶದಲ್ಲಿ ಶನಿವಾರ ಪತನವಾದ ಭಾರತೀಯ ವಾಯುಪಡೆಯ ಎರಡು ಯುದ್ಧ ವಿಮಾನಗಳಲ್ಲಿ ಒಂದಾದ ಮಿರಾಜ್–2000ದ ಬ್ಲ್ಯಾಕ್ ಬಾಕ್ಸ್ , ಮತ್ತೊಂದು ಯುದ್ಧವಿಮಾನ ಸುಖೋಯ್–30 ಎಂಕೆಐಯ ಬ್ಲ್ಯಾಕ್ ಬಾಕ್ಸ್‌ನ ಒಂದು ಭಾಗ ಪತ್ತೆಯಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಮಿರಾಜ್ ಯುದ್ಧವಿಮಾನದ ಬ್ಲ್ಯಾಕ್ ಬಾಕ್ಸ್ ಪಹಾಡ್‌ಗಢ ಪ್ರದೇಶದಲ್ಲಿ ಬಿದ್ದಿರುವ ಅವಶೇಷದಲ್ಲಿ ದೊರಕಿದೆ. ಸುಖೋಯ್ ಯುದ್ಧವಿಮಾನದ ಬ್ಲ್ಯಾಕ್ ಬಾಕ್ಸ್‌ನ ಭಾಗವು ಭರತ್‌ಪುರದಲ್ಲಿ ದೊರಕಿದೆ. ಬ್ಲ್ಯಾಕ್ ಬಾಕ್ಸ್‌ನ ಉಳಿದ ಭಾಗಗಳಿಗಾಗಿ ಐಎಎಫ್, ಪೊಲೀಸರು ಶೋಧ ನಡೆಸಿದ್ದಾರೆ ಎಂದು ಮೊರೆನಾ ಎಸ್‌ಪಿ ತಿಳಿಸಿದ್ದಾರೆ.

ರಾಜಸ್ಥಾನ ವಿ.ವಿ: ಪ್ರಧಾನಿ ಮೋದಿ ಕುರಿತ ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನ

10 ವಿದ್ಯಾರ್ಥಿಗಳ ಅಮಾನತು

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಕುರಿತು ಬಿಬಿಸಿ ನಿರ್ಮಿಸಿರುವ ‘ಇಂಡಿಯಾ: ದಿ ಮೋದಿ ಕ್ವೆಶ್ಚನ್’ ಸಾಕ್ಷ್ಯಚಿತ್ರ ಪ್ರದರ್ಶಿಸಿದ್ದಕ್ಕಾಗಿ ರಾಜಸ್ಥಾನದ ಕೇಂದ್ರೀಯ ವಿಶ್ವವಿದ್ಯಾಲಯದ ಆಡಳಿತವು 10 ವಿದ್ಯಾರ್ಥಿಗಳನ್ನು ಎರಡು ವಾರಗಳವರೆಗೆ ಅಮಾನತು ಮಾಡಿದೆ’ ಎಂದು ದಿ ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟಿಸ್ ಎಂಬ ಸ್ವಯಂ ಸೇವಾ ಸಂಸ್ಥೆಯು ತಿಳಿಸಿದೆ.

‘ಮುಸ್ಲಿಂ ಸಮುದಾಯಕ್ಕೆ ಸೇರಿದ ಎಂಟು ಮಂದಿ ಹಾಗೂ ಕ್ರಿಶ್ಚಿಯನ್ ಮತ್ತು ಹಿಂದೂ ಸಮುದಾಯದ ತಲಾ ಒಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯ ಹಾಗೂ ವಸತಿ ನಿಲಯದಿಂದ ಅಮಾನತುಗೊಳಿಸಲಾಗಿದೆ. ಇವರು ಇದೇ 26ರಂದು ತಮ್ಮ ಮೊಬೈಲ್ ಹಾಗೂ ಲ್ಯಾಪ್‌ಟಾಪ್‌ಗಳಲ್ಲಿ ನಿಷೇಧಿತ ಸಾಕ್ಷ್ಯಚಿತ್ರ ವೀಕ್ಷಿಸಿದ್ದರು’ ಎಂದು ಪಿಯುಸಿಎಲ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

‘ಸಾಕ್ಷ್ಯಚಿತ್ರ ವೀಕ್ಷಿಸಿದ್ದಕ್ಕಾಗಿ ವಿದ್ಯಾರ್ಥಿಗಳನ್ನು ಅಮಾನತು ಮಾಡಿಲ್ಲ. ವಿ.ವಿ. ಆಡಳಿತ ನೀಡಿರುವ ಸೂಚನೆ ಪಾಲಿಸದಿರುವುದಕ್ಕೆ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.’ ಎಂದು ವಿಶ್ವವಿದ್ಯಾಲಯದ ಆಡಳಿತವು ಸ್ಪಷ್ಟಪಡಿಸಿದೆ.

ಬಿಬಿಸಿ ಕಚೇರಿ ಹೊರಭಾಗದಲ್ಲಿ ಭಿತ್ತಿಪತ್ರ

‘ಮೋದಿ ಕುರಿತು ಸಾಕ್ಷ್ಯಚಿತ್ರ ನಿರ್ಮಿಸಿರುವ ಬಿಬಿಸಿ ಕ್ರಮ ವಿರೋಧಿಸಿ ಹಿಂದೂ ಸೇನಾ ಕಾರ್ಯಕರ್ತರು ಭಾನುವಾರ ಇಲ್ಲಿನ ಕಸ್ತೂರಬಾ ಗಾಂಧಿ ಮಾರ್ಗದಲ್ಲಿರುವ ಬಿಬಿಸಿ ಕಚೇರಿ ಹೊರಭಾಗದಲ್ಲಿ ಬಿಬಿಸಿ ವಿರೋಧಿ ಭಿತ್ತಿಪತ್ರಗಳನ್ನು ಅಂಟಿಸಿದ್ದಾರೆ.

‘ಬಿಬಿಸಿಯು ಭಾರತದ ಏಕತೆ ಹಾಗೂ ಸಮಗ್ರತೆಗೆ ಧಕ್ಕೆಯುಂಟು ಮಾಡಲಿದೆ. ಹೀಗಾಗಿ ಅದನ್ನು ನಿಷೇಧಿಸಬೇಕು’ ಎಂದು ಹಿಂದೂ ಸೇನಾ ಮುಖ್ಯಸ್ಥ ವಿಷ್ಣು ಗುಪ್ತಾ ಆಗ್ರಹಿಸಿದ್ದಾರೆ.

‘ಬಿಬಿಸಿ ಕಚೇರಿ ಹೊರ ಭಾಗದಲ್ಲಿ ಭಿತ್ತಿಪತ್ರ ಅಂಟಿಸಿರುವುದು ಗಸ್ತು ಸಿಬ್ಬಂದಿ ಗಮನಕ್ಕೆ ಬಂದಿತ್ತು. ಅದನ್ನು ಅವರು ತೆರವುಗೊಳಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್

ನವದೆಹಲಿ (ಪಿಟಿಐ): ಗುಜರಾತ್ ಗಲಭೆ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರವನ್ನು ನಿಷೇಧಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸಲ್ಲಿಸಲಾಗಿದೆ.

ವಕೀಲ ಎಂ.ಎಲ್.ಶರ್ಮಾ ಎಂಬುವವರು ಪಿಐಎಲ್ ಸಲ್ಲಿಸಿದ್ದಾರೆ. ‘ಕೇಂದ್ರದ ನಡೆ ಅಸಾಂವಿಧಾನಿಕ, ದುರುದ್ದೇಶಪೂರಿತ ಹಾಗೂ ಸರ್ವಾಧಿಕಾರಿ ಧೋರಣೆಯಿಂದ ಕೂಡಿದೆ. ಹೀಗಾಗಿ ಸಾಕ್ಷ್ಯಚಿತ್ರವನ್ನು ನಿಷೇಧಿಸಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಜ.23ರಂದು ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಬೇಕು’ ಎಂದು ಕೋರಿದ್ದಾರೆ.

ವಿಭಜಿಸುವ ಯತ್ನ: ಮೋದಿ ಎಚ್ಚರಿಕೆ

‘ದೇಶದ ಜನರಲ್ಲಿ ಭಿನ್ನಾಭಿಪ್ರಾಯದ ಬೀಜ ಬಿತ್ತುವ, ಆ ಮೂಲಕ ಜನರನ್ನು ವಿಭಜಿಸುವ ಯತ್ನಗಳ ಬಗ್ಗೆ ಎಚ್ಚರದಿಂದಿರಬೇಕು’ ಎಂದು ಹೇಳಿದ ಪ್ರಧಾನಿ ನರೇಂದ್ರ ಮೋದಿ, ಇಂಥ ಪ್ರಯತ್ನಗಳು ಫಲ ನೀಡವು ಎಂದು ಪ್ರತಿಪಾದಿಸಿದರು.

ಇಲ್ಲಿನ ಕಂಟೋನ್ಮೆಂಟ್‌ನಲ್ಲಿರುವ ಕಾರಿಯಪ್ಪ ಮೈದಾನದಲ್ಲಿ ನಡೆದ ಎನ್‌ಸಿಸಿ ರ‍್ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಭಾರತದ ಭವಿಷ್ಯ ಉಜ್ವಲವಾಗಲು, ಅಭಿವೃದ್ಧಿ ಸಾಧಿಸಲು ಏಕತೆ ಎಂಬ ಮಂತ್ರವೊಂದರಿಂದ ಸಾಧ್ಯ’ ಎಂದು ಮೋದಿ ಅವರು ಹೇಳಿದರು.

ತೆವಳುತ್ತಿದೆ ರಾಜ್ಯದ ರೈಲು ಯೋಜನೆ

ಒಂದನೇ ಪುಟದಿಂದ

ಇದರ ಯೋಜನಾ ಮೊತ್ತ ₹974 ಕೋಟಿ ಆಗಿತ್ತು. ಯೋಜನಾ ಮೊತ್ತವು ಎರಡೂವರೆ ಪಟ್ಟು (₹2,432 ಕೋಟಿ) ಹೆಚ್ಚಾಗಿದೆ. ಭೂಸ್ವಾಧೀನ ಸಮಸ್ಯೆಯಿಂದಾಗಿ ಈ ಮಾರ್ಗದ ಕಾಮಗಾರಿ ಕುಂಟುತ್ತಾ ಸಾಗಿದೆ. ಹಿಗ್ಗಿರುವ ಯೋಜನಾ ಮೊತ್ತವನ್ನು ಭರಿಸುವ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯದ ನಡುವೆ ಹಗ್ಗಜಗ್ಗಾಟ ನಡೆದಿರುವುದು ಸಹ ಕಾಮಗಾರಿ ವಿಳಂಬಕ್ಕೆ ಮತ್ತೊಂದು ಕಾರಣ. ಈ ಯೋಜನೆಯ ಭಾಗವಾದ ತುಮಕೂರು–ಕೊರಟಗೆರೆ (30 ಕಿ.ಮೀ) ಮಾರ್ಗದ ಕಾಮಗಾರಿಗೆ ರೈಲ್ವೆ ಇಲಾಖೆ 2022ರ ನವೆಂಬರ್‌ನಲ್ಲಿ ಟೆಂಡರ್ ಕರೆದಿದೆ.

ಶಿವಮೊಗ್ಗ–ಹರಿಹರದ ಮಾರ್ಗದ ಕಥೆ ಇದಕ್ಕಿಂತ ಭಿನ್ನವಿಲ್ಲ. ಈ ಮಾರ್ಗದಲ್ಲಿ 2016ರ ಮಾರ್ಚ್‌ನಲ್ಲಿ ರೈಲುಗಳು ಸಂಚರಿಸಬೇಕಿತ್ತು. 2026ರ ಮಾರ್ಚ್‌ನಲ್ಲಿ ಈ ಕಾಮಗಾರಿ ಮುಗಿಯಬಹುದು ಎಂಬ ವಿಶ್ವಾಸದಲ್ಲಿ ರೈಲ್ವೆ ಇಲಾಖೆ ಇದೆ. ಗದಗ– ವಾಡಿ ಮಾರ್ಗದ ಕೆಲಸವು 2018ರ ಡಿಸೆಂಬರ್‌ರಲ್ಲಿ ಮುಗಿಯಬೇಕಿತ್ತು. ಈ ಕಾಮಗಾರಿ 2025ರ ಜೂನ್‌ಗೆ ಮುಗಿಯಲಿದೆ ಎಂದು ರೈಲ್ವೆ ಇಲಾಖೆ ಹೇಳಿಕೊಂಡಿದೆ.

ಅನುದಾನ ಆರು ಪಟ್ಟು ಹೆಚ್ಚಾದರೂ ಕಾಣದ ಪ್ರಗತಿ: ‘ಕರ್ನಾಟಕದ ರೈಲ್ವೆ ಯೋಜನೆಗಳಿಗೆ 2022–23ನೇ ಸಾಲಿನಲ್ಲಿ ₹6,091 ಕೋಟಿ ಹಣ ಒದಗಿಸಲಾಗಿದೆ. ಇದು ಕರ್ನಾಟಕಕ್ಕೆ ವರ್ಷವೊಂದರಲ್ಲಿ ಒದಗಿಸಿರುವ ದಾಖಲೆ ಮೊತ್ತ’ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

‘2009–2014ರ ಅವಧಿಗೆ ಹೋಲಿಸಿದರೆ ವರ್ಷವೊಂದಕ್ಕೆ ಒದಗಿಸಿರುವ ಅನುದಾನ ಆರು ಪಟ್ಟು (ಶೇ 625) ಹೆಚ್ಚಾಗಿದೆ. 2009–14ರ ಅವಧಿಯಲ್ಲಿ ವಾರ್ಷಿಕ ₹835 ಕೋಟಿ ಒದಗಿಸಲಾಗುತ್ತಿತ್ತು. ಹೊಸ ಮಾರ್ಗಗಳ ನಿರ್ಮಾಣ, ದ್ವಿಪಥ, ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಒದಗಿಸುತ್ತಿರುವ ಹಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ’ ಎಂದು ಹೇಳಿದ್ದಾರೆ. ಅನುದಾನ ನೀಡಿಕೆ ಪ್ರಮಾಣ ಹೆಚ್ಚಾದರೂ ಕಾಮಗಾರಿಗಳಿಗೆ ವೇಗ ಸಿಕ್ಕಿಲ್ಲ. ಕೇಂದ್ರದ ಮಾತನ್ನು ನಂಬುವುದಾದರೆ ಹಲವು ಹೊಸ ಮಾರ್ಗಗಳಲ್ಲಿ ರೈಲುಗಳ ಸಂಚಾರ ಆರಂಭವಾಗಬೇಕಿತ್ತು. ಆದರೆ, ಹಾಗೆ ಆಗುತ್ತಿಲ್ಲ’ ಎಂಬುದು ರೈಲ್ವೆ ಹೋರಾಟಗಾರರ ವಾದ.

ಮಧ್ಯಮ ವರ್ಗದತ್ತ ಪ್ರಧಾನಿ ಚಿತ್ತ

ಒಂದನೇ ಪುಟದಿಂದ

ಮೂವರು ಕಾರ್ಯದರ್ಶಿಗಳು ಸಭೆಯಲ್ಲಿ ವಿಷಯ ಮಂಡನೆ ಮಾಡಿದರು. ಎಂಟು ವರ್ಷಗಳ ಅವಧಿಯಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಮೋದಿ ನೇತೃತ್ವದ ಸರ್ಕಾರದ ಒಟ್ಟಾರೆ ಕೆಲಸಗಳನ್ನು ಒಳಗೊಂಡ ವಿಷಯವನ್ನು ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಮಂಡಿಸಿದರು. ಈ ವಿಸ್ತೃತ ವಿಷಯ ಮಂಡನೆಯು ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಒತ್ತು ನೀಡಿತು. ಹಲವು ಐಐಟಿ, ಐಐಎಂ ಹಾಗೂ ಐಐಎಸ್‌ಸಿ ಕೇಂದ್ರಗಳನ್ನು ದೇಶದ ವಿವಿಧೆಡೆ ಸ್ಥಾಪಿಸಲಾಗಿದೆ ಎಂದು ಗೌಬಾ ಹೇಳಿದರು.

ಪ್ರಾಥಮಿಕ, ಪ್ರೌಢ, ಉನ್ನತ ಶಿಕ್ಷಣ ಸೇರಿದಂತೆ ಎಲ್ಲ ವಿಭಾಗದಲ್ಲಿಯೂ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಹೆಚ್ಚಳವಾಗಿದ್ದು, ಮೂಲಸೌಕರ್ಯಗಳು ಅಭಿವೃದ್ಧಿಯಾಗಿವೆ ಎಂದು ತಿಳಿಸಿದರು.

ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ ಕಾರ್ಯದರ್ಶಿ ಅನುರಾಗ್ ಜೈನ್ ಅವರು ತಮ್ಮ ವಿಷಯ ಮಂಡನೆ ವೇಳೆ, ಸರ್ಕಾರ ಆರಂಭಿಸಿರುವ ವಿವಿಧ ಯೋಜನೆಗಳ ಮೇಲೆ ಬೆಳಕು ಚೆಲ್ಲಿದರು. ಕಾಮಗಾರಿ ಪೂರ್ಣಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಸ್ಥಿತಿಗತಿಯ ಮಾಹಿತಿಯನ್ನು ಅವರು ಒದಗಿಸಿದರು.

ಕೇಂದ್ರ ಸರ್ಕಾರದ ಕೆಲಸಗಳನ್ನು ವಿವಿಧ ಸಾಮಾಜಿಕ ಜಾಲತಾಣಗಳ ಮೂಲಕ ಹೇಗೆ ಪ್ರಚುರಪಡಿಸಬಹುದು ಎಂಬುದನ್ನು ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಅಪೂರ್ವ ಚಂದ್ರ ಅವರು ವಿವರಿಸಿದರು.

ಗುಂಡೇಟಿಗೆ ಒಡಿಶಾ ಸಚಿವ ಬಲಿ

ಒಂದನೇ ಪುಟದಿಂದ

ಗುಂಡು ಬಿದ್ದ ಜಾಗದಲ್ಲಿ ಕೈಹಿಡಿದು, ಕಿಶೋರ್ ದಾಸ್ ಅವರು ಕುಸಿದು ಬಿದ್ದ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ನಬ ದಾಸ್ ಅವರ ಮೇಲಿನ ದಾಳಿಯಂತಹ ದುರದೃಷ್ಟದ ಸುದ್ದಿಕೇಳಿ ನನಗೆ ಆಘಾತವಾಗಿದೆ. ಈ ದಾಳಿಯನ್ನು ಖಂಡಿಸುತ್ತೇನೆ

ನವೀನ್ ಪಟ್ನಾಯಕ್, ಒಡಿಶಾ ಮುಖ್ಯಮಂತ್ರಿ

ಕುಸಿದುಬಿದ್ದ ಸಚಿವರನ್ನು ಸ್ಥಳೀಯರು ಮತ್ತು ಬೆಂಬಲಿಗರು ಕಾರಿನಲ್ಲಿಯೇ ಸ್ಥಳೀಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿಂದ ಅವರನ್ನು ಹೆಲಿಕಾಪ್ಟರ್ ಮೂಲಕ ಭುವನೇಶ್ವರದ ಅಪೋಲೊ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಗುಂಡೇಟಿನ ಗಾಯಗಳಿಗೆ ಅಲ್ಲಿ ಚಿಕಿತ್ಸೆ ನೀಡಲಾಯಿತು. ‘ಒಂದು ಗುಂಡು ಹೃದಯ, ಶ್ವಾಸಕೋಶದ ಎಡಭಾಗವನ್ನು ಹಾದು, ದೇಹದಿಂದ ಹೊರಗೆ ಹೋಗಿತ್ತು. ಇದರಿಂದ ತೀವ್ರಮಟ್ಟದ ಆಂತರಿಕ ರಕ್ತಸ್ರಾವವಾಗಿತ್ತು. ಗುಂಡಿನಿಂದಾಗಿದ್ದ ಗಾಯವನ್ನು ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಲಾಯಿತು. ಹೃದಯಬಡಿತವನ್ನು ಸಹಜಸ್ಥಿತಿಗೆ ತರಲು ಯತ್ನಿಸಲಾಯಿತು. ಆದರೆ, ಅವರು ಚೇತರಿಸಿಕೊಳ್ಳಲಿಲ್ಲ’ ಎಂದು ಅಪೋಲೊ ಆಸ್ಪತ್ರೆಯು ಪ್ರಕಟಣೆಯಲ್ಲಿ ಹೇಳಿದೆ.

‘ಬಲವಂತದ ಮತಾಂತರ: ವಿಸ್ತೃತ ಪೀಠಕ್ಕೆ ವರ್ಗಾಯಿಸಿ’

ನವದೆಹಲಿ (ಪಿಟಿಐ): ಬಲವಂತದ ಮತಾಂತರಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಐವರು ನ್ಯಾಯಮೂರ್ತಿಗಳನ್ನೊಳಗೊಂಡ ವಿಸ್ತೃತ ಪೀಠಕ್ಕೆ ವರ್ಗಾಯಿಸುವಂತೆ ಕೋರಿ ವಕೀಲ ಅಶ್ವಿನಿಕುಮಾರ್ ಉಪಾಧ್ಯಾಯ ಎಂಬುವರು ಭಾನುವಾರ ಸುಪ್ರೀಂ ಕೋರ್ಟ್‌ಗೆ ಹೊಸದಾಗಿ ಅರ್ಜಿ ಸಲ್ಲಿಸಿದ್ದಾರೆ.

ಅಂತರಧರ್ಮೀಯ ವಿವಾಹಕ್ಕಾಗಿ ಮತಾಂತರಗೊಳ್ಳುವುದನ್ನು ನಿಯಂತ್ರಿಸುವ ಉದ್ದೇಶದಿಂದ ಕೆಲ ರಾಜ್ಯಗಳು ಕಾನೂನು ಜಾರಿಗೊಳಿಸಿದ್ದು, ಇವುಗಳ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ತ್ರಿಸದಸ್ಯ ನ್ಯಾಯ ಪೀಠವು ಸೋಮವಾರ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಭಕ್ತಿಯ ಮೇಲ್ಮೆಯನ್ನು ಸಾರಿದ ಶ್ರೀ ಮಧ್ವಾಚಾರ್ಯರು

• ಎಸ್. ಜಯಸಿಂಹ

ಇಂದು ಮಧ್ವನವಮಿ

ಹದಿಮೂರನೆಯ ಶತಮಾನದಲ್ಲಿದ್ದ ಶ್ರೀಮನ್ಮಧ್ವಾಚಾರ್ಯರು ಈ ಜಗತ್ತು ಕಂಡ ಅದ್ಭುತ ದಾರ್ಶನಿಕರು. ತ್ರಿಮತಾಚಾರ್ಯರಲ್ಲಿ ಒಬ್ಬರೆಂದು ಪ್ರಸಿದ್ಧರಾದ ಅವರು ಕನ್ನಡಿಗರೆಂಬುದು ಹೆಮ್ಮೆಯ ವಿಷಯ. ‘ಮಧ್ವ’ ಎಂಬ ಆಗಮೋಕ್ತನಾಮದಿಂದ ಆಚಾರ್ಯರು ಪ್ರಖ್ಯಾತರಾಗಿದ್ದರೂ ಅವರ ಆಶ್ರಮನಾಮ ‘ಪೂರ್ಣಪ್ರಜ್ಞ’, ಪೀಠಾರೋಹಣ ಕಾಲದಲ್ಲಿ ಗುರುಗಳಾದ ಅಚ್ಯುತಪ್ರೇಕ್ಷರಿಂದ ಪಡೆದ ಹೆಸರು ‘ಆನಂದತೀರ್ಥ’. ಇವಲ್ಲದೇ ಪೂರ್ಣಬೋಧ, ಅಲವಬೋಧ, ಪೂರ್ಣಪ್ರಮತಿ, ದಶಪ್ರಮತಿ, ಸರ್ವಜ್ಞಾಚಾರ್ಯ ಮುಂತಾದ ಹೆಸರುಗಳಿಂದಲೂ ಅವರನ್ನು ಕರೆಯುವುದುಂಟು.

ವೈದಿಕ ವಾಙ್ಮಯದಲ್ಲಿ ಅಪೂರ್ವ ಪಾಂಡಿತ್ಯವನ್ನು ಹೊಂದಿದ್ದ ಮಧ್ವಾಚಾರ್ಯರು, ಬ್ರಹ್ಮಸೂತ್ರಗಳಿಗೆ ಅಲ್ಲಿಯ ತನಕ ಹೊರಬಂದಿದ್ದ ಭಾಷ್ಯಗಳಿಗಿಂತಲೂ ವಿಭಿನ್ನ ಹಾಗೂ ವಿಶಿಷ್ಟ ರೀತಿಯಲ್ಲಿ ಭಾಷ್ಯವನ್ನು ರಚಿಸಿದರು. ಹತ್ತೂ ಉಪನಿಷತ್ತುಗಳಿಗೆ ವ್ಯಾಖ್ಯಾನ ಬರೆದರು. ತಮ್ಮ ನಿಲುವನ್ನು ಪ್ರತಿಪಾದಿಸಲು ಅನೇಕ ಗ್ರಂಥಗಳನ್ನು ರಚಿಸಿದರು. ಅವರು ರಚಿಸಿದ ಮೂವತ್ತೇಳು ಗ್ರಂಥಗಳಿಗೆ ಸರ್ವಮೂಲಗ್ರಂಥಗಳೆಂಬ ಹೆಸರಿದೆ. ಮಧ್ವಾಚಾರ್ಯರು ಭಾರತದಾದ್ಯಂತ ಎರಡು ಬಾರಿ ಸಂಚಾರ ಕೈಗೊಂಡರು. ಅನೇಕ ವಿದ್ವದ್ಗೋಷ್ಠಿಗಳಲ್ಲಿ ಭಾಗವಹಿಸಿ ತಮ್ಮ ನಿಲುವನ್ನು ಪ್ರತಿಪಾದಿಸಿದರು. ತಮ್ಮ ನಾಲ್ವರು ಮುಖ್ಯಶಿಷ್ಯರಾದ ಪದ್ಮನಾಭತೀರ್ಥ, ನರಹರಿತೀರ್ಥ, ಮಾಧವತೀರ್ಥ ಮತ್ತು ಅಕ್ಷೋಭ್ಯತೀರ್ಥರನ್ನು ತಾವು ಸಂಸ್ಥಾಪಿಸಿದ್ದ ದ್ವೈತಸಿದ್ಧಾಂತದ ಪ್ರಚಾರಕ್ಕೆ ನಿಯೋಜಿಸಿದರು. ಈ ನಾಲ್ಕು ಶಿಷ್ಯರಿಂದ ಮುಂದುವರೆದ ಮಠಗಳು ಕೆಲವು ಕವಲೊಡೆದು ಈ ಹೊತ್ತಿಗೂ ಮುಂದುವರೆದಿವೆ.

ಒಮ್ಮೆ ಉಡುಪಿಸಮೀಪದ ಮಲ್ಪೆಯ ಕಡಲತೀರದಲ್ಲಿ ದ್ವಾರಕೆಯಿಂದ ಬರುತ್ತಿದ್ದ ಹಡಗೊಂದರಲ್ಲಿ ದೈವದತ್ತವಾಗಿ ಲಭ್ಯವಾದ ಗೋಪೀಚಂದನದಿಂದಾವೃತ್ತವಾದ ಬಾಲಕೃಷ್ಣನ ಪುಟ್ಟ ವಿಗ್ರಹವನ್ನು ಉಡುಪಿಯ ಸರೋವರದ ದಂಡೆಯ ಮೇಲೆ ಆಚಾರ್ಯರು ಪ್ರತಿಷ್ಠಾಪಿಸಿದರು. ಕಡಗೋಲು ಮತ್ತು ಹಗ್ಗವನ್ನು ಹಿಡಿದ ಸಾಲಿಗ್ರಾಮ ಶಿಲೆಯ ಬಾಲಕೃಷ್ಣನ ಆ ಸುಂದರ ವಿಗ್ರಹದ ಪೂಜೆಗಾಗಿ ಎಂಟು ಮಂದಿ ಶಿಷ್ಯರನ್ನು ನೇಮಿಸಿದರು. ಆ ಎಂಟು ಶಿಷ್ಯರ ಮಠಗಳೇ ಇಂದು ಪಲಿಮಾರು ಮಠ, ಅದಮಾರು ಮಠ, ಕೃಷ್ಣಾಪುರ ಮಠ, ಪುತ್ತಿಗೆ ಮಠ, ಶಿರೂರು ಮಠ, ಸೋದೆ ಮಠ, ಕಾಣಿಯೂರು ಮಠ ಮತ್ತು ಪೇಜಾವರ ಮಠಗಳೆಂದು ಪ್ರಸಿದ್ಧವಾಗಿವೆ. ಆಚಾರ್ಯರು ಏರ್ಪಡಿಸಿದ್ದ ಎರಡು ತಿಂಗಳ ಕೃಷ್ಣಪೂಜಾ ಪರ್ಯಾಯವನ್ನು ಎರಡು ವರ್ಷಗಳಿಗೆ ವಿಸ್ತರಿಸಿದ ಕೀರ್ತಿ ಮುಂದೆ ಸೋದಾ ಮಠದಲ್ಲಿ ಬಂದ ವಾದಿರಾಜರಿಗೆ ಸಲ್ಲುತ್ತದೆ.

ಆಚಾರ್ಯರು ತಮ್ಮ ಬದುಕು, ಬೋಧೆ ಮತ್ತು ಕೃತಿಗಳ ಮೂಲಕ ಪ್ರತಿಪಾದಿಸಿದ ಸಿದ್ಧಾಂತದ ಹೆಸರು ಮಧ್ವಸಿದ್ಧಾಂತ. ಅದು ಜಗತ್ತಿನಲ್ಲಿ ದ್ವೈತಮತವೆಂದು ಪ್ರಸಿದ್ಧವಾಗಿದೆ. ‘ತತ್ತ್ವವಾದ‘ ಎಂದೂ ಕರೆಯುತ್ತಾರೆ. ಮಧ್ವಸಿದ್ಧಾಂತದ ಸಾರವನ್ನು ಹೀಗೆ ಸಂಗ್ರಹಿಸಬಹುದು: ‘ಹರಿಯೇ ಸರ್ವೋತ್ತಮನು. ಕಣ್ಣಿಗೆ ಕಾಣುವ ಈ ಜಗತ್ತು ಸತ್ಯವಾದದ್ದು, ಪಂಚಭೇದಗಳು ಸತ್ಯವಾದದ್ದು. ಪರಬ್ರಹ್ಮಸ್ವರೂಪನಾದ ಶ್ರೀಹರಿಯಿಂದ ಭಿನ್ನರಾದ ಎಲ್ಲಾ ಜೀವರಾಶಿಗಳೂ ಪರಸ್ಪರ ತಾರತಮ್ಯವುಳ್ಳವರು; ಸ್ವರೂಪಭೂತವಾದ ಸುಖಾನುಭವವೇ ಮುಕ್ತಿ. ಇದಕ್ಕೆ ನಿಷ್ಕಲ್ಮಶವಾದ, ಮಹಾತ್ಮ್ಯಜ್ಞಾನಪೂರ್ವಕವಾದ ಭಕ್ತಿಯೇ ಮುಖ್ಯಸಾಧನ. ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳೆಂಬ ಮೂರು ಸಾಧಕ ಪ್ರಮಾಣಗಳಿವೆ. ಸಕಲಾಗಮಗಳಿಂದ ಶ್ರೀಹರಿಯೊಬ್ಬನೇ ಪ್ರತಿಪಾದ್ಯನು’.

ಮಧ್ವಾಚಾರ್ಯರ ವಿಚಾರಧಾರೆ, ಅದರಲ್ಲೂ ಮುಖ್ಯವಾಗಿ ಅವರು ರಚಿಸಿದ ಭಕ್ತಿಪ್ರಧಾನ ದ್ವಾದಶಸ್ತೋತ್ರವೇ ಮೊದಲಾದ ಸ್ತೋತ್ರಸಾಹಿತ್ಯ ಮುಂದೆ ಹರಿದಾಸಪಂಥಕ್ಕೆ ಸುಭದ್ರ ತಾತ್ವಿಕ ಸೋಪಾನವನ್ನೊದಗಿಸಿತು. ನರಹರಿತೀರ್ಥರು, ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ರಾಘವೇಂದ್ರರು ಮುಂತಾದ ಯತಿಗಳು; ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಮುಂತಾದ ಹರಿದಾಸರು ಸಹಸ್ರಾರು ಕನ್ನಡ ಕೀರ್ತನೆಗಳನ್ನು ರಚಿಸಲು ಅಗತ್ಯ ಸ್ಫೂರ್ತಿಯನ್ನು ನೀಡಿದವು. ಸುಮಾರು ಎಂಬತ್ತು ವರ್ಷಗಳ ಕಾಲ ಜೀವಿಸಿದ್ದ ಮಧ್ವಾಚಾರ್ಯರು ಮಾಘಶುದ್ಧ ನವಮಿಯ ದಿವಸ ಉಡುಪಿಯ ಅನಂತೇಶ್ವರನ ಸನ್ನಿಧಿಯಲ್ಲಿ ತಮ್ಮ ಅವತಾರವನ್ನು ಪೂರ್ಣಗೊಳಿಸಿದರು.



ಗುಜರಾತ್: ಪ್ರಶ್ನೆ ಪತ್ರಿಕೆ ಸೋರಿಕೆ, ಬಂಧನ

ಅಹಮದಾಬಾದ್ (ಪಿಟಿಐ): ಕಿರಿಯ ಗುಮಾಸ್ತ ನೇಮಕಾತಿಗಾಗಿ ಗುಜರಾತ್ ಸರ್ಕಾರವು ಭಾನುವಾರದಂದು (ಜ. 29) ನಡೆಸಲು ನಿರ್ಧರಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು, ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

‘ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಗುಜರಾತ್ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ವಡೋದರಾದಿಂದ 15 ಮಂದಿಯನ್ನು ಬಂಧಿಸಿದ್ದಾರೆ’ ಎಂದೂ ಅವರು ಹೇಳಿದರು.

‘1,181 ಕಿರಿಯ ಗುಮಾಸ್ತ ಹುದ್ದೆಗಳಿಗೆ (ಆಡಳಿತ/ ಲೆಕ್ಕಪತ್ರ ನಿರ್ವಹಣೆ) 9.53 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ರಾಜ್ಯದ 2,965 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿತ್ತು. ಪರೀಕ್ಷೆಗೂ ಮುನ್ನವೇ, ಭಾನುವಾರ ಬೆಳಿಗ್ಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ಶಂಕಿತನೊಬ್ಬನನ್ನು ಬಂಧಿಸಿ, ಪ್ರಶ್ನೆ ಪತ್ರಿಕೆಯನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆಯನ್ನು ಮುಂದೂಡಲಾಗಿದೆ’ ಎಂದು ಗುಜರಾತ್ ಪಂಚಾಯಿತಿ ಸೇವಾ ನೇಮಕಾತಿ ಮಂಡಳಿಯು ತಿಳಿಸಿದೆ.

ರಾಜ್ಯ ಪಂಚಾಯತ್ ಇಲಾಖೆಯ ಅಭಿವೃದ್ಧಿ ಆಯುಕ್ತ ಸಂದೀಪ್ ಕುಮಾರ್ ಅವರು, ‘ಮುಂಬರುವ 100 ದಿನಗಳಲ್ಲಿ ಪುನಃ ಪರೀಕ್ಷೆ ನಡೆಸಲಾಗುವುದು’ ಎಂದು ಹೇಳಿದ್ದಾರೆ.

ಪರೀಕ್ಷೆ ರದ್ದಾದ ವಿಷಯ ತಿಳಿಯುವ ಮುಂಚೆಯೇ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿದ್ದ ಅನೇಕ ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು. ಎನ್‌ಎಸ್‌ಯುಐ ಸದಸ್ಯರು ರಸ್ತೆಗಳನ್ನು ಬಂದ್ ಮಾಡಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

‘ಮುಂದಿನ ಪರೀಕ್ಷೆಗೆ, ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರ ಆಧಾರದ ಮೇಲೆ ತಮ್ಮ ಊರಿನಿಂದ ಪರೀಕ್ಷಾ ಕೇಂದ್ರಗಳಿಗೆ ಗುಜರಾತ್ ರಾಜ್ಯ ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು. ಪರೀಕ್ಷೆ ಬಳಿಕವೂ ಊರುಗಳಿಗೆ ಉಚಿತವಾಗಿ ಪ್ರಯಾಣಿಸಬಹುದು ಎಂಬ ನಿರ್ಧಾರವನ್ನು ಈಗಾಗಲೇ ಜಿಪಿಎಸ್‌ಎಸ್‌ಬಿ ತೆಗೆದುಕೊಂಡಿದೆ’ ಎಂದು ಸಂದೀಪ್ ಕುಮಾರ್ ಅವರು ತಿಳಿಸಿದರು.

ಭಾರತ ಯುವಪಡೆಗೆ 'ಮೊದಲ' ಕಿರೀಟ

19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್; ಮಿಂಚಿದ ಸಾಧು, ಪಾರ್ಶ್ವಿ, ಶಫಾಲಿ

ಟೈಟಸ್ ಸಾಧು

ಪೊಚೆಫ್‌ಸ್ಟ್ರೂಮ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ವಲಯಕ್ಕೆ ಭಾನುವಾರ 'ಮೊದಲ' ವಿಶ್ವಕಪ್ ಒಲಿಯಿತು.

ದೇಶದ ಸೀನಿಯರ್ ಮಹಿಳೆಯರ ವಿಭಾಗದಲ್ಲಿ ವಿಶ್ವಕಪ್ ಜಯಿಸುವ ಕನಸು ಇನ್ನೂ ಈಡೇರಿಲ್ಲ. ಆದರೆ ಇದೇ ಮೊದಲ ಬಾರಿ ನಡೆದ 19 ವರ್ಷದೊಳಗಿನವರ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸುವಲ್ಲಿ ಶಫಾಲಿ ವರ್ಮಾ ನಾಯಕತ್ವದ ತಂಡವು ಯಶಸ್ವಿಯಾಯಿತು.

ಶನಿವಾರವಷ್ಟೇ ತಮ್ಮ 19ನೇ ಜನ್ಮದಿನ ಆಚರಿಸಿಕೊಂಡಿದ್ದ ಶಫಾಲಿಗೆ ತಂಡದ ತಂಡದ ಬೌಲರ್‌ಗಳು ವಿಶ್ವಕಪ್ ಕಾಣಿಕೆ ನೀಡಿದರು. ಭಾರತ ತಂಡವು ಇಂಗ್ಲೆಂಡ್ ವಿರುದ್ಧ 7 ವಿಕೆಟ್‌ಗಳಿಂದ ಸುಲಭ ಜಯ ಸಾಧಿಸಲು ಮಧ್ಯಮವೇಗಿ ಟೈಟಸ್ ಸಾಧು ಮತ್ತು ಲೆಗ್‌ಸ್ಪಿನ್ನರ್ ಪಾರ್ಶ್ವಿ ಚೋಪ್ರಾ ಕಾರಣರಾದರು.

ಇತ್ತೀಚೆಗಷ್ಟೇ ನಿವೃತ್ತಿ ಘೋಷಿಸಿದ ಜೂಲನ್ ಗೋಸ್ವಾಮಿ ಅವರ ಸ್ಥಾನ ತುಂಬುವ ಸಮರ್ಥ ಬೌಲರ್ ಎಂಬ ಭರವಸೆ ಮೂಡಿಸಿರುವ ಸಾಧು (4-0-6-2) ಅಮೋಘ ಬೌಲಿಂಗ್ ಮಾಡಿದರು. ಅವರಿಗೆ ಪಾರ್ಶ್ವಿ (13ಕ್ಕೆ2) ಹಾಗೂ ಅರ್ಚನಾ ದೇವಿ (17ಕ್ಕೆ2) ಅವರಿಂದ ಉತ್ತಮ ಬೆಂಬಲ ದೊರೆಯಿತು. ಇದರಿಂದಾಗಿ ಟಾಸ್ ಗೆದ್ದು ಫೀಲ್ಡಿಂಗ್ ಮಾಡುವ ಭಾರತದ ನಿರ್ಧಾರ ಫಲಪ್ರದವಾಯಿತು. ಇಂಗ್ಲೆಂಡ್ ತಂಡವು 17.1 ಓವರ್‌ಗಳಲ್ಲಿ 68 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಭಾರತವು 14 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 69 ರನ್ ಗಳಿಸಿ ಜಯಿಸಿತು.

ರಿಯಾನಾ ಮೆಕ್‌ಡೋನಾಲ್ಡ್ ಗೇ (19; 24 ಎ) ಇಂಗ್ಲೆಂಡ್ ತಂಡದ ಪರ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆದರು. ಮನ್ನತ್ ಕಶ್ಯಪ್, ಶಫಾಲಿ ವರ್ಮಾ ಮತ್ತು ಸೋನಂ ಯಾದವ್ ಕೂಡ ತಲಾ ಒಂದು ವಿಕೆಟ್ ಗಳಿಸಿ ಎದುರಾಳಿ ತಂಡಕ್ಕೆ ಕಡಿವಾಣ ಹಾಕಿದರು.

ಗುರಿ ಬೆನ್ನಟ್ಟಿದ ಭಾರತ ತಂಡದ ಇನಿಂಗ್ಸ್ ಆರಂಭಿಸಿದ ಶಫಾಲಿ ಒಂದು ಸಿಕ್ಸರ್ ಮತ್ತು ಬೌಂಡರಿ ಗಳಿಸಿದರು. ವೇಗವಾಗಿ ಗುರಿ ಮುಟ್ಟುವ ಇರಾದೆಯಲ್ಲಿ ಬ್ಯಾಟ್ ಬೀಸಿದರು. ಆದರೆ, ಮೂರನೇ ಓವರ್‌ನಲ್ಲಿ ಔಟಾದರು. ಶ್ವೇತಾ ಶೆಹ್ರಾವತ್ ನಾಲ್ಕನೇ ಓವರ್‌ನಲ್ಲಿ ನಿರ್ಗಮಿಸಿದರು. ಈ ಹಂತದಲ್ಲಿ ಜೊತೆಗೂಡಿದ ಸೌಮ್ಯಾ ತಿವಾರಿ (ಅಜೇಯ 24) ಮತ್ತು ಗೊಂಗಡಿ ತ್ರಿಶಾ (24 ರನ್) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಪಂದ್ಯದಲ್ಲಿ ಇನ್ನೂ ಆರು ಓವರ್‌ಗಳು ಬಾಕಿ ಇದ್ದಾಗಲೇ ತಂಡವು ಗುರಿ ಮುಟ್ಟಿತು.

₹ 5 ಕೋಟಿ ಬಹುಮಾನ

ವಿಶ್ವಕಪ್ ವಿಜೇತ ಭಾರತ ಯುವಪಡೆಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ₹ 5 ಕೋಟಿ ನಗದು ಬಹುಮಾನ ಘೋಷಿಸಿದೆ. 'ಭಾರತದಲ್ಲಿ ಮಹಿಳಾ ಕ್ರಿಕೆಟ್ ಉತ್ತಮ ಬೆಳವಣಿಗೆ ಕಾಣುತ್ತಿದೆ. ಈ ಗೆಲುವಿನಿಂದಾಗಿ ದೇಶದ ಕ್ರಿಕೆಟ್‌ಗೆ ಮತ್ತಷ್ಟು ಬಲ ಹೆಚ್ಚಿದೆ. ₹ 5 ಕೋಟಿ ಬಹುಮಾನ ಘೋಷಿಸಲು ಹರ್ಷಿಸುತ್ತೇನೆ' ಎಂದು ಕಾರ್ಯದರ್ಶಿ ಜಯ್ ಶಾ ಟ್ವೀಟ್ ಮಾಡಿದ್ದಾರೆ.

ಪ್ರಧಾನಿ ಸಂತಸ: ದೇಶದ ಪ್ರಧಾನಿ ನರೇಂದ್ರ ಮೋದಿ ಅವರು ವಿಜೇತ ತಂಡವನ್ನು ಅಭಿನಂದಿಸಿದ್ದಾರೆ. ಭಾರತ ಪುರುಷರ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ, ಮಾಜಿ ಕ್ರಿಕೆಟಿಗ ಹರಭಜನ್ ಸಿಂಗ್ ಸೇರಿದಂತೆ ಹಲವು ಖ್ಯಾತನಾಮರು ತಂಡವನ್ನು ಅಭಿನಂದಿಸಿದ್ದಾರೆ.

ಸ್ಕೋರ್ ಕಾರ್ಡ್

ಇಂಗ್ಲೆಂಡ್ 68 (17.1 ಓವರ್)

ಗ್ರೇಸ್ ಸಿ ತ್ರಿಶಾ ಬಿ ಅರ್ಚನಾ 4 (12ಎ), ಲಿಬರ್ಟಿ ಸಿ ಮತ್ತು ಬಿ ಸಾಧು 0 (2ಎ), ನಿಯಾಮ ಬಿ ಅರ್ಚನಾ 10 (8ಎ, 4X2), ಸೆರೆನ್ ಬಿ ಸಾಧು 3 (9ಎ), ರಿಯಾನಾ ಸಿ ಅರ್ಚನಾ ಬಿ ಪಾರ್ಶ್ವಿ 19 (24ಎ, 4X3), ಚಾರಿಸ್ ಎಲ್‌ಬಿಡಬ್ಲ್ಯು ಪಾರ್ಶ್ವಿ 2 (9ಎ), ಅಲೆಕ್ಸಾ ಸಿ ಸೋನಂ ಬಿ ಮನ್ನತ್ 11 (25ಎ, 4X1), ಜೋಸೈ ರನೌಟ್ (ಸೌಮ್ಯಾ) 4 (5ಎ), ಹನ್ನಾ ಸ್ಟಂಪ್ಡ್ ರಿಚಾ ಬಿ ಶಫಾಲಿ 0 (1ಎ), ಸೋಫಿಯಾ ಸಿ ಮತ್ತು ಬಿ ಸೋನಂ 11 (7ಎ, 4X2), ಎಲ್ಲಿ ಔಟಾಗದೆ 0 (2ಎ)

ಇತರೆ 4 (ನೋಬಾಲ್ 1, ವೈಡ್ 3)

ವಿಕೆಟ್ ಪತನ: 1-1 (ಲಿಬರ್ಟಿ ಹೀಪ್, 0.4), 2-15 (ನಿಯಾಮ ಹಾಲಂಡ್, 3.3), 3-16 (ಗ್ರೇಸ್ ಸ್ಕ್ರಿವೆನ್ಸ್, 3.6), 4-22 (ಸೆರೆನ್ ಸ್ಮೇಲ್, 6.2), 5-39 (ಚಾರಿಸ್ ಪೇವಲಿ 9.6), 6-43 (ರಿಯಾನಾ ಮೆಕ್‌ಡೊನಾಲ್ಡ್ ಗೇ, 11.1), 7-53 (ಜೋಸೈ ಗ್ರೋವ್ಸ್, 13.5), 8-53 (ಹನ್ನಾ ಬೇಕರ್, 14.1), 9-68 (ಅಲೆಕ್ಸಾ ಸ್ಟೋನ್‌ಹೌಸ್, 16.4), 10-68 (ಸೋಫಿಯಾ ಸ್ಮೇಲ್, 17.1)

ಬೌಲಿಂಗ್: ಟೈಟಸ್ ಸಾಧು 4-0-6-2, ಅರ್ಚನಾ ದೇವಿ 3-0-17-2, ಪಾರ್ಶ್ವಿ ಚೋಪ್ರಾ 4-0-13-2, ಮನ್ನತ್ ಕಶ್ಯಪ್ 3-0-13-1, ಶಫಾಲಿ ವರ್ಮಾ 2-0-16-1, ಸೋನಂ ಯಾದವ್ 1.1-0-3-1

ಭಾರತ 3ಕ್ಕೆ 69 (14 ಓವರ್)

ಶಫಾಲಿ ಸಿ ಸ್ಟೋನ್‌ಹೌಸ್ ಬಿ ಬೇಕರ್ 15 (11ಎ, 4X1, 6X1), ಶ್ವೇತಾ ಸಿ ಬೇಕರ್ ಬಿ ಗ್ರೇಸ್ 5 (6ಎ, 4X1), ಸೌಮ್ಯಾ ಔಟಾಗದೆ 24 (37ಎ, 4X3), ತ್ರಿಶಾ ಬಿ ಸ್ಟೋನ್‌ಹೌಸ್ 24 (29ಎ, 4X3), ಹೃಷಿತಾ ಔಟಾಗದೆ 0 (1ಎ)

ಇತರೆ 1 (ವೈಡ್ 1)

ವಿಕೆಟ್ ಪತನ: 1-16 (ಶಫಾಲಿ ವರ್ಮಾ, 2.1), 2-20 (ಶ್ವೇತಾ ಶೆಹ್ರಾವತ್, 3.4), 3-66 (ಗೊಂಗಡಿ ತ್ರಿಶಾ, 12.5)

ಬೌಲಿಂಗ್: ಹನ್ನಾ ಬೇಕರ್ 4-1-13-1, ಸೋಫಿಯಾ ಸ್ಮೇಲ್ 2-0-16-0, ಗ್ರೇಸ್ ಸ್ಕ್ರಿವೆನ್ಸ್ 3-0-13-1, ಜೋಸೈ ಗ್ರೋವ್ಸ್ 2-0-9-0, ಅಲೆಕ್ಸಾ ಸ್ಟೋನ್‌ಹೌಸ್ 2-0-8-1, ಎಲ್ಲಿ ಆ್ಯಂಡರ್ಸನ್ 1-0-10-0

ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಜಯ ಮತ್ತು ಪ್ರಶಸ್ತಿ

ಪ್ರಶಸ್ತಿ ವಿಜೇತ ಜರ್ಮನಿ ಆಟಗಾರರ ಸಂಭ್ರಮ– ಪಿಟಿಐ ಚಿತ್ರ

ಹಾಕಿ: ಜರ್ಮನಿಗೆ ವಿಶ್ವಕಪ್

ಭುವನೇಶ್ವರ (ಪಿಟಿಐ): ಜರ್ಮನಿ ತಂಡವು ಬೆಲ್ಜಿಯಂ ತಂಡವನ್ನು ಪರಾಭವಗೊಳಿಸಿ ಮೂರನೇ ಬಾರಿ ವಿಶ್ವಕಪ್ ಹಾಕಿ ಟೂರ್ನಿಯ ಪ್ರಶಸ್ತಿ ಜಯಿಸಿತು.

ಭಾನುವಾರ ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸಡನ್ ಡೆತ್‌ನಲ್ಲಿ ಜರ್ಮನಿ 5–4ರಿಂದ ಬೆಲ್ಜಿಯಂ ತಂಡಕ್ಕೆ ಸೋಲುಣಿಸಿತು.

ಈ ಮೊದಲು ಜರ್ಮನಿ 2002 ಮತ್ತು 2006ರಲ್ಲಿ ಪ್ರಶಸ್ತಿ ಜಯಿಸಿತ್ತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಮೂರು ಗೋಲು ಗಳಿಸಿದ್ದವು. ಜರ್ಮನಿ ಪರ ನಿಕ್ಲಾಸ್ ವೆಲ್ಲೆನ್ (29ನೇ ನಿಮಿಷ), ಗೊಂಜಾಲೊ ಪೆಲ್ಲಾಟ್ (41ನೇ ನಿ.) ಮತ್ತು ನಾಯಕ ಮ್ಯಾಟ್ ಗ್ರಾಂಬಶ್ ನಿಗದಿತ ಅವಧಿಯಲ್ಲಿ ಗೋಲು ಗಳಿಸಿದರು. ಬೆಲ್ಜಿಯಂ ತಂಡಕ್ಕಾಗಿ ಫ್ಲಾರೆಂಟ್ ವ್ಯಾನ್ ಅಬೆಲ್ ಫ್ಲಾರೆಂಟ್ (10ನೇ ನಿ.), ಟಾಂಗಿ ಕಾಸಿನ್ಸ್ (11ನೇ ನಿ.) ಮತ್ತು ಟಾಮ್ ಬೂನ್ (59ನೇ ನಿ.) ಗೋಲು ಹೊಡೆದರು.

ನೆದರ್ಲೆಂಡ್ಸ್ ತಂಡಕ್ಕೆ ಕಂಚು: ನಾಯಕ ಥಿಯರಿ ಬ್ರಿಂಕ್‌ಮನ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ನೆದರ್ಲೆಂಡ್ಸ್ ತಂಡವು ಆಸ್ಟ್ರೇಲಿಯಾವನ್ನು ಮಣಿಸಿ ಟೂರ್ನಿಯಲ್ಲಿ ಕಂಚಿನ ಪದಕ ಜಯಿಸಿತು.

ಭಾನುವಾರ ಮೂರನೇ ಸ್ಥಾನಕ್ಕಾಗಿ ಇಲ್ಲಿ ನಡೆದ ಪಂದ್ಯದಲ್ಲಿ ನೆದರ್ಲೆಂಡ್ಸ್ 3–1ರಿಂದ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ತಂಡಕ್ಕೆ ಸೋಲುಣಿಸಿತು.

ಬ್ರಿಂಕ್‌ಮನ್ 35 ಮತ್ತು 40ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದರು. ಪೆನಾಲ್ಟಿ ಕಾರ್ನರ್ ಪರಿಣತ ಜಿಪ್ ಜಿನ್ಸೆನ್ (33ನೇ ನಿ.) ತಂಡದ ಇನ್ನೊಂದು ಗೋಲು ಗಳಿಸಿದರು. ಆಸ್ಟ್ರೇಲಿಯಾ ತಂಡಕ್ಕಾಗಿ ಜೆರೆಮಿ ಹೇವರ್ಡ್ 13ನೇ ನಿಮಿಷದಲ್ಲಿ ಗೋಲು ಹೊಡೆದರು.

ಭಾರತದ ಅರ್ಷದೀಪ್ ಸಿಂಗ್ ಬೌಲಿಂಗ್ ವೈಖರಿ– ಎಎಫ್‌ಪಿ ಚಿತ್ರ

ಕ್ರಿಕೆಟ್: ನ್ಯೂಜಿಲೆಂಡ್ ವೀರೋಚಿತ ಹೋರಾಟ; ಬೌಲರ್‌ಗಳ ಪಾರಮ್ಯ

ಹಾರ್ದಿಕ್ ಬಳಗಕ್ಕೆ ರೋಚಕ ಜಯ

ಲಖನೌ (ಪಿಟಿಐ): ಹಾರ್ದಿಕ್ ಪಾಂಡ್ಯ ನಾಯಕತ್ವ ಭಾರತ ತಂಡವು ಭಾನುವಾರ ರಾತ್ರಿ ನೂರು ರನ್‌ಗಳ ಗೆಲುವಿನ ಗುರಿ ತಲುಪಲು ಹರಸಾಹಸಪಟ್ಟಿತು. ಇಲ್ಲಿ ನಡೆದ ಟಿ20 ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ಬೌಲರ್‌ಗಳ ದಿಟ್ಟ ಪ್ರತಿರೋಧವನ್ನು ಅಂತೂ ಮೀರಿ ನಿಂತ ಆತಿಥೇಯ ತಂಡವು ರೋಚಕ ಜಯ ಸಾಧಿಸಿತು.

ಏಕನಾ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ನ್ಯೂಜಿಲೆಂಡ್ ಬ್ಯಾಟಿಂಗ್ ಮಾಡಿತು. ನ್ಯೂಜಿಲೆಂಡ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 99 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ 19.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 101 ರನ್ ಗಳಿಸಿ ಗೆದ್ದಿತು. ಮೂವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದ ಆತಿಥೇಯ ತಂಡವು ಪ್ರವಾಸಿ ಬಳಗದ ಲೆಕ್ಕಾಚಾರವನ್ನು ವಿಫಲಗೊಳಿಸಿತು. ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿತು. ಹೆಚ್ಚು ಎತ್ತರಕ್ಕೆ ಪುಟಿಯದೇ ತಿರುವು ಪಡೆದು ಬರುತ್ತಿದ್ದ ಎಸೆತಗಳನ್ನು ಆಡುವುದು ಬ್ಯಾಟರ್‌ಗಳಿಗೆ ಸವಾಲಾಗಿತ್ತು.

ಇದರ ಲಾಭ ಗಳಿಸಿದ ಭಾರತದ ಬೌಲರ್‌ಗಳು ಮಿಂಚಿದರು. ಕಿವೀಸ್ ತಂಡದ ಯಾವುದೇ ಬ್ಯಾಟರ್ ಹೆಚ್ಚು ಎಸೆತ ಗಳನ್ನು ಆಡಲು ಬಿಡಲಿಲ್ಲ. ನಾಯಕ ಮಿಚೆಲ್ ಸ್ಯಾಂಟನರ್ (19; 23ಎ) ಅವರೇ ಈ ಪಂದ್ಯದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಕಿವೀಸ್ ಆಟಗಾರನಾದರು.

ಆದರೆ, ಚಳಿಗಾಲದ ರಾತ್ರಿಗೆ ಬಿಸಿಯೇರಿದ್ದು ಕಿವೀಸ್ ಬೌಲರ್‌ಗಳ ಶಿಸ್ತಿನ ದಾಳಿಯಿಂದಾಗಿ. ಭಾರತದ ಆರಂಭಿಕ ಜೋಡಿ ಶುಭಮನ್ ಗಿಲ್ ಮತ್ತು ಇಶಾನ್ ಕಿಶನ್ ಅಬ್ಬರಿಸಲಿಲ್ಲ. ತಂಡದ ಖಾತೆಗೆ 46 ರನ್‌ಗಳು ಸೇರುವ ಹೊತ್ತಿಗೆ ಇಬ್ಬರೂ ಪೆವಿಲಿಯನ್‌ಗೆ ಮರಳಿದ್ದರು. ರಾಹುಲ್ ತ್ರಿಪಾಠಿ ತಮಗೆ ಸಿಕ್ಕ ಅವಕಾಶವನ್ನು ಬಳಸಿಕೊಳ್ಳಲಿಲ್ಲ.

ಸೂರ್ಯಕುಮಾರ್ ಯಾದವ್ ಆಟದಲ್ಲಿ ಎಂದಿನ ಬಿಸುಪು ಕಾಣಲಿಲ್ಲ. ಎರಡು ಜೀವದಾನ ಲಭಿಸಿದರೂ ಅವರ ಆಟದ ವೇಗ ಹೆಚ್ಚಲಿಲ್ಲ. ಇನ್ನೊಂದೆಡೆ ಚೆನ್ನಾಗಿ ಆಡುತ್ತಿದ್ದ ವಾಷಿಂಗ್ಟನ್ ಸುಂದರ್ 15ನೇ ಓವರ್‌ನಲ್ಲಿ ರನೌಟ್ ಆದರು. ಕ್ರೀಸ್‌ಗೆ ಬಂದ ಹಾರ್ದಿಕ್ ವಿಕೆಟ್ ಪತನ ತಡೆಯಲು ಆದ್ಯತೆ ಕೊಟ್ಟರು. ಸೂರ್ಯ ಕೂಡ ಎಚ್ಚರಿಕೆಯಿಂದ ಆಡಿದರು.

ಕಿವೀಸ್ ಬೌಲರ್‌ಗಳು ಮತ್ತಷ್ಟು ಒತ್ತಡ ಹೇರಿದರು. ಸ್ಪಿನ್ ಬೌಲರ್‌ಗಳಿಗೆ ನೆರವು ನೀಡಿದ ಪಿಚ್‌ನ ಸಂಪೂರ್ಣ ಲಾಭ ಪಡೆದರು. ಕೊನೆಯ ಓವರ್‌ನಲ್ಲಿ ಆರು ರನ್‌ಗಳ ಅಗತ್ಯವಿದ್ದಾಗಲೂ ಸೂರ್ಯ ಮತ್ತು ಹಾರ್ದಿಕ್ ಅವರಿಗೆ ದೊಡ್ಡ ಹೊಡೆತಗಳನ್ನು ಆಡಲು ಬೌಲರ್ ಬ್ಲೇರ್ ಟಿಕ್ನರ್ ಅವಕಾಶ ಕೊಡಲಿಲ್ಲ. ಈ ಓವರ್‌ನ ಐದನೇ ಎಸೆತ ದಲ್ಲಿ ಚೆಂಡನ್ನು ಬೌಂಡರಿಗೆರೆ ದಾಟಿಸಿದ ಸೂರ್ಯ ನಿಟ್ಟುಸಿರುಬಿಟ್ಟರು. ಉಸಿರು ಬಿಗಿಹಿಡಿದಿದ್ದ ಪ್ರೇಕ್ಷಕರೂ ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 99 (ಚಾಪ್ಮನ್ 14, ಮೈಕಲ್ ಬ್ರೇಸ್‌ವೆಲ್ 14, ಮಿಚೆಲ್ ಸ್ಯಾಂಟನರ್ ಔಟಾಗದೆ 19,ಅರ್ಷದೀಪ್ ಸಿಂಗ್ 7ಕ್ಕೆ2). ಭಾರತ: 19.5 ಓವರ್‌ಗಳಲ್ಲಿ 4 ವಿಕೆಟ್‌ಗೆ 101 (ಇಶಾನ್ ಕಿಶನ್ 19, ರಾಹುಲ್ ತ್ರಿಪಾಠಿ 13, ಸೂರ್ಯಕುಮಾರ್ ಯಾದವ್ ಔಟಾಗದೆ 26, ಹಾರ್ದಿಕ್ ಪಾಂಡ್ಯ ಔಟಾಗದೆ 15; ಮೈಕಲ್ ಬ್ರೇಸ್‌ವೆಲ್ 13ಕ್ಕೆ 1, ಇಶ್ ಸೋಧಿ 24ಕ್ಕೆ 1) ಫಲಿತಾಂಶ: ಭಾರತಕ್ಕೆ ಆರು ವಿಕೆಟ್ ಜಯ

ಹಾಕಿ: ಒಲಿಂಪಿಕ್ಸ್ ಅರ್ಹತೆಗೆ ಏಷ್ಯನ್ ಗೇಮ್ಸ್‌ನಲ್ಲಿ ಅವಕಾಶ

ಭುವನೇಶ್ವರ (ಪಿಟಿಐ): ಚೀನಾದ ಹ್ಯಾಂಗ್‌ಜೌನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಹಾಕಿ ಸ್ಪರ್ಧೆಗಳು 2024ರ ಒಲಿಂಪಿಕ್ಸ್ ಅರ್ಹತಾ ಸ್ಪರ್ಧೆಯಾಗಲಿವೆ ಎಂದು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಅಧ್ಯಕ್ಷ ಇಕ್ರಂ ತಯ್ಯಬ್ ಭಾನುವಾರ ಹೇಳಿದ್ದಾರೆ.

ಏಷ್ಯನ್ ಕ್ರೀಡಾಕೂಟವು ಕಳೆದ ವರ್ಷ ಹ್ಯಾಂಗ್‌ಜೌನಲ್ಲಿ ನಿಗದಿಯಾಗಿದ್ದವು. ಆದರೆ ಕೋವಿಡ್ ಸೋಂಕು ಹೆಚ್ಚಳದ ಕಾರಣ ಈ ವರ್ಷದ ಸೆಪ್ಟೆಂಬರ್ 23ರಿಂದ ಅಕ್ಟೋಬರ್ 8ರವರೆಗೆ ನಡೆಸಲು ನಿರ್ಧರಿಸಲಾಗಿದೆ.

ತಯ್ಯಬ್ ಅವರು ಏಷ್ಯನ್ ಗೇಮ್ಸ್ ಸಮನ್ವಯ ಸಮಿತಿ ಸದಸ್ಯರಾಗಿದ್ದಾರೆ. 'ಮಾರ್ಚ್‌ನಲ್ಲಿ ನಾವು ಹ್ಯಾಂಗ್‌ಜೌನಲ್ಲಿ ಸಭೆ ಸೇರಲಿದ್ದೇವೆ. 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಈ ಕೂಟವು ಅರ್ಹತಾ ಕೂಟವಾಗಿದೆ' ಎಂದು ವಿಶ್ವಕಪ್ ಟೂರ್ನಿಯ ಫೈನಲ್‌ಗೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಇಕ್ರಂ ಅವರು ನುಡಿದರು.

ಜೊಕೊವಿಚ್‌ಗೆ 22ನೇ ಗ್ರ್ಯಾನ್‌ಸ್ಲಾಮ್ ಗರಿ

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ನನಸಾಗದ ಸಿಟ್ಸಿಪಸ್ ಮೊದಲ ಪ್ರಶಸ್ತಿ ಗೆಲುವಿನ ಕನಸು

ಮೆಲ್ಬರ್ನ್ (ಎಎಫ್‌ಪಿ/ರಾಯಿಟರ್ಸ್): ಸರ್ಬಿಯಾದ ನೊವಾಕ್ ಜೊಕೊವಿಚ್ ತಮ್ಮಲ್ಲಿ ಕಸುವು ಇನ್ನೂ ಕುಗ್ಗಿಲ್ಲ ಎಂಬುದನ್ನು ಸಾಬೀತುಪಡಿಸಿದರು. ಸೊಗಸಾದ ಆಟವಾಡಿದ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಟ್ಟರು. ಇದರೊಂದಿಗೆ 22ನೇ ಗ್ರ್ಯಾನ್‌ಸ್ಲಾಮ್ ಜಯಿಸಿ ಸ್ಪೇನ್‌ನ ರಫೆಲ್ ನಡಾಲ್ ಅವರ ಅತಿ ಹೆಚ್ಚು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲುವಿನ ದಾಖಲೆಯನ್ನು ಸರಿಗಟ್ಟಿದರು.

ರಾಡ್ ಲೇವರ್ ಅರೆನಾದಲ್ಲಿ ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಜೊಕೊವಿಚ್ 6-3, 7-6 (7/4), 7-6 (7/5)ರಿಂದ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಸ್ ಅವರನ್ನು ಮಣಿಸಿದರು. ಮೆಲ್ಬರ್ನ್ ಪಾರ್ಕ್‌ನಲ್ಲಿ ಹತ್ತನೇ ಬಾರಿ ಟ್ರೋಫಿ ಎತ್ತಿಹಿಡಿದರು. ಇದರೊಂದಿಗೆ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರುವುದನ್ನು ಖಚಿತಪಡಿಸಿದರು.

ಗೆಲುವಿನ ಬಳಿಕ ತನ್ನ ತಾಯಿಯನ್ನು ಆಲಂಗಿಸಲು ಪ್ಲೇಯರ್ಸ್ ಬಾಕ್ಸ್ ಹತ್ತಿದ ಜೊಕೊವಿಚ್ ಅವರಿಗೆ ಉಕ್ಕಿ ಬಂದ ಕಣ್ಣೀರು ನಿಯಂತ್ರಿಸಲಾಗಲಿಲ್ಲ. ಆನಂದದಿಂದ ನೆಲಕ್ಕುರುಳಿದರು.

ಕೊರೊನಾ ಲಸಿಕೆ ತೆಗೆದುಕೊಳ್ಳದ ಕಾರಣ 35 ವರ್ಷದ ಜೊಕೊವಿಚ್, ಕಳೆದ ಆವೃತ್ತಿಯಲ್ಲಿ ಆಡುವ ಅವಕಾಶ ಕಳೆದುಕೊಂಡಿದ್ದರು. ಈ ಟೂರ್ನಿಯಲ್ಲಿ ಮಂಡಿರಜ್ಜು ನೋವು ಮೀರಿ ಗೆಲುವು ಒಲಿಸಿಕೊಂಡರು. ಸರ್ಬಿಯಾ ಆಟಗಾರನಿಗೆ ಇದು ವೃತ್ತಿಜೀವನದ 93ನೇ ಪ್ರಶಸ್ತಿಯಾಗಿದೆ.

ಪ್ರಶಸ್ತಿ ವಿಜೇತ ನೊವಾಕ್ ಜೊಕೊವಿಚ್ ಮತ್ತು ರನ್ನರ್ಸ್ ಅಪ್ ಸ್ಟೆಫನೊಸ್ ಸಿಟ್ಸಿಪಸ್– ಎಎಫ್‌ಪಿ ಚಿತ್ರ

'ಪರಿಸ್ಥಿತಿಗಳನ್ನು ಪರಿಗಣಿಸಿದರೆ ನನಗೆ ಅತಿ ಹೆಚ್ಚು ಸವಾಲು ಎನಿಸಿದ ಟೂರ್ನಿಗಳಲ್ಲಿ ಇದೂ ಒಂದು. ಕಳೆದ ವರ್ಷ ಆಡಿರಲಿಲ್ಲ. ಈ ವರ್ಷ ನನ್ನನ್ನು ಮೆಲ್ಬರ್ನ್‌ನಲ್ಲಿ ಸ್ವಾಗತಿಸಿದ ಎಲ್ಲರಿಗೂ ಕೃತಜ್ಞತೆಗಳು. ಬಹುಶಃ ನನ್ನ ಜೀವನದ ದೊಡ್ಡ ವಿಜಯ ಇದು' ಎಂದು ಜೊಕೊವಿಚ್ ನುಡಿದರು.

ಈ ಸೋಲಿನೊಂದಿಗೆ, 24 ವರ್ಷದ ಸಿಟ್ಸಿಪಸ್ ಅವರ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯದ ಆಸೆ ಈಡೇರಲಿಲ್ಲ. ರ್‍ಯಾಂಕಿಂಗ್‌ನಲ್ಲಿ ಅವರು ಮೂರನೇ ಸ್ಥಾನಕ್ಕೇರಲಿದ್ದಾರೆ.

ಉತ್ತಮ ಪೈಪೋಟಿ: ಇಲ್ಲಿ 33ನೇ ಗ್ರ್ಯಾನ್‌ಸ್ಲಾಮ್ ಫೈನಲ್ ಆಡಿದ ಸರ್ಬಿಯಾ ಆಟಗಾರನಿಗೆ ಸಿಟ್ಸಿಪಾಸ್ ಉತ್ತಮ ಪೈಪೋಟಿಯನ್ನೇ ನೀಡಿದರು. ತಮ್ಮ ಎರಡನೇ ಗ್ರ್ಯಾನ್‌ಸ್ಲಾಮ್ ಫೈನಲ್‌ನಲ್ಲಿ ಕಣಕ್ಕಿಳಿದಿದ್ದ ಗ್ರೀಸ್ ಆಟಗಾರ ಅಲ್ಪ ಒತ್ತಡದಲ್ಲಿದ್ದಂತೆ ಕಂಡರು.

ಅತಿ ಹೆಚ್ಚು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತರು		
ಆಟಗಾರ	ದೇಶ	ಪ್ರಶಸ್ತಿ
ರಫೆಲ್ ನಡಾಲ್	ಸ್ಪೇನ್	22
ನೊವಾಕ್ ಜೊಕೊವಿಚ್	ಸರ್ಬಿಯಾ	22
ರೋಜರ್ ಫೆಡರರ್	ಸ್ವಿಟ್ಜರ್ಲೆಂಡ್	20
ಪೀಟ್ ಸಾಂಪ್ರಾಸ್	ಅಮೆರಿಕ	14
ರಾಯ್ ಎಮರ್ಸನ್	ಆಸ್ಟ್ರೇಲಿಯಾ	12

ಜೊಕೊವಿಚ್ ಜಯಿಸಿದ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳು

ಟೂರ್ನಿ	ವರ್ಷ
ಆಸ್ಟ್ರೇಲಿಯಾ ಓಪನ್ (10)	2008, 2011, 2012, 2013, 2015, 2016, 2019, 2020, 2021, 2023
ವಿಂಬಲ್ಡನ್ (7)	2011, 2014, 2015, 2018, 2019, 2021, 2022
ಅಮೆರಿಕ ಓಪನ್ (3)	2011, 2015, 2018
ಫ್ರೆಂಚ್ ಓಪನ್ (2)	2016, 2021

ಫೈನಲ್ ಪಂದ್ಯದ ಅಂಕಿ ಅಂಶ

ಜೊಕೊವಿಚ್		ಸಿಟ್ಸಿಪಸ್
7	ಏಸ್	15
3	ಡಬಲ್ ಫಾಲ್ಟ್ಸ್	3
36	ವಿನ್ನರ್ಸ್	40
112	ಒಟ್ಟು ಪಾಯಿಂಟ್ಸ್	84

ಅವಧಿ: 2 ತಾಸು 56 ನಿಮಿಷ

ಮೊದಲ ಸೆಟ್‌ನಲ್ಲಿ, ಸಿಟ್ಸಿಪಸ್ ಅವರ ಮೊದಲ ಸರ್ವ್‌ನಲ್ಲಿ ಜೊಕೊವಿಚ್ ಎರಡು ಬ್ರೇಕ್ ಪಾಯಿಂಟ್ಸ್ ಗಳಿಸಿದರು. ಗ್ರೀಸ್ ಆಟಗಾರನ ಡಬಲ್ ಫಾಲ್ಟ್‌ಗಳ ಲಾಭ ಪಡೆದ ಜೊಕೊವಿಚ್ ಕೇವಲ 36 ನಿಮಿಷಗಳಲ್ಲಿ ಸೆಟ್ ವಶಪಡಿಸಿಕೊಂಡರು.

ಆದರೆ ಎರಡನೇ ಸೆಟ್‌ನಲ್ಲಿ ಸಿಟ್ಸಿಪಸ್, ಸರ್ವ್‌ಗಳಲ್ಲಿ ಸುಧಾರಣೆ ಕಂಡುಕೊಂಡರು. ಮೊದಲ ಬ್ರೇಕ್ ಪಾಯಿಂಟ್ ಹಾಗೂ ಸೆಟ್ ಪಾಯಿಂಟ್ ಕೂಡ ಗಳಿಸಿದರು. ಆದರೆ ಟೈಬ್ರೇಕ್‌ವರೆಗೆ ಸಾಗಿದ ಸೆಟ್‌ನಲ್ಲಿ ತಮ್ಮ ಅನುಭವವನ್ನು ಸಾಣೆ ಹಿಡಿದ ಜೊಕೊವಿಚ್ ಗೆಲುವಿನ ನಗೆ ಬೀರಿದರು.

ಒತ್ತಡದ ನಡುವೆಯೂ, ಮೂರನೇ ಸೆಟ್‌ನಲ್ಲಿ ಜೊಕೊವಿಚ್ ಅವರ ಆರಂಭಿಕ ಸರ್ವ್ ಬ್ರೇಕ್ ಮಾಡಿದ ಸಿಟ್ಸಿಪಸ್, ಪುಟಿದೇಳುವ ಸೂಚನೆ ನೀಡಿದರು. ಆದರೆ ರ್‍ಯಾಲಿಗಳಲ್ಲಿ ಹಿಡಿತ ಬಿಟ್ಟುಕೊಟ್ಟ ಅವರು ಸೋಲೊಪ್ಪಿಕೊಂಡರು.

ಭಾರತ– ದಕ್ಷಿಣ ಆಫ್ರಿಕಾ ಪಂದ್ಯ ರದ್ದು

ಈಸ್ಟ್ ಲಂಡನ್, ದಕ್ಷಿಣ ಆಫ್ರಿಕಾ (ಪಿಟಿಐ): ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಇಲ್ಲಿ ಭಾನುವಾರ ನಡೆಯಬೇಕಿದ್ದ ಟಿ20 ತ್ರಿಕೋನ ಸರಣಿಯ ಪಂದ್ಯ ಮಳೆಯಿಂದಾಗಿ ರದ್ದಾಯಿತು.

ಸರಣಿಯಲ್ಲಿ ಈಗಾಗಲೇ ಎರಡೂ ತಂಡಗಳೂ ಫೈನಲ್ ತಲುಪಿದ್ದು, ಗುರುವಾರ ಮುಖಾಮುಖಿಯಾಗಲಿವೆ. ಮೊದಲು ಬ್ಯಾಟಿಂಗ್ ಮಾಡುತ್ತಿದ್ದ ಭಾರತ, ಮಳೆಯಿಂದಾಗಿ ಪಂದ್ಯ ಸ್ಥಗಿತಗೊಂಡಾಗ 2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 4 ರನ್ ಗಳಿಸಿತ್ತು.

ಬ್ಯಾಡ್ಮಿಂಟನ್: ಸಂಜೀತ್, ಆರ್ನಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜೀತ್ ಹಾಗೂ ಆರ್ನಾ ಸಾಗರ್ ಅವರು 'ರೆಸಿಡೆನ್ಸ್ ಆಫ್ ಕನಕಪುರ ರೋಡ್' ಅವರ ಆಶ್ರಯದಲ್ಲಿ ಆಯೋಜಿಸಲಾದ ಫೆಡರೇಷನ್ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ಕ್ರಮವಾಗಿ 13 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಭಾನುವಾರ ಸೆಲನೈಟ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ನಡೆದ ಪಂದ್ಯಗಳಲ್ಲಿ ಸಂಜೀತ್ ಮತ್ತು ಆರ್ನಾ ಕ್ರಮವಾಗಿ ಎ. ಮನ್ಸೂರ್ ಮತ್ತು ಆನ್ಯಾ ಅವರನ್ನು ಸೋಲಿಸಿದರು.

13 ವರ್ಷದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಮುರಳಿ- ಸಮರ್ಥ ಮತ್ತು ಬಾಲಕಿಯರ ಡಬಲ್ಸ್‌ನಲ್ಲಿ ನಿಧಿ-ಸಮಿತಾ ಪ್ರಶಸ್ತಿ ಗೆದ್ದರು.

20 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಆದಿತ್ಯ, ಬಾಲಕಿಯರಲ್ಲಿ ದೀಕ್ಷಾ, ಬಾಲಕರ ಡಬಲ್ಸ್‌ನಲ್ಲಿ ಸುಹಾಸ್-ಅಭಿಜೀತ್, ಬಾಲಕಿಯರಲ್ಲಿ ಹಂಸಿಕಾ- ಹಿಮಾನಿ, 30 ವರ್ಷದೊಳಗಿನ ಮಹಿಳೆಯರ ಸಿಂಗಲ್ಸ್‌ನಲ್ಲಿ ಧನಲಕ್ಷ್ಮಿ, ಡಬಲ್ಸ್‌ನಲ್ಲಿ ಗಾಯತ್ರಿ- ಧನಲಕ್ಷ್ಮಿ, ಪುರುಷರ ಡಬಲ್ಸ್‌ನಲ್ಲಿ ಸುಮುಖ್-ಅನ್ಮುಮನ್, 40 ವರ್ಷದೊಳಗಿನ ಮಹಿಳಾ ಸಿಂಗಲ್ಸ್‌ನಲ್ಲಿ ರಮ್ಯಾ, ಡಬಲ್ಸ್‌ನಲ್ಲಿ ಅಕ್ಷತಾ, ದಿವ್ಯಶ್ರೀ, 40 ವರ್ಷದೊಳಗಿನ ಮಹಿಳಾ ಸಿಂಗಲ್ಸ್‌ನಲ್ಲಿ ವಿದ್ಯಾಶ್ರೀ, ಡಬಲ್ಸ್‌ನಲ್ಲಿ ಸರಿತಾ-ವಿನುತಾ, ಪುರುಷರ ಡಬಲ್ಸ್‌ನಲ್ಲಿ ಆನಂದ್-ವಿಶ್ವನಾಥ್, 50 ವರ್ಷಕ್ಕಿಂತ ಮೇಲಿನ ಪುರುಷರ ಸಿಂಗಲ್ಸ್‌ನಲ್ಲಿ ಶ್ರೀಕಾಂತ್, ಡಬಲ್ಸ್‌ನಲ್ಲಿ ಸೆಂಥಿಲ್-ಸಂದೀಪ್ ಪ್ರಶಸ್ತಿ ಗೆದ್ದರು.

ಕಾರ್ತಿಕ್ ಡೋರ್ ಹಾಗೂ ವಿಂಡೋಸ್, ಯುನಿಚಿಟ್, ಆಸ್ಟ್ರಾ ಅಸ್ಪತ್ರೆ, ಈ ಟೂರ್ನಿಗೆ ಪ್ರಾಯೋಜಕತ್ವ ವಹಿಸಿದ್ದವು. ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಟೂರ್ನಿ ಉದ್ಘಾಟಿಸಿದ್ದರು.

ಟೂರ್ನಿಯಲ್ಲಿ ಪ್ರಶಸ್ತಿ ವಿಜೇತರ ಸಂಭ್ರಮ

ಚಾಮರಾಜನಗರ ಚಾಂಪಿಯನ್

ಮೈಸೂರು: ಚಾಮರಾಜನಗರ ಮಹಿಳಾ ತಂಡವು ರಾಜ್ಯಮಟ್ಟದ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿತು. ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಭಾನುವಾರ ನಡೆದ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಚಾಮರಾಜನಗರ 25–20, 21–25, 25–23,25–17ರಿಂದ ಮೈಸೂರು ವಿರುದ್ಧ ಗೆದ್ದಿತು.